ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 10 ಶುಕ್ರವಾರ 2024

45

ಸಂಪುಟ: 45 | ಸಂಚಿಕೆ: 24 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸದಿದ್ದರೆ ಜೂ.1ರಿಂದ ದಂಡ ವಸೂಲಿ

■ವರದಿ ಪುಟ–7

SSLC ಫಲಿತಾಂಶದಲ್ಲಿ ಭಾರಿ ಕುಸಿತ;

ಶೇ73.40 ತೇರ್ಗಡೆ

● ಬಾಗಲಕೋಟೆಯ ಅಂಕಿತಾ ಬಸಪ್ಪ 625ಅಂಕಕ್ಕೆ 625 ಗಳಿಸಿ ರಾಜ್ಯಕ್ಕೆ ಟಾಪರ್ ● ಬಾಲಕಿಯರೇ ಮೇಲುಗೈ; ಗ್ರಾಮೀಣ ವಿದ್ಯಾರ್ಥಿಗಳ ಪಾರುಪತ್ಯ ● ಉಡುಪಿ ಪ್ರಥಮ; ದಕ್ಷಿಣ ಕನ್ನಡ ದ್ವಿತೀಯ; ಶಿವಮೊಗ್ಗ ತೃತೀಯ; ಕೊಡಗು ನಾಲ್ಕನೇ; ಯಾದಗಿರಿಗೆ ಕೊನೆ ಸ್ಥಾನ ● ಮೈಸೂರು ಶೇ85.5; ಕೊಡಗು ಶೇ88.67; ಹಾಸನ ಶೇ86.28; ಮಂಡ್ಯ ಶೇ73.59; ಚಾ.ನಗರ ಶೇ 71.59 ಪಾಸ್

ಬೆಂಗಳೂರು, ಮೇ 9 (ಕೆಎಂಶಿ)– ಮಾರ್ಚ್–ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಭಾರಿ ಕುಸಿದಿದ್ದು, ಒಟ್ಟಾರೆ ಶೇ.73.40 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ವರ್ಷ ಶೇ.10ರಷ್ಟು ಫಲಿತಾಂಶ ಕುಸಿದಿದೆ. ಇದೇ ಮೊದಲ ಬಾರಿಗೆ ವೆಬ್ ಕಾಸ್ಟಿಂಗ್ ವಿಧಾನ ಪರಿಚಯಿಸಿದ್ದರಿಂದ ಒಟ್ಟಾರೆ ಫಲಿತಾಂಶದಲ್ಲಿ ಕುಸಿತ ಕಂಡಂತಾಗಿದೆ. ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಕಡಿಮೆಯಾಗಿರುವ ಫಲಿತಾಂಶವನ್ನು ಉತ್ತಮ ಪಡಿಸಲು ಸರ್ಕಾರ ನಿರ್ಧರಿಸಿ ಎಲ್ಲಾ ವಿಷಯಗಳಲ್ಲಿ ನೀಡುವ ಕೃಪಾಂಕಗಳನ್ನು ಆಕರ್ಷಿಸಲು ಪಡೆಯಬೇಕಾದ ಅರ್ಹ ಅಂಕಗಳನ್ನು ಶೇಕಡ 35ರಿಂದ 25ಕ್ಕೆ ಇಳಿಸಲಾಯಿತು.



ಬಾಗಲಕೋಟೆಯ ಅಂಕಿತಾ ಬಸಪ್ಪ 625ಅಂಕಕ್ಕೆ 625

ಕೃಪಾಂಕದ ಪ್ರಮಾಣವನ್ನು ಶೇಕಡ 10ರಿಂದ 20ಕ್ಕೆ ಹೆಚ್ಚಿಸಿದ್ದರಿಂದ ಒಟ್ಟಾರೆ ಶೇಕಡ 73.40 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಇಂದಿಲ್ಲಿ ಪ್ರಕಟಿಸಿದೆ. ಬಾಲಕರಿಗಿಂತ ಬಾಲಕಿಯರು ಶೇಕಡ 15ರಷ್ಟು ಹೆಚ್ಚು ತೇರ್ಗಡೆ ಹೊಂದಿದ್ದಾರೆ. ಒಟ್ಟಾರೆ 8,59,967 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇದರಲ್ಲಿ 6,31,204 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಬಾಲಕಿಯರು ಶೇಕಡ 81.11ರಷ್ಟು, ಬಾಲಕರು ಶೇಕಡ 65.90 ರಷ್ಟು ಮುಂದಿನ ●6ನೇ ಪುಟಕ್ಕೆ

ನಕಲು ಮಾಡಲು ಅವಕಾಶ ಸಿಗದಿದ್ದಕ್ಕೆ ಫಲಿತಾಂಶ ಕಡಿತ

ಈ ಬಾರಿ ನಕಲು ಮಾಡಲು ಅವಕಾಶ ಇಲ್ಲದಿದ್ದರಿಂದಲೇ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಕುಸಿಯಲು ಕಾರಣ ಎಂದು ಪರೀಕ್ಷಾ ಮಂಡಳಿ ಪರೋಕ್ಷವಾಗಿ ಹೇಳಿದೆ. ಇದೇ ಮೊದಲ ಬಾರಿಗೆ ಪರೀಕ್ಷಾ ಕೊಠಡಿ ಗಳಲ್ಲಿ ಸಿಸಿಟಿವಿ ಕ್ಯಾಮೆರಾ ಮತ್ತು ವೆಬ್‌ಕಾಸ್ಟಿಂಗ್ ಅಳವಡಿಸಿದ್ದರಿಂದ ನಕಲು ಮಾಡಲು ಹಾಗೂ ಕೊಠಡಿ ಮೇಲ್ವಿಚಾರಕರು ಸಣ್ಣ–ಪುಟ್ಟ ಸಮಸ್ಯೆ ಬಗೆಹರಿಸಲು ಸಾಧ್ಯವಾಗಲಿಲ್ಲ. ವೆಬ್‌ಕಾಸ್ಟಿಂಗ್‌ನಿಂದ ಪರೀಕ್ಷೆ ಕೊಠಡಿಗಳ ದೃಶ್ಯಾವಳಿಗಳನ್ನು ಮೇಲ್ವಿಚಾರಣೆ ಮಾಡಲು ಎಲ್ಲಾ ಜಿಲ್ಲೆಗಳಲ್ಲಿ ●6ನೇ ಪುಟಕ್ಕೆ

ಮಂಡ್ಯದಲ್ಲಿ ಇಬ್ಬರು ನೇಣಿಗೆ ಶರಣು; ವಿಷ ಸೇವಿಸಿದ ಚಿಕ್ಕೋಡಿ ವಿದ್ಯಾರ್ಥಿನಿ



ಲಿಖಿತ್



ಅಮೃತಾ

ಮಂಡ್ಯ,ಮೇ.9– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫೇಲ್ ಆಗಿದ್ದಕ್ಕೆ ಮಂಡ್ಯ ವಿದ್ಯಾರ್ಥಿ ಲಿಖಿತ್ ಮನನೊಂದು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದರೆ, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೂ ತಪ್ಪು ತಿಳುವಳಿಕೆಯಿಂದ ಫೇಲಾಗಿರುವುದಾಗಿ ಭಾವಿಸಿ ವಿದ್ಯಾರ್ಥಿನಿ ನೇಣಿಗೆ ಶರಣಾಗಿದ್ದಾಳೆ.

ಮತ್ತೊಂದು ಘಟನೆಯಲ್ಲಿ ಬೆಳಗಾವಿ ಜಿಲ್ಲೆ ಚಿಕ್ಕೋಡಿಯಲ್ಲಿ ಫೇಲಾದ ವಿದ್ಯಾರ್ಥಿನಿ ವಿಷ ಸೇವನೆ ಮಾಡಿದ್ದಾಳೆ. ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ತಗ್ಗಹಳ್ಳಿ ಗ್ರಾಮದ ಮಹದೇವು ಎನ್ನುವವರ ಪುತ್ರ ಲಿಖಿತ್ (15) ಎಸ್ಸೆಸ್ಸೆಲ್ಸಿ ಫಲಿತಾಂಶ ನೋಡಲು ಹೋಗಿದ್ದಾನೆ. ಎರಡು ವಿಷಯದಲ್ಲಿ ಅನುತ್ತೀರ್ಣಗೊಂಡಿದ್ದಿಯಾ ಎಂದು ಶಿಕ್ಷಕರು ತಿಳಿಸಿದ್ದಾರೆ. ಈ ವೇಳೆ ತುಂಬಾ ಬೇಸರಗೊಂಡಿದ್ದ ಲಿಖಿತ್‌ನನ್ನು ಶಿಕ್ಷಕರು ಸಮಾಧಾನ ಮಾಡಿ, ಮುಂದಿನ ಪರೀಕ್ಷೆಗೆ ಸಿದ್ಧತೆ ನಡೆಸುವಂತೆ ಧೈರ್ಯ ತುಂಬಿ ಮನೆಗೆ ಕಳುಹಿಸಿದ್ದರು. ●6ನೇ ಪುಟಕ್ಕೆ

ಬಿವಿಬಿಯ ಜಾಹ್ನವಿ, ಸದ್ವಿದ್ಯಾದ ಧನ್ವಿ 625ಕ್ಕೆ 623 ಅಂಕ ಗಳಿಸಿ ಮೈಸೂರಿಗೆ ಪ್ರಥಮ; ರಾಜ್ಯಕ್ಕೆ ಮೂರನೇ ಸ್ಥಾನ

● 19ರಿಂದ 7ನೇ ಸ್ಥಾನಕ್ಕೆ ಬಡ್ತಿ ಪಡೆದ ಮೈಸೂರು ಜಿಲ್ಲೆ ● 50ಕ್ಕೂ ಹೆಚ್ಚು ಮಂದಿ 600ಕ್ಕೂ ಅಧಿಕ ಅಂಕ ಗಳಿಕೆ



ವಿಜಯನಗರದ ಸದ್ವಿದ್ಯಾ ಶಾಲೆಯ ಡಿ.ಎಸ್.ಧನ್ವಿ(623), ಜೆ.ದಿಶಾ ಶರ್ಮಾ(621), ಮಾನ್ಯ(611) ಅವರನ್ನು ಶಾಲೆಯ ಮುಖ್ಯೋಪಾಧ್ಯಾಯಿನಿ ಮಮತಾ ಅಭಿನಂದಿಸಿದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಲಾ 619 ಅಂಕ ಪಡೆದ ಮರಿಮಲ್ಲಪ್ಪ ಶಾಲೆಯ ವಿದ್ಯಾರ್ಥಿಗಳಾದ ಅವಳಿ ಸಹೋದರಿಯರು ಅಂಜಲಿ ವಿ.ಶಾಸ್ತ್ರಿ, ಅದಿತಿ ವಿ.ಶಾಸ್ತ್ರಿ.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಶಾಲೆಯ ಕಾವ್ಯಶ್ರೀ 621, ಶ್ರೀಗೌರಿ ಎಸ್.ಕುಮಾರ್ 620, ಪ್ರಜ್ಞಾ ಆನಂದ್ 610, ವಿದ್ಯಾ ಎಂ. 609, ನಿತಿನ್ ಎಂ. 614 ಅವರನ್ನು ಶಾಲೆಯ ಮುಖ್ಯೋಪಾಧ್ಯಾಯ ರಾಮಚಂದ್ರ ಭಟ್ ಅಭಿನಂದಿಸಿದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 623 ಅಂಕ ಗಳಿಸಿದ ಭಾರತೀಯ ವಿದ್ಯಾಭವನದ ವಿದ್ಯಾರ್ಥಿನಿ ಎಸ್.ಜಾಹ್ನವಿ ಅವರನ್ನು ಬಿವಿಬಿ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಶಾಲೆಯ ಉಪ ಪ್ರಾಂಶುಪಾಲರಾದ ಪ್ರಫುಲ್ಲಾ ಅಭಿನಂದಿಸಿದರು.

ಮೈಸೂರು, ಮೇ 9(ಎಂಟಿವೈ)– ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು, ಮೈಸೂರಿನ ಭಾರತೀಯ ವಿದ್ಯಾಭವನದ (ಬಿವಿಬಿ) ಎಸ್.ಜಾಹ್ನವಿ ಹಾಗೂ ವಿಜಯನಗರದ ಸದ್ವಿದ್ಯಾ ಸೆಮಿ ರೆಸಿ ಡೆನ್ಷಿಯಲ್ ಶಾಲೆಯ ಡಿ.ಎಸ್.ಧನ್ವಿ 625ಕ್ಕೆ 623 ಅಂಕ ಗಳಿಸುವ ಮೂಲಕ ಮೈಸೂರು ಜಿಲ್ಲೆಗೆ ಪ್ರಥಮ ಹಾಗೂ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿದ್ದಾರೆ.

ಫಲಿತಾಂಶ ಪಟ್ಟಿಯಲ್ಲಿ ಈ ಬಾರಿ ಮೈಸೂರು ಜಿಲ್ಲೆ ಗಮನಾರ್ಹ ಸಾಧನೆ ಮಾಡಿದ್ದು, 19ನೇ ಸ್ಥಾನದಿಂದ 7ನೇ ಸ್ಥಾನಕ್ಕೆ ಬಡ್ತಿ ಪಡೆಯುವ ಮೂಲಕ ಒಟ್ಟಾರೆ ಫಲಿತಾಂಶದಲ್ಲೂ ಸಾಧನೆ ಮಾಡಿದೆ. ಜಿಲ್ಲೆಯಲ್ಲಿ ಈ ಬಾರಿ 38,175 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 32,639 ಮಂದಿ ತೇರ್ಗಡೆಯಾಗಿದ್ದು, ಶೇ.85.5ರಷ್ಟು ಫಲಿತಾಂಶ ಲಭಿಸಿದೆ. ಅಲ್ಲದೆ, 10ಕ್ಕೂ ಹೆಚ್ಚು ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಜಿಲ್ಲೆಗೆ ಪ್ರಥಮ: ಪ್ರತಿ ವರ್ಷವೂ ಮೈಸೂರಿನ ವಿದ್ಯಾರ್ಥಿಗಳು ರಾಜ್ಯದಲ್ಲಿ ಮೊದಲ ಮೂರು ಸ್ಥಾನದಲ್ಲಿ ಗುರುತಿಸಿಕೊಳ್ಳುತ್ತಿದ್ದು, ಈ ಬಾರಿಯೂ ಇಬ್ಬರು ವಿದ್ಯಾರ್ಥಿನಿಯರು ಸಾಧನೆ ಮಾಡಿದ್ದಾರೆ. ಮೈಸೂರಿನ ಭಾರತೀಯ ವಿದ್ಯಾ ಭವನದ ಎಸ್.ಜಾಹ್ನವಿ ಹಾಗೂ ವಿಜಯನಗರದ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಶಾಲೆಯ ಡಿ.ಎಸ್.ಧನ್ವಿ 625ಕ್ಕೆ 623 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ ಮೂರನೇ, ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಅವಳಿ ಸಹೋದರಿಯರ ಸಾಧನೆ: ಮೈಸೂರಿನ ಅಗ್ರಹಾರದ ನಿವಾಸಿ ವೆಂಕಟರಮಣ, ವಿನಯಾ ದಂಪತಿಯ ಅವಳಿ ಪುತ್ರಿಯರಾದ ಅಂಜಲಿ ವಿ.ಶಾಸ್ತ್ರಿ, ಅದಿತಿ ವಿ.ಶಾಸ್ತ್ರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಮ ಅಂಕ ಗಳಿಸುವ ಮೂಲಕ ಗಮನ ಸೆಳೆದಿದ್ದಾರೆ. ಮರಿಮಲ್ಲಪ್ಪ ಶಾಲೆಯ ವಿದ್ಯಾರ್ಥಿನಿಯರಾದ ಅಂಜಲಿಶಾಸ್ತ್ರಿ, ಅದಿತಿ ಶಾಸ್ತ್ರಿ 625ಕ್ಕೆ 619 ಅಂಕ ಪಡೆದು ಉತ್ತೀರ್ಣರಾಗಿದ್ದಾರೆ. ಇಬ್ಬರು ಒಟ್ಟಿಗೆ ಪರೀಕ್ಷೆಗೆ ತಯಾರಿ ನಡೆಸಿ, ಇಬ್ಬರೂ ಅಂಕ ಗಳಿಸುವುದರಲ್ಲೂ ಸಮಾನತೆ ಕಾಯ್ದುಕೊಂಡು ಎಲ್ಲರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ.

600 ಗಡಿ ದಾಟಿದವರು: ಮೈಸೂರಿನ ವಿವಿಧ ಶಾಲೆಯ ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕ ಗಳಿಸುವ ಮೂಲಕ ಗಮನ ಸೆಳೆದಿದ್ದಾರೆ. ವಿಜಯ ವಿಠಲ ಆಂಗ್ಲ ಮಾಧ್ಯಮ ಶಾಲೆಯ ಪ್ರಥಮ್ ಎಸ್.ಭಾರದ್ವಾಜ್ 622 ಅಂಕ ಪಡೆದು ಮೈಸೂರು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಮೈಸೂರಿನ ಲಕ್ಷ್ಮೀಪುರಂ ನಿವಾಸಿ ರಂಗರಾಜು, ಗಾಯತ್ರಿ ದಂಪತಿ ಪುತ್ರಿ, ಮರಿಮಲ್ಲಪ್ಪ ಶಾಲೆಯ ವಿದ್ಯಾರ್ಥಿನಿ ಆರ್.ಭೂಮಿಕಾ 621 ಅಂಕ, ವಿಜಯನಗರದ ಸದ್ವಿದ್ಯಾ ಶಾಲೆ ದಿಶಾ ವರ್ಮಾ 621, ಎನ್.ಎಸ್. ರಸ್ತೆಯ ಸದ್ವಿದ್ಯಾ ಶಾಲೆಯ ಕಾವ್ಯಶ್ರೀ 621 ಅಂಕ ಪಡೆದು ಮೈಸೂರು ಜಿಲ್ಲೆಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಸದ್ವಿದ್ಯಾ ಶಾಲೆಯ ಶ್ರೀಗೌರಿ ಎಸ್.ಕುಮಾರ್ 620, ನಿತಿನ್ ಎಂ. 614, ಪ್ರಜ್ಞಾ ಆನಂದ್ 610, ವಿದ್ಯಾ ಎಂ. 609 ಅಂಕ ಪಡೆದಿದ್ದಾರೆ. ವಿಜಯನಗರ ಸದ್ವಿದ್ಯಾ ಶಾಲೆಯ ಮಾನ್ಯ 611 ಅಂಕ, ವಿಜಯ ವಿಠಲ ಶಾಲೆಯ ವಿಶೃತ್ ಎಸ್.ಪ್ರಸಾದ್ 604 ಅಂಕ ಸೇರಿದಂತೆ ಹಲವರು 600ಕ್ಕೂ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಿದ್ದಾರೆ.



ಮರಿಮಲ್ಲಪ್ಪ ಶಾಲೆಯ ವಿದ್ಯಾರ್ಥಿನಿ ಆರ್.ಭೂಮಿಕಾ(621) ಅವರಿಗೆ ಮರಿಮಲ್ಲಪ್ಪ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಪಂಚಾಕ್ಷರಸ್ವಾಮಿ ಅಭಿನಂದಿಸಿದರು.



ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಸಾಧನೆ ಮಾಡಿರುವ ಮೈಸೂರಿನ ತಿಲಕ್‌ನಗರದ ಅಂಧ ಮಕ್ಕಳ ಸರ್ಕಾರಿ ಪಾಠಶಾಲೆಯ ವಿದ್ಯಾರ್ಥಿಗಳನ್ನು ಶಾಲಾ ಅಧೀಕ್ಷಕ ಸುರೇಶ್ ಅಭಿನಂದಿಸಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ರಾಮಕೃಷ್ಣ ವಿದ್ಯಾಕೇಂದ್ರಕ್ಕೆ ಶೇ.100 ಫಲಿತಾಂಶ



ಕೀರ್ತನ



ಸಾನಿಧ್ಯ ಸಿ.ಎನ್.



ನೇಹ.ಎಂ

ಮೈಸೂರು, ಮೇ 9– ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರವು ಕಳೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಗಳಿಸಿದೆ. ೦+ ಗ್ರೇಡ್‌ನಲ್ಲಿ 06 ವಿದ್ಯಾರ್ಥಿಗಳು ಮತ್ತು ೦ ಗ್ರೇಡ್‌ನಲ್ಲಿ 11 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕೀರ್ತನ ಶಿವರಾಮ್ ಹೆಬ್ಬಾರ್ 603 (96.48%) ಅಂಕಗಳೊಂದಿಗೆ ಶಾಲೆಗೆ ಮೊದಲಿಗಳಾಗಿದ್ದು, ಕನ್ನಡದಲ್ಲಿ 125, ಹಿಂದಿಯಲ್ಲಿ 100 ಅಂಕ ಗಳಿಸಿದ್ದಾಳೆ. ಸಾನಿಧ್ಯ ಸಿ.ಎನ್. ಎಂಬ ವಿದ್ಯಾರ್ಥಿನಿಯು ಹಿಂದಿಯಲ್ಲಿ 100 ಅಂಕಗಳನ್ನು ಗಳಿಸುವುದರ ಜೊತೆಗೆ ಒಟ್ಟು 590 (94.4%) ಅಂಕಗಳನ್ನು ಗಳಿಸಿ ಶಾಲೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾಳೆ. ನೇಹ.ಎಂ ವಿದ್ಯಾರ್ಥಿನಿಯು ಹಿಂದಿಯಲ್ಲಿ 100 ಅಂಕಗಳನ್ನು ತೆಗೆದುಕೊಂಡಿದ್ದಾಳೆ.

ಆದರ್ಶ ವಿದ್ಯಾಲಯದ ಅನನ್ಯ ಆರ್. ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿ



ಅನನ್ಯ ಆರ್

ಮಳವಳ್ಳಿ, ಮೇ 9– ಮಳವಳ್ಳಿ ಪಟ್ಟಣದ ಮಾರೇಹಳ್ಳಿ ಆದರ್ಶ ವಿದ್ಯಾಲಯದ 10ನೇ ತರಗತಿಯ ವಿದ್ಯಾರ್ಥಿನಿ ಅನನ್ಯ ಆರ್. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 571 ಅಂಕಗಳನ್ನು (ಶೇ.92ರಷ್ಟು) ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈಕೆ ಉಪನ್ಯಾಸಕ ರವಿಕುಮಾರ್ ಅಗಸನಪುರ ಹಾಗೂ ತಾಯಿ ಶಿಕ್ಷಕಿ ಅನ್ನಪೂರ್ಣ ದಂಪತಿ ಪುತ್ರಿ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪತ್ರಿಕಾ ವಿತರಕರ ಅವಳಿ ಮಕ್ಕಳ ಸಾಧನೆ



ಮೇಘನಾ ಮಾನಸಿ

ಮೈಸೂರು, ಮೇ 9–ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಮೈಸೂರು ವಿ.ವಿ.ಮೊಹಲ್ಲಾದಲ್ಲಿರುವ ನಿರ್ಮಲಾ ಪ್ರೌಢಶಾಲೆಯ ವಿದ್ಯಾರ್ಥಿನಿಯರಾದ ಎಲ್.ಎಚ್. ಮೇಘನಾ –551 (ಶೇ. 88.16) ಮತ್ತು ಎಲ್.ಎಚ್. ಮಾನಸಿ –546 (ಶೇ. 87.36) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಎಲ್.ಎಚ್.ಮೇಘನಾ ಕನ್ನಡ– 99, ಇಂಗ್ಲಿಷ್95, ಹಿಂದಿ–96, ಗಣಿತ–86, ವಿಜ್ಞಾನ– 79, ಸಮಾಜ ವಿಜ್ಞಾನದಲ್ಲಿ –96 ಅಂಕ ಗಳಿಸಿದ್ದಾರೆ. ಎಲ್.ಎಚ್. ಮಾನಸಿ ಕನ್ನಡ– 106, ಇಂಗ್ಲಿಷ್, ಹಿಂದಿ, ಗಣಿತ– 81, ವಿಜ್ಞಾನ–87 ಹಾಗೂ ಸಮಾಜ ವಿಜ್ಞಾನದಲ್ಲಿ –99 ಅಂಕ ಗಳಿಸಿದ್ದಾರೆ. ಇವರು ಮೈಸೂರಿನ ಒಂಟಿಕೊಪ್ಪಲು ಪತ್ರಿಕಾ ವಿತರಕ, ಹೆಬ್ಬಾಳಿನ ಲೋಕನಾಯಕನಗರದ ನಿವಾಸಿ ಎಲ್.ಎಸ್. ಹರೀಶ್‌ಕುಮಾರ್ ಹಾಗೂ ಎಂ.ವಿಮಲಾ ದಂಪತಿಯ ಅವಳಿ ಪುತ್ರಿಯರು.

ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲೆಗೆ ಶೇ.84 ಫಲಿತಾಂಶ



ದಿವ್ಯಶ್ರೀ (586)



ಲಲಿತ (582)

ಮೈಸೂರು, ಮೇ 9– ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 84 ರಷ್ಟು ಫಲಿತಾಂಶ ಬಂದಿದೆ.


ಒಟ್ಟು 153 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ದಿವ್ಯಶ್ರೀ 586 ಅಂಕ ಶೇ 94 ಫಲಿತಾಂಶ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ದ್ವಿತೀಯ ಸ್ಥಾನವನ್ನು ಲಲಿತ ಪಟೇಲ್ 582 ಅಂಕ ಶೇ 93 ಫಲಿತಾಂಶ ಪಡೆದಿದ್ದಾರೆ. ಕನ್ನಡದಲ್ಲಿ 125ಕ್ಕೆ 125 ಅಂಕಗಳನ್ನು ಲಿಖಿತ್ ಎಂ.ಬಿ, ಲಲಿತಪಟೇಲ್, ಚೈತ್ರ ಸಿ ಹಾಗೂ ಸಹನ ಕೆ. ಆರ್ ಪಡೆದಿದ್ದು, ಸಂಸ್ಕೃತದಲ್ಲಿ 125ಕ್ಕೆ 125 ಅಂಕಗಳನ್ನು ಅನನ್ಯ ಸುರೇಶ್, ನಿಸರ್ಗ ಎಂ. ಆರ್. ಪಡೆದಿದ್ದಾರೆ. ದಿವ್ಯಶ್ರೀ ಎಂ ಹಿಂದಿಯಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ.

ಅನಂತಗೀತ ವಿದ್ಯಾಲಯಕ್ಕೆ ಶೇ. 100ರಷ್ಟು ಫಲಿತಾಂಶ



ಮೈಸೂರು, ಮೇ 9–ಮೈಸೂರು ವಿಜಯನಗರದ ಎರಡನೇ ಹಂತದಲ್ಲಿರುವ ಅನಂತಗೀತ ವಿದ್ಯಾಲಯಕ್ಕೆ 2023–24 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಬಂದಿದೆ. 33 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಎಲ್ಲಾ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ ಚಿನ್ಮಯಿಗೌಡ 614 ಪ್ರಥಮ ಸ್ಥಾನ, ಕುಶಾಲ್ ರಾಜ್ 606 ದ್ವಿತೀಯ ಸ್ಥಾನ, ಅಲೋಕ್ ಜಿ.ಎ. 591 ತೃತೀಯ ಸ್ಥಾನ ಹಾಗೂ ಮೇಘನಾ ಎಸ್ 589, ಮೇಘನಾ.ಕೆ. 578 ಅಂಕಗಳನ್ನು ಪಡೆದಿದ್ದಾರೆ.

ಜೆಎಸ್‌ಎಸ್ ಶಾಲೆಗೆ ಶೇ.100 ಫಲಿತಾಂಶ



ಸುತ್ತೂರು, ಮೇ 9– ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವರುಣ ಕ್ಷೇತ್ರದ ಸುತ್ತೂರು ಗ್ರಾಮದ ಜೆಎಸ್‌ಎಸ್ ಶಾಲೆಗೆ ಶೇ.100 ಫಲಿತಾಂಶ ಬಂದಿದೆ. ವಿದ್ಯಾರ್ಥಿನಿ ಐಶ್ವರ್ಯ ಕನ್ನಡದಲ್ಲಿ 100ಕ್ಕೆ 100 ಅಂಕ ಪಡೆದುಕೊಂಡಿದ್ದಾರೆ. ಈಕೆ ಮಹೇಶ್–ನೀಲಮ್ಮ ದಂಪತಿ ಪುತ್ರಿ, ಗ್ರಾಮ ಪಂಚಾಯಿತಿ ಸದಸ್ಯ ಪಾಪಯ್ಯ ರೈತ ಮುಖಂಡರಾದ ಮಾದೇವ, ಮಲ್ಲೇಶ, ರೈತ ಮಹಿಳೆ ಸಹಕಾರ ಸಂಘದ ಮಹಿಳೆಯರು ಐಶ್ವರ್ಯಗೆ ಸಿಹಿ ತಿನ್ನಿಸಿ ಶುಭ ಕೋರಿದರು.

ಶ್ರೀಮತಿ ಪುಟ್ಟೀರಮ್ಮ ಶ್ರವಣದೋಷವುಳ್ಳ ಹೆಣ್ಣು ಮಕ್ಕಳ ವಸತಿ ಶಾಲೆಗೆ ಶೇ.100 ಫಲಿತಾಂಶ



ಮೈಸೂರು, ಮೇ 9– ಮೈಸೂರಿನ ಶ್ರೀಮತಿ ಪುಟ್ಟೀರಮ್ಮ ಶ್ರವಣದೋಷವುಳ್ಳ ಹೆಣ್ಣು ಮಕ್ಕಳ ವಸತಿ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ಶಾಲೆಯ 14 ಶ್ರವಣದೋಷವುಳ್ಳ ಹೆಣ್ಣು ಮಕ್ಕಳು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗಿದ್ದು, 2 ವಿದ್ಯಾರ್ಥಿಗಳು ಬಿ+ ಶ್ರೇಣಿ, 8–ಬಿ, 4ಸಿ+ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶಾಲೆಗೆ 100% ಫಲಿತಾಂಶ ತಂದುಕೊಟ್ಟಿದ್ದಾರೆ. ಇದರಲ್ಲಿ ಹೆಚ್.ಎಂ.ನಿತ್ಯಾ 425ಕ್ಕೆ 316 ಅಂಕಗಳು ಹಾಗೂ ನಿಸರ್ಗ.ಎ.ಆರ್ 298 ಅಂಕಗಳನ್ನು ಪಡೆದಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಚಿರಂತನ ಎನ್.

ಮೈಸೂರು,ಮೇ 9– ಮೈಸೂರಿನ ಸದ್ವಿದ್ಯಾ ಪ್ರೌಢಶಾಲೆಯ ವಿದ್ಯಾರ್ಥಿನಿ ಚಿರಂತನ ಎನ್. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 596 ಅಂಕಗಳನ್ನು ಗಳಿಸಿದ್ದಾರೆ. ಈಕೆ ರಾಘವೇಂದ್ರ ನಗರದ ನಿವಾಸಿ ಆಡಿಟರ್ ನಾಗರಾಜ್ ಬಿ., ಎಂ.ಜಿ. ಅನಿತಾ ದಂಪತಿಯ ಪುತ್ರಿ.



ಮೈಸೂರಿನ ಮೈಸೂರಿನ ತಿಲಕ್‌ನಗರದಲ್ಲಿರುವ ಕಿವುಡ ಮಕ್ಕಳ ಸರ್ಕಾರಿ ಶಾಲೆಯಲ್ಲಿ ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶಾಲೆಯ ಅಧೀಕ್ಷಕ ಸುರೇಶ್ ಹಾಗೂ ಶಿಕ್ಷಕ ವರ್ಗ ವಿದ್ಯಾರ್ಥಿಗಳನ್ನು ಅಭಿನಂದಿಸಿದೆ.

ಎಸ್.ಹೊಸಕೋಟೆ ಶಾಲೆಗೆ ಶೇ.100 ಫಲಿತಾಂಶ



ಸುತ್ತೂರು, ಮೇ 9–ಹೊಸಕೋಟೆ ಗ್ರಾಮದ ಗುರು ಮಹಾಂತೇಶ್ವರ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದಿದೆ. ಹರ್ಷಿತ 610, ತನುಜ–609 ಅಂಕ ಪಡೆದು ಶಾಲೆಗೆ ಅತ್ಯುನ್ನತ ಸ್ಥಾನ ಗಳಿಸಿದ್ದಾರೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ




ಮೈಸೂರು, ಮೇ 9–ಮೈಸೂರಿನ ವಿಜಯವಿಠಲ ಶಾಲೆಯ ವಿದ್ಯಾರ್ಥಿ ವಿಶೃತ್ ಎಸ್.ಪ್ರಸಾದ್ ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 604 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ವಿಜಯ ವಿಠಲ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್ ಮತ್ತು ರಾಜೇಶ್ವರಿ ದಂಪತಿ ಪುತ್ರ.

ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆಗೆ ಶೇ.88 ಫಲಿತಾಂಶ



ರಜಿನಿ ಆರ್

ಮೈಸೂರು, ಮೇ 9– ಮೈಸೂರಿನ ರಾಮಕೃಷ್ಣನಗರದಲ್ಲಿರುವ ನೃಪತುಂಗ ಕನ್ನಡ ಶಾಲೆ, ಕನ್ನಡ ವಿಕಾಸ ವಿದ್ಯಾ ಸಂಸ್ಥೆಗೆ ಶೇ.88 ರಷ್ಟು ಫಲಿತಾಂಶ ಬಂದಿದೆ. ಅದರಲ್ಲಿ ರಜಿನಿ ಆರ್. 542 (87%) ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಶೇಕಡ 60ರಷ್ಟು ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, ಕನ್ನಡ, ಇಂಗ್ಲಿಷ್, ಹಿಂದಿ, ಗಣಿತ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಶೇ.92ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಿಜ್ಞಾನದಲ್ಲಿ ಶೇ.88ರಷ್ಟು ಮಂದಿ ಉತ್ತೀರ್ಣರಾಗಿದ್ದಾರೆ.


ಓಂ ಶ್ರೀ ಗುರುಬಸವಲಿಂಗಾಯ ನಮಃ
ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಹಾಗೂ ಮೈಸೂರು ಜಿಲ್ಲೆಯ ಎಲ್ಲಾ ಮಠಾಧೀಶರ ದಿವ್ಯಾಶೀರ್ವಾದಗಳೊಂದಿಗೆ
ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ
ವೀರಶೈವ-ಲಿಂಗಾಯತ ಸಂಘ ಸಂಸ್ಥೆಗಳು
ಹಾಗೂ ಬಸವ ಬಳಗಗಳ ಒಕ್ಕೂಟ, ಮೈಸೂರು
ನಾಡಿನ ಜನತೆಗೆ ಸಾಂಸ್ಕೃತಿಕ ನಾಯಕರಾದ
ವಿಶ್ವಗುರು ಬಸವಣ್ಣನವರ ಜಯಂತಿಯ ಶುಭಾಶಯಗಳು
ದಯವಿಲ್ಲದ ಧರ್ಮವಾವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ
ನಮ್ಮ ಬಸವ ಜಯಂತಿ-2024ರ ಆಚರಣೆ
ದಿನಾಂಕ: 09-06-2024ನೇ ಭಾನುವಾರ
ಮೆರವಣಿಗೆ ಬೆಳಿಗ್ಗೆ 8-30 ಗಂಟೆಗೆ ಬಸವ ಪುತ್ಥಳಿ
ಆವರಣದಿಂದ ಮಹಾರಾಜ ಕಾಲೇಜು ಮೈದಾನ
ಸಭಾ ಕಾರ್ಯಕ್ರಮ ಮತ್ತು ಬಸವ ಗೌರವ
ಬೆಳಿಗ್ಗೆ 11-00 ಗಂಟೆಗೆ
ಲೋಕ ಕಂಡಂತಹ
ವಿಶ್ವದ ಮೊದಲ ಮಾನವತಾವಾದಿ
ಸಮಾನತೆಯ ಹರಿಕಾರನಾದ ನಮ್ಮ ಅಣ್ಣ
ಬಸವಣ್ಣನ ಹಬ್ಬವನ್ನು
ಆಚರಿಸೋಣ ಬನ್ನಿ...
ಸ್ವಾಗತ ಕೋರುವವರು
❖ ಬಸವ ಬಳಗಗಳ ಒಕ್ಕೂಟದ ಮಾಜಿ ಅಧ್ಯಕ್ಷರುಗಳು
❖ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ಜಿಲ್ಲಾ ಘಟಕ
❖ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಎಲ್ಲಾ ತಾಲ್ಲೂಕು ಘಟಕಗಳು
❖ ಮೈಸೂರು ಜಿಲ್ಲಾ ಮತ್ತು ನಗರದ ಎಲ್ಲಾ ಬಸವ ಬಳಗಗಳು, ಸಂಘ ಸಂಸ್ಥೆಗಳು
❖ ಬಸವ ಬಳಗಗಳ ಒಕ್ಕೂಟದ ಎಲ್ಲಾ ಉಪ ಸಮಿತಿಗಳು-2024
❖ ಜಾಗತಿಕ ಲಿಂಗಾಯತ ಮಹಾಸಭಾ
❖ ಲಿಂಗಾಯತ ಗೌಡ ಮಹಾಸಭಾ
❖ ರೇಣುಕಾಚಾರ್ಯ ಭಕ್ತ ವೃಂದ ಮೈಸೂರು
❖ ಅಖಿಲ ಭಾರತ ಶರಣ - ಸಾಹಿತ್ಯ ಪರಿಷತ್ತು
❖ ಐ-ಲೈಫ್, ಮೈಸೂರು
❖ ವೀರಶೈವ ಸಜ್ಜನ ಸಂಘ
❖ ಹೇಮರೆಡ್ಡಿ ಮಲ್ಲಮ್ಮ ಸಂಘ
ಎಂ. ಪ್ರದೀಪ್‌ಕುಮಾರ್
ಅಧ್ಯಕ್ಷರು
ಬಸವ ಬಳಗಗಳ ಒಕ್ಕೂಟ, ಮೈಸೂರು
ಮೊ. 98860 41227

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ನನ್ನವರು ಬಂದಾಗ ನಿಮ್ಮ ಮುಖ ಹರಳೆಣ್ಣೆ ಕುಡಿದವರಂತಾಗುವುದಲ್ಲ ಯಾಕೆ? ಅವರು ನಮ್ಮ ಗಂಟು, ಗದರಿಯನ್ನು ಕೇಳುತ್ತಾರೆಯೇ?"

ಗಂಡ : "ನನ್ನ ಕಡೆಯವರು ಬಂದಾಗ ನಿನ್ನ ಮುಖ ಮಲ್ಲಿಗೆ ಹೂವಿನಂತೆ ಅರಳಿ ಉಲ್ಲಾಸ ತೋರುವುದೇ?"

ಮೈಸೂರು ಮಿತ್ರ

ಶುಕ್ರವಾರ, 10 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಅವಕಾಶಗಳು ನಮ್ಮನ್ನು ಹುಡುಕಿಕೊಂಡು ಬರುವುದಿಲ್ಲ, ಅವುಗಳನ್ನು ನಾವೇ ಹುಡುಕಿಕೊಂಡು ಹೋಗಬೇಕು –ಅಭಿನಂದನ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನೀತಿಯುಳ್ಳವನು ಖ್ಯಾತಿಪಟ್ಟಾನು

ನಿಮ್ಮ ಪತ್ರಗಳು

ಸರ್ಕಾರಿ ಶಾಲೆಗಳ ಅಭಿವೃದ್ಧಿ ಕಡೆ ಗಮನಹರಿಸಿ

ಮಾನ್ಯರೆ,

ರಾಜ್ಯದಲ್ಲಿ ಇದೀಗ ಎರಡು ಹಂತದ ಲೋಕಸಭಾ ಚುನಾವಣೆಗಳು ನಡೆದು ಮುಕ್ತಾಯಗೊಂಡಿದೆ. ಈ ಚುನಾವಣೆಯ ಸಮಯದಲ್ಲಿ ಜನಸಾಮಾನ್ಯರಿಂದಿಡಿದು, ಸೆಲೆಬ್ರಿಟಿಗಳು ಸೇರಿದಂತೆ ದೊಡ್ಡ ದೊಡ್ಡ ರಾಜಕಾರಣಿಗಳೆಲ್ಲರೂ ತಮ್ಮೂರಿನ ಸರ್ಕಾರಿ ಶಾಲೆಯ ಮತಗಟ್ಟೆಗೆ ಬಂದು ಮತ ಹಕ್ಕು ಚಲಾಯಿಸಿ, ಮಾಧ್ಯಮಗಳಿಗೆ ಅದೇ ಸರ್ಕಾರಿ ಶಾಲೆಯ ಮುಂದೆ ಪೋಜು ಕೊಟ್ಟು ಹೊರಟು ಬಿಡುತ್ತಾರೆ. ಅಲ್ಲದೆ ತಾವು ಮತ ಚಲಾಯಿಸಿದ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುತ್ತಾರೆ.

ಆದರೆ ವಿಪರ್ಯಾಸವೆಂದರೆ ನಮ್ಮ ರಾಜ್ಯದ ಬಹುತೇಕ ಸರ್ಕಾರಿ ಶಾಲೆಗಳು ಶಿಥಿಲಗೊಂಡಿವೆ. ಗೋಡೆಗಳು ಬಿರುಕು ಬಿಟ್ಟಿವೆ. ಮೇಲ್ಛಾವಣಿ ಕುಸಿಯುವ ಹಂತಕ್ಕೆ ತಲುಪಿವೆ. ಆದರೆ ಸರ್ಕಾರಿ ಶಾಲೆಯ ಈ ಶೋಚನೀಯ ದೃಶ್ಯಗಳು ಮತ ಚಲಾಯಿಸಲು ಬಂದ ನಮ್ಮ ಪ್ರಖ್ಯಾತ ರಾಜಕಾರಣಿಗಳಿಗೆ, ಸೆಲೆಬ್ರಿಟಿಗಳಿಗೆ, ದೊಡ್ಡ ದೊಡ್ಡ ಶ್ರೀಮಂತರ ಕಣ್ಣಿಗೆ ಬೀಳದೇ ಇರುವುದು ಅಚ್ಚರಿ ಪಡಬೇಕಾದ ಸಂಗತಿ! ಅಥವಾ ನೋಡಿದರೂ ನಮಗೆ ಯಾಕೆ ಬೇಕು ಇದರ ಉಸಾಬರಿ ಎಂಬ ಅಸಡ್ಡೆಯೇ ಎಂದು ತಿಳಿಯದಾಗಿದೆ. ಕೇಂದ್ರ ಹಾಗೂ ರಾಜ್ಯಸರ್ಕಾರಗಳು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸುತ್ತಿವೆ. ಆದರೆ ಎಲ್ಲವನ್ನು ಸರ್ಕಾರವೇ ಮಾಡಲಿ ಎಂಬ ಭಾವನೆ ನಮ್ಮಲ್ಲಿರುವುದು ತಪ್ಪು. ಸರ್ಕಾರದ ಜೊತೆ ಜೊತೆಗೆ ಆ ಶಾಲೆಯಲ್ಲಿ ಓದಿದ ಹಿರಿಯ ವಿದ್ಯಾರ್ಥಿಗಳು, ಊರಿನ ಪ್ರಮುಖರು, ಆ ಶಾಲೆಯಿಂದ ಕಲಿತ ಸೆಲೆಬ್ರಿಟಿಗಳು, ಶ್ರೀಮಂತರು ಹೀಗೆ ಎಲ್ಲರೂ ಸರ್ಕಾರದ ಜೊತೆಗೂಡಿ ತಮ್ಮ ತಮ್ಮ ಊರಿನ ಸರ್ಕಾರಿ ಶಾಲೆಗಳ ಸ್ಥಿತಿಗತಿ ಹಾಗೂ ಸಮಸ್ಯೆಗಳ ಬಗ್ಗೆ ಕಾಳಜಿ ತೋರಿದರೆ ಪ್ರತಿಯೊಂದು ಸರ್ಕಾರಿ ಶಾಲೆಗಳ ಚಿತ್ರಣವೇ ಬದಲಾದೀತು.

ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಮುದಾಯದ ಪಾಲ್ಗೊಳ್ಳುವಿಕೆ ಬಹಳ ಮುಖ್ಯ. ಸರ್ಕಾರಿ ಶಾಲೆಗಳ ಅಭಿವೃದ್ಧಿ ಸರ್ಕಾರದ ಕೆಲಸವಷ್ಟೇ ಎಂಬ ಮನಸ್ಥಿತಿ ಸರಿಯಲ್ಲ. ಹೀಗಾಗಿ ಸರ್ಕಾರದ ಜೊತೆಗೆ ಸ್ಥಳೀಯರು, ಉಳ್ಳವರು, ದಾನಿಗಳು ಅಗತ್ಯ ಸಹಕಾರ, ಪ್ರೋತ್ಸಾಹ ನೀಡಿದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳು ಬಲವರ್ಧನೆಗೊಳ್ಳಲಿವೆ. ಜೊತೆಗೆ ನಮ್ಮ ಸರ್ಕಾರಿ ಶಾಲಾ ಮಕ್ಕಳು ಕಲಿಕೆಯಲ್ಲಿ ಪ್ರಗತಿ ಸಾಧಿಸಿ ನಾಡಿಗೆ, ರಾಷ್ಟ್ರಕ್ಕೆ ಕೀರ್ತಿ ತರಲಿದ್ದಾರೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ರಿಂಗ್ ರಸ್ತೆಯಲ್ಲಿ ಮುಳ್ಳಿನ ಗಿಡ ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ಕೆಲವು ರಿಂಗ್ ರಸ್ತೆಯಲ್ಲಿ ಬಾಕ್ಸ್ ರೀತಿ ಮಾಡಿರುವುದು ಸರಿಯಷ್ಟೆ, ಆದರೆ ಈ ಬಾಕ್ಸ್‌ಗಳಲ್ಲಿ ಮುಳ್ಳಿನ ಗಿಡ ಇತರ ಗಿಡಗಂಟಿಗಳು ಬೆಳೆದು ನಿಂತಿವೆ. ಇದರಿಂದ ದ್ವಿಚಕ್ರ ವಾಹನ ಚಾಲಕರಿಗೆ ತುಂಬಾ ತೊಂದರೆಯಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಗಿಡಗಂಟಿಗಳನ್ನು ತೆರವುಗೊಳಿಸಬೇಕೆಂದು ಮನವಿ.

–ಟಿ.ಸಿ. ಲೋಕೇಶಮೂರ್ತಿ, ಮೈಸೂರು.

ಮರೆಯಾದ ಪ್ರೊ.ಮಾದಯ್ಯ



ಮಾನ್ಯರೆ,

ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಖ್ಯಾತಿಯ ಆರ್ಥಿಕ ತಜ್ಞ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎಂ.ಮಾದಯ್ಯ ವಯೋಸಹಜ ಆರೋಗ್ಯ ಸಮಸ್ಯೆಗಳಿಂದಾಗಿ ನಮ್ಮನ್ನು ಅಗಲಿದ್ದಾರೆ. ಎರಡು ಅವಧಿಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದ ಪ್ರೊ.ಮಾದಯ್ಯ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ನಿಕಟವರ್ತಿಯಾಗಿದ್ದರು. ತಮ್ಮ ಅಧಿಕಾರಾವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದ ಮಾದಯ್ಯನವರು ಮೈಸೂರು ವಿವಿಯನ್ನು ಪ್ರಗತಿ ಪಥದತ್ತ ಒಯ್ಯಲು ಸಾಕಷ್ಟು ಶ್ರಮಿಸಿದ್ದರು. ಓರ್ವ ಆರ್ಥಿಕ ತಜ್ಞ ವಿವಿ ಕುಲಪತಿಯಾಗುವುದು ವಿರಳ. ಸರಳ ಹಾಗೂ ಸಜ್ಜನರಾಗಿದ್ದ ಮಾದಯ್ಯನವರ ಆತ್ಮಕ್ಕೆ ಸದ್ಗತಿ ದೊರಕಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಅಶ್ಲೀಲ ಪ್ರಕರಣಗಳನ್ನು ವೈಭವೀಕರಿಸುವುದು ತರವಲ್ಲ

ಮಾನ್ಯರೆ,

ಲೈಂಗಿಕ ದೌರ್ಜನ್ಯದ ಆರೋಪ ಎದುರಿಸುತ್ತಿರುವ ಬಿಜೆಪಿ ಮತ್ತು ಜಾ.ದಳ ಮೈತ್ರಿ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಕುರಿತ ಸುದ್ದಿಗಳನ್ನು ಕೆಲ ದೃಶ್ಯ ಮಾಧ್ಯಮಗಳು ವೈಭವೀಕರಿಸಿ ಬಿತ್ತರಿಸುತ್ತಿವೆ. ಕೆಲ ಮಾಧ್ಯಮಗಳಿಗೆ ದಿನಪೂರ್ತಿ ಇದೇ ಪ್ರಮುಖ ಸುದ್ದಿಯಾಗಿದೆ. ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯವೆಸಗಿರುವ ವಿಡಿಯೋಗಳು ಎನ್ನಲಾದ ತುಣುಕುಗಳನ್ನು ವಿಶ್ಲೇಷಣೆ ಮಾಡಿಕೊಂಡು ಸುದ್ದಿಗಳನ್ನು ಬಿತ್ತರಿಸಲಾಗುತ್ತಿದೆ. ಇದು ವೀಕ್ಷಕರನ್ನು ಮುಜುಗರಕ್ಕೀಡು ಮಾಡಿದೆ. ಕೆಲ ಮನೆಗಳಲ್ಲಿ ದೃಶ್ಯ ಮಾಧ್ಯಮಗಳನ್ನು ಮನೆಯ ಹಿರಿಯರು, ಮಕ್ಕಳು, ಮಹಿಳೆಯರು ಒಟ್ಟಾಗಿ ಕುಳಿತು ವೀಕ್ಷಿಸುತ್ತಾರೆ. ಈ ವೇಳೆ ಇಂಥ ಪ್ರಕರಣಗಳ ಸುದ್ದಿಗಳನ್ನು ವೈಭವೀಕರಿಸಿ ಬಿತ್ತರಿಸುವುದು ಅವರನ್ನು ಮುಜುಗರಕ್ಕೀಡು ಮಾಡುತ್ತದೆ.

ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಸರ್ಕಾರ ಈಗಾಗಲೇ ಎಸ್‌ಐಟಿ ತನಿಖೆಗೆ ನೀಡಿದ್ದು ಹೀಗಿದ್ದರೂ ತಾಳ್ಮೆ ಇಲ್ಲದ ಕೆಲ ಮಾಧ್ಯಮಗಳು ಸಂತ್ರಸ್ತೆಯರನ್ನು ಹಾಗೂ ಅವರ ಕುಟುಂಬಸ್ಥರನ್ನು ಸಂದರ್ಶನ ಮಾಡುತ್ತಿವೆ. ಇದು ಅವರ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರುವುದು. ಆದ್ದರಿಂದ ದೃಶ್ಯ ಮಾಧ್ಯಮಗಳು ಸುದ್ದಿ ಬಿತ್ತರಿಸುವ ಬರದಲ್ಲಿ ನೈತಿಕತೆಯನ್ನು ಕಳೆದುಕೊಳ್ಳಬಾರದು.


–ವಿ. ನಿರ್ಮಲ್ ಕುಮಾರ್, ಮಹಾರಾಜ ಕಾಲೇಜು, ಮೈಸೂರು

ಮತದಾನಕ್ಕೆ ಬಳಸಿದ ಇಂಕು ಕಲಬೆರಕೆಯೇ?

ಮಾನ್ಯರೆ,

ಈ ಹಿಂದೆ ಮತದಾನ ಮಾಡಿದಾಗ ಹಾಕಿದ್ದ ಶಾಯಿಯ ಗುರುತು 2–3 ತಿಂಗಳು ಇರುತ್ತಿತ್ತು. ಉಗುರು ಬೆಳೆಯುತ್ತಾ ಹೋದಂತೆ ಶಾಯಿಯು ಮಾಸುತ್ತಿತ್ತು. ಕಳೆದ ತಿಂಗಳ 26ರಂದು ಮತದಾನ ಮಾಡಿದ್ದೆ. ಆಗ ಶಾಯಿ ಹಾಕಿದ್ದಾರೆ. ಈಗಾಗಲೇ ಹಾಕಿದ್ದ ಶಾಯಿಯು ಬಹುತೇಕ ಅಳಿಸಿಹೋಗಿದೆ. ಇನ್ನೂ ಚುನಾವಣೆ ಪ್ರಕ್ರಿಯೆ ಮುಗಿದಿಲ್ಲ. ಈಗ ಶಾಯಿಯು ಪೂರ್ಣ ಹೊರಟು ಹೋದರೆ, ದುಷ್ಟಶಕ್ತಿಗಳು ಬೇರೆಯವರ ಓಟನ್ನು ಇಂತಹವರ ಕೈಲಿ ಹಾಕಿಸುವುದನ್ನು ತಳ್ಳಿ ಹಾಕುವಂತಿಲ್ಲ. ನನ್ನ ಅನುಮಾನ ಚುನಾವಣೆಯಲ್ಲಿ ಉಪಯೋಗಿಸುವ ಶಾಯಿಯ ಶಕ್ತಿಯೂ ಆಗ್ಗಿನಿಂದಾಗ್ಗೆ ಕುಂದುತ್ತಿದೆಯೇ ಅಥವಾ ಕಲಬೆರಕೆಯೇ? ಎಂದು

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು.



ಭಕ್ತಿ ಭಂಡಾರಿ ಬಸವಣ್ಣ

"ಕನ್ನಡ ನಾಡಿನ ಚರಿತ್ರೆಯಲ್ಲಾಗಲೀ, ಸಾಹಿತ್ಯದ ಚರಿತ್ರೆಯಲ್ಲಾಗಲೀ ಬಸವಣ್ಣನವರಿಗೆ ಶಾಶ್ವತವಾದ, ಕೀರ್ತಿಮಯವಾದ ಸ್ಥಾನ ಸಂದಾಯವಾಗಿದೆ. ಸಾಹಿತ್ಯ ಚರಿತ್ರೆಯ ನಡುಗನ್ನಡ ಯುಗದ ಮೊದಲ ಭಾಗವನ್ನು ಬಸವಯುಗ ಎಂದೇ ಹೆಸರಿಸಲಾಗಿದೆ. ಎಲ್ಲಾ ವಚನಕಾರರಿಗೂ ಬಸವಣ್ಣನವರೇ ಆದರ್ಶವಾಗಿದ್ದಾರೆ. ಕನ್ನಡ ನಾಡಿನ ಎಲ್ಲ ಭಾಗದಲ್ಲಿಯೂ ಅವರ ಜನ್ಮದಿನವನ್ನು 'ಬಸವ ಜಯಂತಿ' ಹೆಸರಿನಲ್ಲಿ ಹೆಚ್ಚಿನ ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುತ್ತದೆ. ನಮ್ಮ ನಾಡಿನ ವಿವಿಧ ಪಟ್ಟಣಗಳಲ್ಲಿ ಬಸವಣ್ಣನವರು ಮಂತ್ರಿಯಾಗಿ ಕುದುರೆಯನ್ನೇರಿ ಕುಳಿತ ಶೈಲಿಯಲ್ಲಿರುವ ಪ್ರತಿಮೆಗಳು ಪ್ರತಿಷ್ಠಾಪನೆಗೊಂಡಿವೆ. ಅಲ್ಲಲ್ಲಿ ಅವರ ಹೆಸರಿನಲ್ಲಿ ಬಸವ ಭವನ ಶ್ರದ್ಧಾಕೇಂದ್ರಗಳು ನಿರ್ಮಾಣಗೊಂಡಿವೆ. ಬಸವಣ್ಣನವರ ಜನ್ಮಸ್ಥಳ ಬಸವನ ಬಾಗೇವಾಡಿ ಮತ್ತು ಐಕ್ಯರಾದ ಕೂಡಲಸಂಗಮ ಹಾಗೂ ಬಸವಕಲ್ಯಾಣ ಸ್ಥಳಗಳನ್ನು ಕೂಡ ಪ್ರೇಕ್ಷಣೀಯ ಪುಣ್ಯಸ್ಥಳಗಳನ್ನಾಗಿ ಅಭಿವೃದ್ಧಿಪಡಿಸಲಾಗಿದೆ.

ಇಂದು ಬಸವ ಜಯಂತಿ



ಶ್ರೀ ಜಯರಾಜೇಂದ್ರ ಸ್ವಾಮಿಗಳು
ಶ್ರೀ ಸುತ್ತೂರು ಮಠ
ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

ಬಸವಣ್ಣನವರ ಜೀವನ ಚರಿತ್ರೆಯು ಅತ್ಯಂತ ಮಹತ್ವಪೂರ್ಣವೂ, ವರ್ಣಮಯವೂ, ರೋಮಾಂಚನಕಾರಿಯೂ, ಹಾಗೆಯೇ ಬೋಧಪ್ರದವೂ ಆಗಿದೆ. ಬಸವಣ್ಣ ವಿಜಯಪುರ ಜಿಲ್ಲೆಯ ಬಾಗೇವಾಡಿಯ ಸಮೀಪದ ಇಂಗಳೇಶ್ವರ ಗ್ರಾಮದಲ್ಲಿ ಜನಿಸಿದರು. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಮಾದರಸರು ಶೈವ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾಗಿದ್ದು, ವೇದ, ಶಾಸ್ತ್ರ, ಪುರಾಣಗಳನ್ನು ಅರಿತವರಾಗಿದ್ದರು. ಅಂದಿನ ಕಾಲಕ್ಕೆ ಬಾಗೇವಾಡಿಯೂ ಒಂದು ಪವಿತ್ರವಾದ ಬ್ರಾಹ್ಮಣರ ಅಗ್ರಹಾರವಾಗಿತ್ತು. ಮಾದರಸ ತನ್ನ ಜೀವನೋಪಾಯಕ್ಕಾಗಿ ಗ್ರಾಮದ ಲೆಕ್ಕ ಪತ್ರಗಳನ್ನು ಬರೆಯುವ ಕರಣಿಕ ವೃತ್ತಿಯನ್ನು ಅವಲಂಬಿಸಿದ್ದರು. ಬಸವಣ್ಣನವರ ಜನನ ಸುಮಾರು 1120ನೇ ಇಸವಿ. ಹಿಂದೂ ಪಂಚಾಂಗದ ಪ್ರಕಾರ ಅದು ವೈಶಾಖ ಮಾಸದ ಶುಕ್ಲ ಪಕ್ಷದ ತದಿಗೆಯ ದಿನ.

ಬಸವಣ್ಣ ತಮ್ಮ ವಯಸ್ಸಿಗೆ ಮೀರಿದ ಚಿಂತನಶೀಲತೆಯನ್ನು ಚಿಕ್ಕಂದಿನಿಂದಲೇ ಮೈಗೂಡಿಸಿಕೊಂಡಿದ್ದರು. ಬಾಗೇವಾಡಿ ಅಗ್ರಹಾರದ ಸುತ್ತಮುತ್ತ ಹಿಂದೂ ಸಮಾಜದ ಬೇರೆಬೇರೆ ಜಾತಿ–ಜನಾಂಗದ ಜನರು ವಾಸ ಮಾಡುತ್ತಿದ್ದರು. ಅಸ್ಪೃಶ್ಯರು ಸಹ ಇದ್ದರು. ಅವರನ್ನು ಮಿಕ್ಕವರು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಈ ವಿಚಾರ ಬಸವಣ್ಣನವರ ಮನಸ್ಸನ್ನು ತಾಕಿತು. ನಾವೆಲ್ಲರೂ ಒಬ್ಬನೇ ಪರಮಾತ್ಮನ ಮಕ್ಕಳಾಗಿರುವಾಗ ತಾರತಮ್ಯವೇಕೆ? ಅಷ್ಟು ಮಾತ್ರವಲ್ಲದೇ ಅಗ್ರಹಾರದಿಂದ ಹೊರಗೆ ಕೆಲವು ದೇವತೆಗಳಿಗೆ ಪ್ರಾಣಿಗಳನ್ನು ಬಲಿಕೊಡಲಾಗುತ್ತಿತ್ತು. ಆ ವಿಷಯವು ಕೂಡ ಬಸವಣ್ಣನವರಿಗೆ ತೀವ್ರ ನೋವನ್ನುಂಟು ಮಾಡಿತು. ಸ್ವಾರ್ಥಕ್ಕೆ ಮನುಷ್ಯನು ಮತ್ತೊಂದು ಜೀವವನ್ನು ಬಲಿಕೊಡುವುದೇಕೇ? ಇದೊಂದು ಅಮಾನವೀಯ ವರ್ತನೆಯಲ್ಲವೇ ಎಂದು ಯೋಚಿಸತೊಡಗಿದರು. ಏನಾದರೂ ಮಾಡಿ ಈ ಅಸ್ಪೃಶ್ಯತೆಯನ್ನು, ಪ್ರಾಣಿ ಬಲಿಯನ್ನು ತೊಡೆದು ಹಾಕಬೇಕು ಎಂದು ನಿಶ್ಚಯಿಸಿದರು.

ಬಸವಣ್ಣನವರಿಗೆ ಎಂಟು ವರ್ಷ ತುಂಬಿದಾಗ ಬ್ರಾಹ್ಮಣ ಸಂಪ್ರದಾಯದಂತೆ ಉಪನಯನ, ಬ್ರಹ್ಮೋಪದೇಶ ಮುಂತಾದ ಹೆಸರುಗಳಿಂದ ಕರೆಯಲಾಗುವ ಯಜ್ಞೋಪವೀತಧಾರಣ ಕಾರ್ಯಕ್ರಮವನ್ನು ಅವರ ತಂದೆ ಏರ್ಪಡಿಸಿದ್ದರು. ಆದರೆ ಬಸವಣ್ಣನವರಿಗೆ ಅದರಲ್ಲಿ ಮನಸ್ಸಿಲ್ಲ. ಅಕ್ಕನಿಗೆ ಉಪನಯನವಿಲ್ಲದ ಮೇಲೆ ನನಗೂ ಬೇಡವೆಂದು ತಿರಸ್ಕರಿಸಿ ಮನೆಯನ್ನೇ ತೊರೆದು ಕೂಡಲಸಂಗಮಕ್ಕೆ ಹೋದರು. ಅಲ್ಲಿ ಜಾತವೇದ ಮುನಿಗಳಲ್ಲಿ ಶರಣು ಹೋದರು. ಅವರಲ್ಲಿ ತಮ್ಮ ಮನಸ್ಸಿನ ಸಂಕಟವನ್ನೆಲ್ಲ ಅರಿಕೆ ಮಾಡಿಕೊಂಡರು. ಜಾತವೇದ ಮುನಿಗಳು 'ನೀನಿನ್ನು ಬಾಲಕನಲ್ಲವೆ ದೊಡ್ಡವನಾದಾಗ ಏನು ಮಾಡಬೇಕೋ ಅದನ್ನು ಮಾಡುತ್ತೀಯಂತೆ, ಸಂಗಮೇಶ್ವರನೇ ನಿನಗೆ ದಾರಿ ತೋರಿಸುತ್ತಾನೆ' ದುಃಖಿಸಬೇಡ, ಗುರುಕುಲದಲ್ಲಿದ್ದುಕೊಂಡು ವಿದ್ಯಾ–ಬುದ್ಧಿವಂತನಾಗು ಎಂದು ಆಶೀರ್ವದಿಸಿದರು. ಅಲ್ಲಿಂದ ಮುಂದಕ್ಕೆ ಬಸವಣ್ಣವರ ಬಾಳಿನಲ್ಲಿ ಹೊಸದೊಂದು ಅಧ್ಯಾಯವೇ ಪ್ರಾರಂಭವಾಯಿತು.

ಈ ವೇಳೆ ಮಂಗಳವೇಡಿಯ ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣನವರ ಸೋದರಮಾವ ಬಲದೇವರು ಮಂತ್ರಿ ಪದವಿಯನ್ನು ಅಲಂಕರಿಸಿದ್ದರು. ಅವರು ಬಸವಣ್ಣನನ್ನು ಕರಣಿಕ ವೃತ್ತಿಯಲ್ಲಿ ತೊಡಗಿಸಿದರು. ಕಲ್ಯಾಣವೆಂದರೆ ಅದು ಇಂದಿನ ಬಸವಕಲ್ಯಾಣ ಪಟ್ಟಣ. ಬಿಜ್ಜಳನ ಆಸ್ಥಾನದ ಕರಣಿಕರಾಗಿ ವೃತ್ತಿ ಜೀವನ ಆರಂಭಿಸಿದ ಬಸವಣ್ಣ, ತಮ್ಮ ದೈವಭಕ್ತಿಯಿಂದಲೂ, ಕಾಯಕ ನಿಷ್ಠೆಯಿಂದಲೂ ಬಹುಬೇಗನೆ ಬಿಜ್ಜಳ ದೊರೆಯ ಪ್ರೀತಿ–ವಿಶ್ವಾಸಗಳಿಗೆ ಪಾತ್ರರಾದರು. ಕರಣಿಕರಾಗಿದ್ದವರು, ದ್ರವ್ಯ ಭಂಡಾರಿಯಾದರು. ನಂತರ ಬಿಜ್ಜಳ ಸಾಮ್ರಾಜ್ಯದ ಮಂತ್ರಿ ಪದವಿಯನ್ನು ಅಲಂಕರಿಸಿದರು.

ಇಷ್ಟೆಲ್ಲದರ ನಡುವೆ ಬಸವಣ್ಣ ತಮ್ಮ ಮೂಲ ಉದ್ದೇಶವನ್ನು ಮರೆತಿರಲಿಲ್ಲ. ಕಲ್ಯಾಣ ಪಟ್ಟಣವನ್ನು ಒಂದು ಶಿವಭಕ್ತಿ ಕೇಂದ್ರವಾಗಿ ರೂಪಿಸುವ ಕಾರ್ಯವನ್ನು ಕೈಗೊಂಡು ಅದರಲ್ಲಿ ಯಶಸ್ವಿಯಾದರು. ವೈದಿಕ ಧರ್ಮದಲ್ಲಿ ಇದ್ದುಕೊಂಡು ಅಸ್ಪೃಶ್ಯತೆ ನಿವಾರಣೆ, ಪ್ರಾಣಿ ಬಲಿ ತಪ್ಪಿಸುವುದು ಸಾಧ್ಯವಿಲ್ಲವೆಂಬುದನ್ನು ಮನಗಂಡಿದ್ದರು. ಅದರಿಂದ ಹೊರಕ್ಕೆ ಬಂದು ಹೊಸದೊಂದು ಧರ್ಮವನ್ನೇ ಸ್ಥಾಪಿಸುವ ಮಹತ್ಕಾರ್ಯಕ್ಕೆ ಕೈ ಹಾಕಿದರು. ಪುರಾತನ ಕಾಲದಿಂದಲೂ ನಾಡಿನಲ್ಲಿ ಶಿವನನ್ನು ಆರಾಧಿಸುವ ಶೈವ ಧರ್ಮವೆಂದು ಕರೆಯಬಹುದಾದ ಭಕ್ತಿ ಪಂಥವೊಂದಿತ್ತು. ಅದನ್ನೇ ಆಶ್ರಯಿಸಿ ಬಸವಣ್ಣನವರು, ಭಕ್ತ ಸಮೂಹಕ್ಕೆ ಮನದಟ್ಟು ಮಾಡಿಸಿ, ಅಂಗದ ಮೇಲೆ ಲಿಂಗ ಧರಿಸುವ 'ಇಷ್ಟಲಿಂಗ'ವನ್ನು ಕೊಡುವುದರ ಮೂಲಕ **'ವೀರಶೈವ ಲಿಂಗಾಯತ'** ನೂತನ ಧರ್ಮವೊಂದಕ್ಕೆ ತಳಹದಿಯನ್ನು ಹಾಕಿದರು.

ಕಲ್ಯಾಣ ಭಕ್ತಿ ಕೇಂದ್ರವಾಗಿದ್ದ ನಾನಾ ದಿಕ್ಕುಗಳಿಂದ ಭಕ್ತರು ಅಲ್ಲಿಗೆ ಆಗಮಿಸಿದರು. ಹಾಗೆ ಬಂದವರಿಗೆಲ್ಲ ಬಸವಣ್ಣನವರು ದೀಕ್ಷೆ ಕೊಟ್ಟರು. ಈಗ ನಾವೆಲ್ಲರೂ ಶಿವಭಕ್ತರೆಂಬ ಧರ್ಮಕ್ಕೆ ಸೇರಿದವರಾಗಿದ್ದೇವೆ. ನಿಮ್ಮ ಹಿಂದಿನ ಜಾತಿಗಳನ್ನು ಮರೆತು ಶಿವಭಕ್ತರಾದ ನಾವೆಲ್ಲರು ಒಂದೇ ಧರ್ಮದವರೆಂಬುದನ್ನು ನೆನಪಿನಲ್ಲಿಡಿ. ಅಸ್ಪೃಶ್ಯತೆಯನ್ನು ಆಚರಿಸಬೇಡಿ. ಇಲ್ಲಿ ಮೇಲು–ಕೀಳುಗಳಿಲ್ಲ. ನಾವೆಲ್ಲರು ಶರಣ–ಶರಣೆಯರು. ಅಹಿಂಸಾವಾದಿಗಳಾದ ನಾವು ಆಹಾರಕ್ಕಾಗಿ ಮೂಕ ಪ್ರಾಣಿಗಳನ್ನು ಬಲಿಕೊಡುವುದು ತರವಲ್ಲ. ಮದ್ಯಪಾನಾದಿ ದುಶ್ಚಟಗಳಿಗೆ ಬಲಿಯಾಗದಿರಿ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಶರಣಧರ್ಮ ಇದು ಎಂಬುದನ್ನು ಅವರಿಗೆಲ್ಲ ಬೋಧನೆ ಮಾಡಿದರು. ಹೀಗೆ ಕಲ್ಯಾಣವೇ ಕೇಂದ್ರವಾಗಿ ನೂತನ ಧರ್ಮವೊಂದರ ಮೂಲಸ್ಥಾನವಾಯಿತು.

ಅಂದಿನ ಕಾಲಕ್ಕೆ ಅಸ್ಪೃಶ್ಯರೆನಿಸಿದವರಿಗೆ ದೇವಾಲಯಗಳನ್ನು ಪ್ರವೇಶಿಸುವ ಅಪ್ಪಣೆ ಇರಲಿಲ್ಲ. ಅದನ್ನು ಮನಗಂಡ ಬಸವಣ್ಣನವರು, ದೇವಾಲಯಗಳ ಸ್ಥಾವರಲಿಂಗ ಪೂಜೆಯನ್ನೇ ಕಡೆಗಣಿಸಿದರು. ನೀವು ಯಾವ ದೇವಾಲಯಗಳಿಗೂ ಹೋಗಬೇಕಾಗಿಲ್ಲ. ಇಷ್ಟಲಿಂಗವನ್ನು ಧಾರಣೆ ಮಾಡಿಕೊಳ್ಳಿ, ನಿತ್ಯವೂ ಇಷ್ಟಲಿಂಗವನ್ನು ಪೂಜಿಸಿ, ನಿಮ್ಮ ದೇಹವನ್ನೇ ಒಂದು ದೇವಾಲಯವನ್ನಾಗಿ ಮಾಡಿಕೊಳ್ಳಿ ಎಂದು ಬೋಧಿಸಿದರು. ಬಸವಣ್ಣನವರ ಈ ಸುಧಾರಣೆಗಳೆಲ್ಲವೂ ಜನಸಾಮಾನ್ಯರನ್ನು ಆಕರ್ಷಿಸಿದವು. ಅವರು ಬೋಧಿಸಿದಂತೆಯೇ ನಡೆದುಕೊಂಡು ಅದರ ಫಲವಾಗಿ ನೂತನವಾಗಿ ಸ್ಥಾಪನೆಗೊಂಡ ವೀರಶೈವ ಲಿಂಗಾಯತ ಧರ್ಮವು ಗಟ್ಟಿಗೊಂಡಿತು.

ಕಲ್ಯಾಣದಲ್ಲಿ ಒಂದುಗೂಡಿದ ಭಕ್ತರ ಸಲುವಾಗಿ ಬಸವಣ್ಣನವರು ಅನ್ನದಾಸೋಹಕ್ಕೆ ಭೋಜನ ಶಾಲೆಯನ್ನು ಸ್ಥಾಪಿಸಿದರು. ಅದು 'ಮಹಾಮನೆ' ಹೆಸರಿನಿಂದ ಕೀರ್ತಿತವಾಯಿತು. ಅಂತೆಯೇ ಸಾಧಕರು ಭಕ್ತರು ಕೂಡಿ ತತ್ತ್ವ, ಸಿದ್ಧಾಂತ ವಿಚಾರಗಳನ್ನು ಚಿಂತನ–ಮಂಥನ ಮಾಡುವ ಸಲುವಾಗಿ ವಿಶಾಲವಾದ ಅಧ್ಯಾತ್ಮ ಮಂದಿರವೊಂದನ್ನು ಬಸವಣ್ಣನವರು ನಿರ್ಮಿಸಿದರು. ಅದು 'ಅನುಭವ ಮಂಟಪ' ಹೆಸರಿನಿಂದ ಪ್ರಖ್ಯಾತವಾಯಿತು. ಮಹಾಮನೆಯಲ್ಲಿ ಪ್ರತಿನಿತ್ಯವೂ ಲಕ್ಷದ ಮೇಲೇ ತೊಂಬತ್ತಾರು ಸಾವಿರ ಭಕ್ತರು ದಾಸೋಹವನ್ನು ಸ್ವೀಕರಿಸುತ್ತಿದ್ದರೆಂದು ಹರಿಹರ ಮಹಾಕವಿಯು ತನ್ನ ಕಾವ್ಯದಲ್ಲಿ ವರ್ಣಿಸಿದ್ದಾನೆ. ಕಲ್ಯಾಣದ ಕೀರ್ತಿಯು ದಶದಿಕ್ಕುಗಳಿಗೂ ಹಬ್ಬಲು ವೈದಿಕರು ಬಿಡಲಿಲ್ಲ. ಬಸವಣ್ಣನವರು ಬಿಜ್ಜಳ ದೊರೆಯ ಕಾರ್ಯಭಾರಗಳನ್ನು ಅತ್ಯಂತ ವಿಚಕ್ಷಣತೆಯಿಂದ ನಿರ್ವಹಿಸುತ್ತಿದ್ದರು. ಇದರ ನಡುವೆಯೇ ಬಸವಣ್ಣನವರು ತಮ್ಮ ನಿತ್ಯ ಪೂಜೆ ಮೊದಲಾದ ಸಾಧನೆಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದರು.

ಶೂನ್ಯ ಸಿಂಹಾಸನವನ್ನೇರಿದ ಅಲ್ಲಮಪ್ರಭುವಿನ ಅಧ್ಯಕ್ಷತೆಯಲ್ಲಿ ಅನುಭವಮಂಟಪದಲ್ಲಿ ನಿತ್ಯವು ಶರಣರ ಗೋಷ್ಠಿಗಳು ನಡೆಯತೊಡಗಿದವು. ವೀರಶೈವ ಲಿಂಗಾಯತ ತತ್ವ ವಿಚಾರಗಳ ಚಿಂತನೆಯು ನಡೆಯುತ್ತಿತ್ತು.ಲೋಕದ ಜನರನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗಬೇಕು, ಅವರನ್ನೆಲ್ಲ ಭಕ್ತಿ ಮಾರ್ಗದಲ್ಲಿ ಕರೆದುಕೊಂಡು ಹೋಗಬೇಕು, ಅವರು ತಮ್ಮ ಬದುಕಿಗೆ ಶ್ರೇಷ್ಠವಾದ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತಾಗಬೇಕು ಎಂಬುದೇ ಬಸವಾದಿ ಶರಣರ ಧ್ಯೇಯವಾಗಿತ್ತು. ಅದಕ್ಕಾಗಿ ಅವರು ವಚನ ಎಂದು ಕರೆಯುವ ಅತ್ಯಂತ ಪರಿಣಾಮಕಾರಿಯಾದ ಶೈಲಿಯಲ್ಲಿ ಸಾಹಿತ್ಯ ರಚನೆ ಮಾಡಿದರು.

* * *

ವಚನವೆಂಬುದು ಕನ್ನಡ ಸಾಹಿತ್ಯದ ವಿಶಿಷ್ಟವಾದ ಸಾಹಿತ್ಯ ಪ್ರಕಾರಗಳಲ್ಲೊಂದು. ವಚನವು ಛಂದೋಬದ್ಧವಾದ ಕವಿತೆಯಲ್ಲ. ಗದ್ಯಕ್ಕೆ ಗದ್ಯವಾಗಿ ಪದ್ಯಕ್ಕೆ ಪದ್ಯವಾಗಿ, ಎರಡರ ಉತ್ತಮಾಂಶಗಳನ್ನು ಅದು ತನ್ನಲ್ಲಿ ಅಳವಡಿಸಿಕೊಂಡಿತ್ತು. ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಮಡಿವಾಳ ಮಾಚಯ್ಯ ಮುಂತಾದ ನೂರಾರು ಶರಣ–ಶರಣೆಯರು ಅಲ್ಲಿ ಸ್ವತಂತ್ರವಾಗಿ ವಚನಗಳನ್ನು ರಚಿಸಿ ಶರಣ ಮಂಡಳಿಯ ಮುಂದೆ ಮಂಡಿಸುತ್ತಿದ್ದರು. ಅಲ್ಲಮಪ್ರಭು, ಬಸವಣ್ಣನವರು ಸೇರಿದಂತೆ ಹಿರಿಯ ಶರಣರು ಅವರಿಗೆಲ್ಲ ಸೂಕ್ತವಾದ ಪರಿಯಲ್ಲಿ ಮಾರ್ಗದರ್ಶನ ಮಾಡುತ್ತಿದ್ದರು.

ಬಸವಣ್ಣನವರು ಕೈಗೊಂಡ ಕ್ರಾಂತಿಯು ಅಂದು ಅತ್ಯಂತ ಯಶಸ್ವಿಯಾಯಿತು. ಅದರ ಫಲವಾಗಿ ಬಸವಣ್ಣನವರ ಕೀರ್ತಿ ನಾಡಿನ ಎಲ್ಲೆಡೆಯೂ ಹಬ್ಬಿತ್ತು. ಬಸವಣ್ಣನವರ ಈ ಕಾರ್ಯಗಳನ್ನು ಮೆಚ್ಚುವವರಂತೆ ನಿಂದಿಸುವವರು ಇದ್ದರು. ಬಸವಣ್ಣನವರ ಕ್ರಾಂತಿಕಾರಕ ವಿಚಾರಧಾರೆಯನ್ನು ಅರಗಿಸಿಕೊಳ್ಳಲಾಗದ ಕೆಲವರು ಬಿಜ್ಜಳನಲ್ಲಿ 'ಬಸವಣ್ಣನು ವರ್ಣಾಶ್ರಮ ಧರ್ಮಗಳನ್ನೆಲ್ಲ ಹಾಳು ಮಾಡುತ್ತಿದ್ದಾನೆ. ಅವನನ್ನು ನೀವು ನಿಯಂತ್ರಿಸದಿದ್ದರೆ ಮುಂದಕ್ಕೆ ಅನಾಹುತಗಳು ಜರುಗುತ್ತವೆ' ಎಂದು ದೂರಿತ್ತರು. ಮೊದಮೊದಲು ಬಿಜ್ಜಳ ದೊರೆಯು ತಾನು ಬಸವಣ್ಣನವರ ಮೇಲೆ ಇರಿಸಿದ್ದ ಅತಿಶಯವಾದ ಗೌರವದಿಂದಾಗಿ ಏನನ್ನು ಮಾತನಾಡಲಿಲ್ಲ. ಆದರೆ ಬರಬರುತ್ತಾ ಚಾಡಿಕೋರರ ಮಾತುಗಳಿಂದ ಧರ್ಮಸಂಕಟವು ಉಂಟಾಯಿತು.

ಬಸವಣ್ಣನವರು ಶರಣಧರ್ಮಕ್ಕೆ ಬಂದವರನ್ನು ಸ್ವಾಗತಿಸುತ್ತಾ, ಕ್ರಾಂತಿಕಾರಕವಾದ ಕಾರ್ಯವೊಂದನ್ನು ನಡೆಸಿದರು. ಅನ್ಯ ಜಾತಿಗಳಿಂದ ಬಂದು, ಇಷ್ಟಲಿಂಗವನ್ನು ಪಡೆದು ಲಿಂಗಾಯತರಾಗಿದ್ದ ಗಂಡು ಹೆಣ್ಣುಗಳ ಒಂದು ಮದುವೆಗೆ ಒಪ್ಪಿಗೆ ಕೊಟ್ಟುಬಿಟ್ಟರು. ದಲಿತ ಸಮುದಾಯದವರಾಗಿದ್ದ ಹರಳಯ್ಯನ ಮಗನ ಮದುವೆಯನ್ನು ಬ್ರಾಹ್ಮಣ ಸಮುದಾಯದ ಮಧುವರಸನ ಮಗಳೊಡನೆ ಶರಣಧರ್ಮ ಪರಂಪರೆಯಲ್ಲಿ ಮಾಡಿಸಿದರು. ಅದನ್ನು ವೈದಿಕ ಸಮುದಾಯ ಒಪ್ಪಲಿಲ್ಲ. ಜನರು ರೊಚ್ಚಿಗೆದ್ದು ಬಿಜ್ಜಳನಿಗೆ ದೂರಿತ್ತರು.ಬಿಜ್ಜಳನು ತನ್ನ ತಾಳ್ಮೆಯನ್ನು ಕಳೆದುಕೊಂಡು ಮದುವೆಯಾದ ವಧು–ವರರ ತಂದೆ–ತಾಯಿಗೆ ಮರಣ ದಂಡನೆಯ ಶಿಕ್ಷೆಯನ್ನು ವಿಧಿಸಿದನು. ಯುದ್ಧದ ವಾತಾವರಣವೊಂದು ನಿರ್ಮಾಣವಾಯಿತು. ಶರಣರೆಲ್ಲರೂ ಒಂದು ಗುಂಪಾದರೆ, ಸಂಪ್ರದಾಯವಾದಿಗಳು ಮತ್ತೊಂದು ಗುಂಪಾದರು. ಹೊಡೆದಾಟ–ಬಡಿದಾಟಗಳು ನಡೆದು ಹೋದವು. ಯಾವುದನ್ನು ಬಸವಣ್ಣನವರು ಮೆಚ್ಚುತ್ತಿರಲಿಲ್ಲವೋ ಅಂತಹ ರಕ್ತಪಾತ ಕಲ್ಯಾಣದಲ್ಲಿ ನಡೆದುಹೋಯಿತು. ಬಿಜ್ಜಳನು ಸಹ ಹತ್ಯೆಗೀಡಾದನು. ಅದಕ್ಕೂ ಮುನ್ನವೇ ಅಲ್ಲಮಪ್ರಭುವು ಹಲವು ಶರಣರ ಕುರಿತು 'ನಿಮ್ಮ ನಿಮ್ಮ ಐಕ್ಯ ಸ್ಥಾನಗಳಿಗೆ ಹೊರಟು ಹೋಗಿ' ಎಂದು ಸೂಚನೆ ಕೊಟ್ಟು ತಾವು ಕೂಡ ತಮ್ಮ ಐಕ್ಯ ಸ್ಥಾನವಾದ ಶ್ರೀಶೈಲದ ಕದಳಿಯ ಬನದತ್ತ ಸಾಗಿದ್ದರಿಂದ ಕಲ್ಯಾಣದ ಬೆಳಕು ನಂದಿಹೋಯಿತು. ಮುಂದಕ್ಕೆ ಬಿಜ್ಜಳನ ಸಾಮ್ರಾಜ್ಯವು ಅಳಿದು ಹೋಯಿತು.

* * *

ಈ ಕ್ರೂರ ದೃಶ್ಯಗಳನ್ನೆಲ್ಲ ಬಸವಣ್ಣನವರು ಕಣ್ಣಾರೆ ಕಂಡು ದುಃಖಕ್ರಾಂತರಾದರು. ಇನ್ನು ಕಲ್ಯಾಣದ ಸಹವಾಸ ಸಾಕು ಎಂದು ನೊಂದುಕೊಂಡು ತಮಗೆ ಪ್ರಿಯವಾದ ಸಂಗಮೇಶ್ವರ ದೇವರ ಸನ್ನಿಧಾನವಾದ ಕೂಡಲಸಂಗಮದತ್ತ ಹೊರಟುಹೋದರು. ಕೃಷ್ಣ ಮತ್ತು ಮಲಪ್ರಭಾ ನದಿಗಳ ಸಂಗಮ ಸ್ಥಾನದಲ್ಲಿ ಬಸವಣ್ಣನವರು ಇಚ್ಛಾಮರಣವನ್ನು ಸ್ವೀಕರಿಸಿ, ಸಂಗಮೇಶ್ವರನಲ್ಲಿ ಒಂದಾಗಿ ಬಿಟ್ಟರು. ಆ ಸನ್ನಿವೇಶಕ್ಕೆ ಹೊಂದುವ ಬಸವಣ್ಣನವರ ವಚನವೊಂದು ಅತ್ಯಂತ ಹೃದಯ ಸ್ಪರ್ಶಿಯಾಗಿದೆ.

ನಾನಾ ಭವದುಃಖದಲ್ಲಿ ಹುಟ್ಟಿದ ಪ್ರಾಣಿಯಲ್ಲ ತಂದೆ
ಇನ್ನು ಹುಟ್ಟಲಾರೆನು ಹೊಂದಲಾರೆನು
ಆನನ ಮರಣಗಳೆಂಬೆರಡಕ್ಕೆ ಹೊರಗಾದೆನಯ್ಯ
ನೀವು ಹೇಳಿದ ಮಣೀಹವ ಮಾಡಿದೆ
ಇನ್ನು ಕೂಡಿಕೊಳ್ಳಾ ಕೂಡಲಸಂಗಮದೇವಾ ॥

ವಚನವೆಂಬ ಸಾಹಿತ್ಯ ಪ್ರಕಾರವು ಶಾಸ್ತ್ರವು ಹೌದು, ಸಾಹಿತ್ಯವೂ ಹೌದು, ವೀರಶೈವ ಲಿಂಗಾಯತ ಧರ್ಮದ ತತ್ವಗಳನ್ನು ಸಾಮಾನ್ಯ ಜನರಿಗೆ ತಿಳಿಸಿಕೊಡುವ ಸಲುವಾಗಿ ವಚನಕಾರರು ತಮ್ಮ ವಚನಗಳನ್ನೇ ಒಂದು ಗಟ್ಟಿಯಾದ ಮಾಧ್ಯಮವನ್ನಾಗಿಸಿಕೊಂಡರು. ಬಸವಣ್ಣನವರಿಗಿಂತ ಹಿಂದೆ ಅನೇಕ ವಚನಕಾರರು ಬಂದು ಹೋಗಿದ್ದರು. ಅವರ ಪೈಕಿ ನಮಗೆ ಜೇಡರ ದಾಸಿಮಯ್ಯನ ವಚನಗಳು ಮಾತ್ರವೇ ಲಭ್ಯವಾಗಿದೆ. ರಾಮನಾಥ ಎಂಬ ಅಂಕಿತನಾಮದಲ್ಲಿ ಜೇಡರ ದಾಸಿಮಯ್ಯನವರು ಮನಮೋಹಕವಾದ ವಚನಗಳನ್ನು ರಚಿಸಿದ್ದಾರೆ.

ವಚನಕಾರರ ಗುಂಪಿನಲ್ಲಿ ಬಸವಣ್ಣನವರೇ ಅತ್ಯಂತ ಶ್ರೇಷ್ಠರಾದವರು. ಅವರ ವಚನಗಳಲ್ಲಿ ಭಕ್ತಿ, ಜ್ಞಾನ, ವೈರಾಗ್ಯ, ಸಮಾಜಬೋಧೆ, ಸಮಾಜ ವಿಡಂಬನೆ, ಅಂತರಂಗ ನಿವೇದನೆ ಮೊದಲಾದ ಅನೇಕ ಭಾವಗಳಿಗೆ ಸಂಬಂಧಿಸಿದ ಹೃದಯಗ್ರಾಹಿಯಾದ ಸಾವಿರಾರು ವಚನಗಳಿವೆ. ತಮ್ಮ ಬಾಲ್ಯ ಕಾಲದಲ್ಲಿಯೇ ಬಸವಣ್ಣನವರು ತಮ್ಮ ಮನೆ ತೊರೆದು ಕೂಡಲಸಂಗಮ ಕ್ಷೇತ್ರಕ್ಕೆ ಧಾವಿಸಿಬಿಟ್ಟರು. ಅಲ್ಲಿನ ಸಂಗಮೇಶ್ವರನ ನಿಷ್ಠಾವಂತ ಭಕ್ತರಾಗಿ ಹಲವು ವರ್ಷಗಳ ಕಾಲ ಆ ಮಹಾದೇವನ ಪೂಜಾಕೈಂಕರ್ಯಗಳಿಗೆ ತಮ್ಮನ್ನು ಸಮರ್ಪಿಸಿಕೊಂಡರು. ಅದೇ ಕಾರಣವಾಗಿ ಬಸವಣ್ಣನವರು ಕೂಡಲಸಂಗಮದೇವ ಎಂಬುದನ್ನೇ ತಮ್ಮ ವಚನಗಳ ಅಂಕಿತವಾಗಿ ಇರಿಸಿಕೊಂಡರು.

ಬಸವಣ್ಣನವರ ವಚನಗಳಲ್ಲಿ ಮಾನವನ ಲೌಕಿಕ ಜೀವನ ಮತ್ತು ಆಧ್ಯಾತ್ಮಿಕ ಜೀವನ ಎರಡಕ್ಕೂ ಬೋಧಪ್ರದವಾದ ವಚನಗಳಿವೆ. ಬಸವಣ್ಣನವರು ಪ್ರಧಾನವಾಗಿ ಭಕ್ತರಾಗಿದ್ದರು. ಈ ಹಿನ್ನೆಲೆಯಲ್ಲಿಯೇ ಅವರು ಭಕ್ತಿಭಂಡಾರಿ ಗೌರವಕ್ಕೂ ಪಾತ್ರರಾದರು. ಲೌಕಿಕ ವ್ಯವಹಾರದಲ್ಲಿ ಲೋಕದ ಜನರಿಗೆ ತಂದೆ–ತಾಯಿ, ಬಂಧು–ಬಳಗ, ಹೆಂಡತಿ–ಮಕ್ಕಳು ಹೀಗೆ ವಿವಿಧ ಸಂಬಂಧಗಳಿಂದ ಕೂಡದವರೇನೋ ಇರುತ್ತಾರೆ. ಆದರೆ ನಿಜವಾದ ಅರ್ಥದಲ್ಲಿ ಅವರ್‍ಯಾರು ನಮ್ಮ ರಕ್ಷಕರಲ್ಲ, ಭಗವಂತನೊಬ್ಬನೇ ನಮ್ಮ ನಿಜವಾದ ರಕ್ಷಕ. ಲೋಕದ ಸಂಬಂಧಿಗಳು ನಮ್ಮ ಕೈ ಬಿಟ್ಟು ಹೊರಟು ಹೋಗಬಹುದು ಆದರೆ ಪರಮಾತ್ಮನು ಮಾತ್ರ ಸದಾಕಾಲ ನಮ್ಮೊಡನೆಯೇ ಇದ್ದು ಕೂಗಿ ಕರೆದಾಗಲೆಲ್ಲ ನಮ್ಮ ರಕ್ಷಣೆಗೆ ಓಡಿಬರುತ್ತಾನೆ.

ಬಸವಣ್ಣನವರ ವ್ಯಕ್ತಿತ್ವವು ಅತ್ಯಂತ ಉನ್ನತವಾದುದು. ಮಾನವೀಯ ಸದ್ಗುಣಗಳಿಂದ ತುಂಬಿ ಮೆರೆಯುವ ಆದರ್ಶ ವ್ಯಕ್ತಿತ್ವ ಅವರದು.ಅವರ ಪ್ರಾಣಿ ದಯೆ, ಕರುಣೆ, ದಾನಗುಣ, ಸರ್ವರನ್ನು ತನ್ನಂತೆ ಕಾಣುವ ವಿಶಾಲ ಮನೋಧರ್ಮ ಮುಂತಾದವು ಎಲ್ಲವು ಶ್ರೇಷ್ಠವಾದ ಜೀವನ ಮೌಲ್ಯಗಳೇ ಹೌದು. ಆ ಜೀವನ ಮೌಲ್ಯಗಳನ್ನು ಇವು ಬಸವಣ್ಣನವರ ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ಗುಣಗಳು ಎಂದು ಭಾವಿಸಿ ಸುಮ್ಮನಾಗಬಾರದು. ಅವೆಲ್ಲವೂ ಬಸವಣ್ಣನವರು ತಮ್ಮ ಆಚರಣೆಯ ಮೂಲಕ ಮಾಡಿದ ಉಪದೇಶಗಳು ಎಂದು ತಿಳಿಯಬೇಕು. ಸಜ್ಜನರಾದವರು, ಸಾಧಕರಾದವರು ಆ ಗುಣಗಳನ್ನು ತಮ್ಮ ಜೀವನ ಮಾರ್ಗಕ್ಕೆ ಅಳವಡಿಸಿಕೊಳ್ಳಬೇಕು.

ಕಳಬೇಡ, ಕೊಲಬೇಡ
ಹುಸಿಯ ನುಡಿಯಲುಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲ
ಸಂಗಮದೇವರನೊಲಿಸುವ ಪರಿ

ಕಳ್ಳತನ ಮಾಡಬಾರದು, ಪ್ರಾಣಿಗಳನ್ನು ಕೊಲ್ಲಬಾರದು, ಸುಳ್ಳು ಹೇಳಬಾರದು, ಕೋಪಿಸಿಕೊಳ್ಳಬಾರದು, ಮತ್ತೊಬ್ಬರ ವಿಷಯದಲ್ಲಿ ಅಸಹನೆಯನ್ನು ತಾಳಬಾರದು. ನಮ್ಮನ್ನು ನಾವು ಕೊಂಡಾಡಿಕೊಳ್ಳಬಾರದು. ನಮ್ಮ ಸಂಪರ್ಕಕ್ಕೆ ಬಂದವರನ್ನು ನಿಂದನೆ ಮಾಡಬಾರದು. ಇವೇ ಬದುಕಿನ ಸೂತ್ರಗಳು. ಈ ಸಪ್ತ ಸದ್ಗುಣಗಳನ್ನು ಯಾರು ತಮ್ಮ ಬದುಕಿಗೆ ಅಳವಡಿಸಿಕೊಳ್ಳುತ್ತಾರೋ ಅಂತಹವರ ಅಂತರಂಗ ಮತ್ತು ಬಹಿರಂಗ ಎರಡೂ ನಿರ್ಮಲವಾಗುತ್ತವೆ. ಅಷ್ಟು ಮಾತ್ರವಲ್ಲದೆ ಶಿವನನ್ನು ಒಲಿಸಿಕೊಳ್ಳಲು ಈ ಸಪ್ತ ಸೂತ್ರಗಳೇ ಮಾರ್ಗದರ್ಶಿಯಾಗಿವೆ. ನಮ್ಮ ಮನಸ್ಸು ನಿರ್ಮಲವಾಗಿದ್ದರೆ ನಾವು ಮಾಡುವ ಕೆಲಸ ಕಾರ್ಯಗಳೂ ನಿರ್ಮಲವಾಗಿರುತ್ತವೆ. ಅಂತರಂಗ–ಬಹಿರಂಗಗಳ ನಡುವೆ ಬಿಂಬ–ಪ್ರತಿಬಿಂಬಗಳ ಸಂಬಂಧವಿರುತ್ತದೆ. ಬಿಂಬವು ಶುದ್ಧವಾದರೆ, ಪ್ರತಿಬಿಂಬವೂ ಶುದ್ಧವಾಗುತ್ತದೆ. ಆಗ ಪರಮೇಶ್ವರನ ಸಾಕ್ಷಾತ್ಕಾರವು ತನ್ನಿಂದ ತಾನೇ ನಡೆದುಹೋಗುತ್ತದೆ.

ಕನ್ನಡ ನಾಡಿನ ಚರಿತ್ರೆಯಲ್ಲಾಗಲೀ, ಸಾಹಿತ್ಯದ ಚರಿತ್ರೆಯಲ್ಲಾಗಲೀ ಬಸವಣ್ಣನವರಿಗೆ ಶಾಶ್ವತವಾದ ಕೀರ್ತಿಮಯವಾದ ಸ್ಥಾನ ಸಂದಾಯವಾಗಿದೆ. ಸಾಹಿತ್ಯ ಚರಿತ್ರೆಯ ನಡುಗನ್ನಡ ಯುಗದ ಮೊದಲ ಭಾಗವನ್ನು ಬಸವಯುಗ ಎಂದೇ ಹೆಸರಿಸಲಾಗಿದೆ. ಎಲ್ಲಾ ವಚನಕಾರರಿಗೂ ಬಸವಣ್ಣನವರೇ ಆದರ್ಶವಾಗಿದ್ದಾರೆ. ಕನ್ನಡ ನಾಡಿನ ಎಲ್ಲ ಭಾಗದಲ್ಲಿಯೂ ಅವರ ಜನ್ಮದಿನವನ್ನು 'ಬಸವ ಜಯಂತಿ' ಹೆಸರಿನಲ್ಲಿ ಹೆಚ್ಚಿನ ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುತ್ತದೆ. ನಮ್ಮ ನಾಡಿನ ವಿವಿಧ ಪಟ್ಟಣಗಳಲ್ಲಿ ಬಸವಣ್ಣನವರು ಮಂತ್ರಿಯಾಗಿ ಕುದುರೆಯನ್ನೇರಿ ಕುಳಿತ ಶೈಲಿಯಲ್ಲಿರುವ ಪ್ರತಿಮೆಗಳು ಪ್ರತಿಷ್ಠಾಪನೆಗೊಂಡಿವೆ. ಅಲ್ಲಲ್ಲಿ ಅವರ ಹೆಸರಿನಲ್ಲಿ **ಬಸವ ಭವನ** ಶ್ರದ್ಧಾಕೇಂದ್ರಗಳು ನಿರ್ಮಾಣಗೊಂಡಿವೆ. ಬಸವಣ್ಣನವರ ಜನ್ಮಸ್ಥಳ ಬಸವನ ಬಾಗೇವಾಡಿ ಮತ್ತು ಐಕ್ಯರಾದ ಕೂಡಲಸಂಗಮ ಹಾಗೂ ಬಸವಕಲ್ಯಾಣ ಸ್ಥಳಗಳನ್ನು ಕೂಡ ಪ್ರೇಕ್ಷಣೀಯ ಪುಣ್ಯಸ್ಥಳಗಳನ್ನಾಗಿ ಅಭಿವೃದ್ಧಿಪಡಿಸಲಾಗಿದೆ.

ಬಸವಣ್ಣನವರ ವಚನಗಳನ್ನು ಶಾಸ್ತ್ರೀಯ ಸಂಗೀತದ ಬೇರೆ ಬೇರೆ ರಾಗಗಳಿಗೆ ಅಳವಡಿಸಿಕೊಂಡು ಗಾಯನ ಮಾಡುವ ಪದ್ಧತಿಯೊಂದು ನಮ್ಮಲ್ಲಿ ರೂಪುಗೊಂಡಿದೆ. ಅದನ್ನು **'ವಚನ ಸಂಗೀತ'** ಎಂಬ ಹೆಸರಿನಿಂದ ನಿರ್ದೇಶಿಸುವಷ್ಟು ಮಟ್ಟಿಗೆ ಅದು ತನ್ನತನವನ್ನು ಮೆರೆಸುತ್ತಿದೆ. ಬಸವಣ್ಣನವರ ಹೆಸರಿನಲ್ಲಿ ಸರ್ಕಾರದ ಕಡೆಯಿಂದ ಅಂಚೆಚೀಟಿಗಳು ಮತ್ತು ನಾಣ್ಯಗಳು ಕೂಡ ಅವರ ಗೌರವಾರ್ಥವಾಗಿ ಹೊರಬಂದಿವೆ.

ಕನ್ನಡ ಸಾಹಿತ್ಯದ ಪ್ರಸಿದ್ಧ ಕವಿಗಳಾದ ಹರಿಹರ, ರಾಘವಾಂಕ, ಷಡಕ್ಷರದೇವ. ಸಿಂಗಿರಾಜ, ಭೀಮಕವಿ ಮೊದಲಾದವರು ಬಸವಣ್ಣನವರನ್ನೇ ತಮ್ಮ ಕಾವ್ಯ ನಾಯಕನನ್ನಾಗಿ ಮಾಡಿಕೊಂಡು ಕಾವ್ಯಗಳನ್ನು ರಚಿಸಿದ್ದಾರೆ. ಕನ್ನಡ ನಾಡು ಮತ್ತು ಕನ್ನಡಿಗರು ಇರುವವರೆಗೂ ಬಸವಣ್ಣನವರ ಹೆಸರು ಚಿರಸ್ಥಾಯಿಯಾಗಿರುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಅಭಿನಂದನೆಗಳು



ಎಂ.ರಂಜಿತ್‌ಸಿಂಗ್
(ಶ್ರೀ ಬಿ.ಮಂಜುನಾಥ್ ಸಿಂಗ್ ಶ್ರೀಮತಿ ಅಭಿಲಾಷಭಾಯಿ ಇವರ ಮಗ)
ಶ್ರೀ ಶಂಭುಲಿಂಗೇಶ್ವರ ರೆಸಿಡೆನ್ಸಿಯಲ್ ಸ್ಕೂಲ್ & ಪಿ ಯು ಕಾಲೇಜ್‌ನಲ್ಲಿ ವ್ಯಾಸಾಂಗ ಮಾಡುತ್ತಿದ್ದು ಎಸ್‌ಎಸ್‌ಎಲ್‌ಸಿಯಲ್ಲಿ 452 (75%) ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿಯನ್ನು ತಂದು ಕೊಟ್ಟಿದ್ದು, ಶಾಲೆಯ ಪರವಾಗಿ & ಕುಟುಂಬದ ಪರವಾಗಿ ಅಭಿನಂದನೆಗಳು
ಪಿ.ಯು ಕಾಲೇಜ್ ಜಯಂತಿನಗರ, ಪಾಂಡವಪುರ

ಅಭಿನಂದನೆಗಳು

ಮೈಸೂರಿನ ಕನ್ನಿಕಾ ಕಾವೇರಿ ಎಜುಕೇಷನ್ ಸೊಸೈಟಿಯ ಸಂಸ್ಥಾಪಕರಾದ **ಶ್ರೀಮತಿ ಚೋವಂಡ ಚೋಂದಮ್ಮ ಪೂಣಚ್ಚ** ಇವರು ಮಂಡ್ಯ ತಾಲ್ಲೂಕಿನ ಶ್ರೀರಂಗಪಟ್ಟಣದ ಸುಮಂಗಲಿ ಸೇವಾ ಟ್ರಸ್ಟ್ (ರಿ) ಇವರ ವತಿಯಿಂದ 'ಕರ್ನಾಟಕ ಪ್ರಜಾಭೂಷಣ' ಪ್ರಶಸ್ತಿಯನ್ನ ಪಡೆದಿದ್ದಾರೆ.



ಶುಭಕೋರುವವರು:
ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ಸಿಬ್ಬಂದಿ

ಅಭಿನಂದನೆಗಳು



ಮಹಾವೀರ ವಿದ್ಯಾಮಂದಿರದಲ್ಲಿ SSLC ಓದುತ್ತಿರುವ **ಮಂಗಳಗೌರಿ** 93% ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾಳೆ
ಶುಭಾಶಯ ಕೋರುವವರು
ಶ್ರೀಮತಿ ಲಕ್ಷ್ಮಿ, ಚಂದ್ರಶೇಖರ, ಎಸ್ ಪವನ

2.5 BHK
HOME INTERIORS @
₹ 2.5 Lacs*
Home Space Mart™
TALK TO OUR DESIGN TEAM
✆ 8197310113

ಮೂರನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ಇಂತಿ ದುಃಖತಪ್ತರು:
ಪತಿ ಪಚ್ಚೇಗೌಡ ಹಾಗೂ ಕುಟುಂಬ ವರ್ಗದವರು
ಸಿದ್ದಮ್ಮ (ಕೆ.ಸಾಲುಂಡಿ)
ನಿಧನ: 10.05.2021

NOW HIRING

Assistant Staff
Male/Female
for a popular CAFÉ
minimum Qualification
SSLC with 1 to 2 years
work Experience
Salary Rs.12000/- pm
Onwards. (Part Time Job)
Also Offered. Apply Through
E-mail:shridharcu6@gmail.com
8088034528

DTCP Sites for Sale

Amruthaa Nagar, Off Jayapura, HD Kote Main Road
30x40, 30x50 & Odd sites
RERA No. PRM/KA/RERA/1268/378/PR/200219/003298
7829331999, 6364382399

DTCP SITES FOR SALE

DTCP Sites
With RERA
Near Jayapura,
H.D. Kote Road, Mysore.
9590491194,9606783264

Neem BOND PLATINUM® ISI
100% Neem Ply & Doors
10 YEARS WARRANTY*
@ FACTORY DEPOT RATES
✆ 9731591267, 9901291267

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

KODAGU MODEL SCHOOL

CA No. 4, Kaveri Main Road, Vidyashankar Layout, Mysore-29

SSLC RESULT 2023-24

CONGRATULATIONS TO ALL

Deepali Gowda M. 98.24%
Malavika S. 91.52%
Pavithra 89.6%
Dhanush R. 88%
Jeevan Ragavendra 86.88%
Pavan Gowda S. 86.08%
Chandan Kumar S. 81.92%
Himani J. 80.32%
Shreyasi M. 80.32%
Rohit Basavaraj Dyamannavar 77.76%
Tejas R. 74.72%
Abhishek K.L. 74.56%
Yashavanth Gowda D.K. 73.44%
Yogesh M. 69.60%
Yashwanth U. 68.48%
Jeevitha Bai R. 59.36%
Shashank C.P. 59.04%

Kodagu Model School has secured 100% results for the academic year 2023-24.
Its indeed a very proud moment for the entire school.
We have secured cent percent results consecutively over a period of 4 years.
Management of Kodagu Model School Congratulates all the Students and Staff for their outstanding achievement
Contact No: 9845304360 / 6363647704 Web: www.kodagumodelschool.in

ABHYUDAYA PUBLIC SCHOOL

CA-2, BSNL Layout, Manasinagar, Hanchya, Mysuru-570029. Mob: 8453608402, Ph: 0821-2597871

SSLC RESULTS 2023 - 2024

FIRST BATCH 100% RESULTS

Subject wise highest Score
Kannada - 122 / 125
English - 96 / 100
Hindi - 100 / 100
Math - 99 / 100
Science - 93 / 100
Social Science - 99 / 100

Thanmai N Gowda 604/625 96.64%
Srajath N G 587/625 93.92%
Pruthvi M N 579/625 92.64%
Suryajith K S 575/625 91.52%
Kavana R 534/625 85.44%
Rishi R 531/625 84.96%
Shashikala 525/625 84%
Shashank 521/625 83.36%
Koushik 77.28%
Nehashree 75.52%
Rithvik 72.48%
Thejas 68.8%
Manvika 67.84%
Monika 64.96%
Ashwin 59.84%
Chethan 48.8%

A+ - 04
A - 04
B+ - 03
B - 03
C+ - 01
C - 01

----- WE PROMISED... WE DELIVERED... -----





ನಾಡಿನ ಸಮಸ್ತ ಶಿಕ್ಷಕ ಬಾಂಧವರಿಗೆ ಹಾಗೂ ಸಮಸ್ತ ಜನತೆಗೆ ಬಸವ ಜಯಂತಿಯ ಶುಭಾಶಯಗಳು



ಶುಭಾಶಯ ಕೋರುವವರು
ಮರಿತಿಬ್ಬೇಗೌಡ ಎಂ.ಎ.,
ಮಾಜಿ ಉಪಸಭಾಪತಿ, ಕರ್ನಾಟಕ ವಿಧಾನ ಪರಿಷತ್



CLEARANCE SALE

From ₹99 to ₹500
3rd to 19th May, 2024
10:00 am to 9:00 pm
The Institution of Engineers (Auditorium Hall)
JLB Road, (Jhansi Lakshmibai Road - Next to Maharaja College)
Mysuru - 570005 | Ph. : 99008 20598

7ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಂದೀಗೌಡರು
ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಪತ್ನಿ : ಮಾದಮ್ಮ, ಮಕ್ಕಳು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬವರ್ಗ
ಕೆ.ಜಿ. ಕೊಪ್ಪಲು & ರಾಮಕೃಷ್ಣನಗರ 'ಐ' ಬ್ಲಾಕ್, ಮೈಸೂರು

ಏಸ್ ಇನ್ಫ್ರಾ ಟೆಕ್ / ACE INFRA TECH

CONCRETE PRODUCTS WITH GERMAN TECHNOLOGY



ಜರ್ಮನ್ ತಂತ್ರಜ್ಞಾನದಿಂದ ತಯಾರಿಸಲ್ಪಟ್ಟ ಉತ್ಕೃಷ್ಟ ಗುಣಮಟ್ಟದ ಕಾಂಕ್ರೀಟ್ ಉತ್ಪನ್ನಗಳು ನಿಮ್ಮ ಕೈಗೆಟುಕುವ ದರದಲ್ಲಿ
ಕಛೇರಿ #19/ಎ, 1ನೇ ಮುಖ್ಯ ರಸ್ತೆ, 1ನೇ ಮಹಡಿ, ಜಿಲ್ಲಾ ಸಾಹಿತ್ಯ ಪರಿಷತ್ ಎದುರು, ವಿಜಯನಗರ 1ನೇ ಹಂತ, ಮೈಸೂರು – 17
MYSURU | BANGALORE | TAMILNADU | KERALA
Scan & Visit Our Website
9008609666 | 9008629666

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ನೀರು ಮಾರುವ ಸಂಸ್ಥೆಗೆ ಹುಡುಗರು ಫೀಲ್ಡ್ ಸ್ಟಾಫ್ ಕೆಲಸಕ್ಕೆ ಹಾಗೂ ಡ್ರೈವಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಹುಡುಗಿಯರು ಜ್ಯುವೆಲರಿ ಮಾರಾಟಕ್ಕೆ ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
7975520184

ಬೇಕಾಗಿದೆ

ಜಮೀನು ಕ್ರಯಕ್ಕೆ ಬೇಕಾಗಿದೆ
ಬೋಗಾದಿ ರಿಂಗ್ ರೋಡ್‌ನಿಂದ
5/6 ಕೀ.ಮೀ ವ್ಯಾಪ್ತಿಯ ಒಳಗೆ
8296023550

MAR THOMA EDUCATION SOCIETY (R.), MYSURU

ST. THOMAS HIGH SCHOOL

Vishweshwaranagar, Mysuru - 570 008
Ph.: 0821 - 2481932, 2481933 email: stthomasstate@gmail.com www.stthomasmysuru.com
Centre of Excellence 60 years 1964 - 2024

The Management and Staff Congratulate the Toppers in SSLC Examination - 2024

SCHOOL TOPPER
KISHORE D M 604/625 (96.64%)

GOWTHAM N V 591 (94.56%)
KARUNA SAGAR J 577 (92.32%)
RAJATH S 569 (91.04%) Eng-100
VARSHINI S 568 (90.88%)
THEJAS C M 561 (89.76%) Kan-125
SHUCHITHA C 560 (89.6%)
CHIRANTH G GOWDA 554 (88.64%)
NAYANA R 553 (88.48%)
MADHAN S 551 (88.16%)
RISHIKA M 549 (87.84%)
SRINIVAS S 545 (87.2%)
KRUPA SAGAR 544 (87.04%)
NIRANJAN S 536 (85.76%)
HEMALATHA BAI R 534 (85.44%)
YASHWANTH M N 528 (84.48%)
MONISHA M 527 (84.32%)
DEEPASHREE M 521 (83.36%)
ROHITH URS H M 520 (83.2%)
CHIRANTH T CHILLAL B E 518 (82.88%)
DIGANTH N 513 (82.08%)
RAJESHWARI R 510 (81.6%)
SRIVINA Y 504 (80.64%)
DEEKSHITH M K 503 (80.48%)
CHANDAN V 501 (80.16%)
YASHIKA R 499 (80%)
LOHITH R J 499 (80%)

WE ARE PROUD OF YOUR ACHIEVEMENT

100% RESULTS
Appeared - 133
Distinction - 14
First Class - 79
Second Class - 40

ADMISSIONS OPEN FOR LKG, I STD., VIII STD

Rev. SHAIJU P. JOHN, Manager
Mr. N. SWAMYNATH, Principal
Mrs. JYOTHILAKSHMI S., Vice-Principal

Congratulations to our beloved students. We thank our Teaching, Non-teaching Staff and our Parents who guided and supported us for success of our students.

ಪಂಜಾಬ್ ಕಿಂಗ್ಸ್ ವಿರುದ್ಧ ಆರ್‌ಸಿಬಿಗೆ 60 ರನ್ ಜಯ



ಧರ್ಮಶಾಲಾ, ಮೇ 9– ವಿರಾಟ್ ಕೊಹ್ಲಿ ಹಾಗೂ ರಜತ್ ಪಾಟೀದಾರ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಸಾಂಘಿಕ ಪ್ರದರ್ಶನದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಪಂಜಾಬ್ ಕಿಂಗ್ಸ್ ವಿರುದ್ಧ 60 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಆರ್‌ಸಿಬಿ ಪ್ಲೇ ಆಫ್ ಆಸೆ ಜೀವಂತವಾಗಿರಿಸಿಕೊಂಡರೇ, ಪಂಜಾಬ್ ಟೂರ್ನಿಯಿಂದ ಹೊರ ಬಿದ್ದಿದೆ.

ಹಿಮಾಚಲಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 20 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 241 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಮೊತ್ತ 42 ರನ್ ಆಗುವಷ್ಟರಲ್ಲಿ ನಾಯಕ ಡುಪ್ಲೆಸಿಸ್ 9, ವಿಲ್ ಜ್ಯಾಕ್ಸ್ 12 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ 3ನೇ ವಿಕೆಟ್‌ಗೆ ಒಂದಾದ ರಜತ್ ಪಾಟೀದಾರ್ ಹಾಗೂ ವಿರಾಟ್ ಕೊಹ್ಲಿ 76 ರನ್ ಜೊತೆ ಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಪಾಟೀದಾರ್ 23 ಎಸೆತಗಳಲ್ಲಿ 3 ಬೌಂಡರಿ, 6 ಸಿಕ್ಸರ್ ಒಳಗೊಂಡ 55 ರನ್ ಬಾರಿಸಿ ಸ್ಯಾಮ್ ಕರ್‍ರನ್‌ಗೆ ವಿಕೆಟ್ ಒಪ್ಪಿಸಿದರು. ನಂತರ 4ನೇ ವಿಕೆಟ್‌ಗೆ ಜೊತೆಯಾದ ಕ್ಯಾಮರೂನ್ ಗ್ರೀನ್ ಹಾಗೂ ವಿರಾಟ್ ಕೊಹ್ಲಿ 92 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಪಂಜಾಬ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಕೊಹ್ಲಿ ಕೇವಲ 47 ಎಸೆತಗಳಲ್ಲಿ 7 ಬೌಂಡರಿ, 6 ಸಿಕ್ಸರ್ ಒಳಗೊಂಡ 92 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆ ಮೂಲಕ ಟೂರ್ನಿಯಲ್ಲಿ 600+ ರನ್ ಬಾರಿಸಿದ ಮೊದಲ ಬ್ಯಾಟರ್ ಎನಿಸಿಕೊಂಡ ಅವರು ಪಂಜಾಬ್ ಎದುರು 1000 ರನ್ ಸಿಡಿಸಿದ ಸಾಧನೆ ಮಾಡಿದರು.

ಕೊಹ್ಲಿಗೆ ಉತ್ತಮ ಸಾಥ್ ನೀಡಿದ ಕ್ಯಾಮರೋನ್ ಗ್ರೀನ್ 46 ರನ್ ಬಾರಿಸಿ ಔಟಾದರೇ, ದಿನೇಶ್ ಕಾರ್ತಿಕ್ 18 ರನ್ ಗಳಿಸಿ ನಿರ್ಗಮಿಸಿದರು. ಪಂಜಾಬ್ ಕಿಂಗ್ಸ್ ಪರ ಹರ್ಷಲ್ ಪಟೇಲ್ 3, ವಿದ್ವತ್ ಕಾವೇರಪ್ಪ 2, ಆರ್ಶದೀಪ್ ಸಿಂಗ್ ಮತ್ತು ಸ್ಯಾಮ್ ಕರ್‍ರನ್ ತಲಾ ಒಂದೊಂದು ವಿಕೆಟ್ ಪಡೆದರು.


242 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 17 ಓವರ್‌ಗಳಲ್ಲಿ 181 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಜಾನಿ ಬೈರ್‌ಸ್ಟೋ 27, ರಿಲೇ ರೋಸೊ 61, ಶಶಾಂಕ್ ಸಿಂಗ್ 37, ಸ್ಯಾಮ್ ಕರ್‍ರನ್ 22 ರನ್ ಗಳಿಸಿದರು. ಆರ್‌ಸಿಬಿ ಪರ ಮೊಹಮ್ಮದ್ ಸಿರಾಜ್ 3, ಸ್ವಪ್ನಿಲ್ ಸಿಂಗ್, ಲೂಕಿ ಫರ್ಗೂಸನ್ ಹಾಗೂ ಕರಣ್ ಶರ್ಮಾ ತಲಾ 2 ವಿಕೆಟ್ ಉರುಳಿಸಿದರು. ವಿರಾಟ್ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಪತ್ರಕರ್ತ ರಮೇಶ್ ಉತ್ತಪ್ಪ ಅವರ ನಾಲ್ಕು ಕೃತಿಗಳ ಬಿಡುಗಡೆ

ರಾಜಕೀಯ, ರಾಜಕಾರಣಿ ಬಗ್ಗೆ ಬರೆಯಲು ಸಾಕಷ್ಟು ಜನರಿದ್ದಾರೆ, ವನ್ಯಜೀವಿ ಬಗ್ಗೆ ಬರೆಯುವವರು ಕಡಿಮೆ ; ವಿಶ್ವೇಶ್ವರ ಭಟ್

ಮೈಸೂರು, ಮೇ.9(ಜಿಎ)–ಪತ್ರಿಕೆಗಳಿಗೆ ಮುಖ್ಯಮಂತ್ರಿಗಳ ಹೇಳಿಕೆ ಎಷ್ಟು ಮುಖ್ಯವೋ ವನ್ಯಜೀವಿಗಳ ಆರ್ತನಾದವೂ ಅಷ್ಟೇ ಮುಖ್ಯ ಎಂದು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಬೆಂಗಳೂರಿನ ಅಕ್ಷರ ಮಂಟಪ ಪ್ರಕಾಶನ ಮತ್ತು ಮೈಸೂರು ಕಲ್ಚರಲ್ ಅಸೋಸಿಯೇಷನ್ ವತಿಯಿಂದ ವಿವಿಯ ವಿಜ್ಞಾನ ಭವನದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರ 'ಆನೆ', 'ಕಾಡು ಹೇಳಿದ ಕಥೆ', 'ಅರ್ಜುನ' ಮತ್ತು 'ಹಾವು' ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.



ಮೈಸೂರು ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಬೆಂಗಳೂರಿನ ಅಕ್ಷರ ಮಂಟಪ ಪ್ರಕಾಶನ ಮತ್ತು ಮೈಸೂರು ಕಲ್ಚರಲ್ ಅಸೋಸಿಯೇಷನ್ ವತಿಯಿಂದ ವಿವಿಯ ವಿಜ್ಞಾನ ಭವನದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರ 'ಆನೆ', 'ಕಾಡು ಹೇಳಿದ ಕಥೆ', 'ಅರ್ಜುನ' ಮತ್ತು 'ಹಾವು' ಕೃತಿಗಳನ್ನು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಬಿಡುಗಡೆಗೊಳಿಸಿದರು.

ರಾಜಕೀಯ ಮತ್ತು ರಾಜಕಾರಣಿ ಬಗ್ಗೆ ಬರೆಯಲು ಸಾಕಷ್ಟು ಮಂದಿ ಇದ್ದಾರೆ. ಆದರೆ, ವನ್ಯಜೀವಿಗಳ ಬಗ್ಗೆ ಬರೆಯುವವರು ಬೆರಳೆಣಿಕೆಯಷ್ಟು ಮಂದಿ ಮಾತ್ರ ಇದ್ದಾರೆ. ಆದ್ದರಿಂದ ಪತ್ರಿಕೆಗಳಲ್ಲಿ ಬೇರೆ ವಿಷಯಗಳಿಗಿಂತ ರಾಜಕಾರಣಿಗಳ ಬಗ್ಗೆ ಹೆಚ್ಚು ವಿಷಯ ಪ್ರಕಟವಾಗುತ್ತದೆ ಎಂದು ಅವರು ಹೇಳಿದರು.

ರಾಜಕೀಯ ನಾಯಕರು ಮೈಸೂರಿಗೆ ಆಗಮಿಸುತ್ತಿದ್ದಾರೆ ಎಂದ ತಕ್ಷಣ ಮಧ್ಯ ರಾತ್ರಿವರೆಗೂ ಕಾದು ವರದಿ ಮಾಡುತ್ತಾರೆ. ಆದರೆ, ವನ್ಯಜೀವಿ ತಜ್ಞರು, ನೋಬೆಲ್ ಪುರಸ್ಕೃತರು ಭೇಟಿ ನೀಡಿದರೆ, ಯಾರೂ ವರದಿ ಮಾಡಲು ಹೋಗುವುದಿಲ್ಲ. ರಾಜಕೀಯ ಮುಖಂಡರಿಗೆ ಪ್ರಶ್ನೆ ಮಾಡಲು ಯಾವುದೇ ತಯಾರಿ ಬೇಡ. ಆದರೆ, ಎಂ.ಎಸ್.ಸ್ವಾಮಿನಾಥನ್ ಸೇರಿದಂತೆ ಇತರೆ ಕ್ಷೇತ್ರದ ವ್ಯಕ್ತಿಗಳ ಬಗ್ಗೆ ಓದಿಕೊಳ್ಳಬೇಕಾಗುತ್ತದೆ. ಆದ್ದರಿಂದ ಯಾರು ಮುಂದೆ ಬರುವುದಿಲ್ಲ. ಪತ್ರಕರ್ತರ ನಿಜವಾದ ಸಾಮರ್ಥ್ಯ ಇಂತಹ ಸಂದರ್ಭಗಳಲ್ಲಿ ತಿಳಿಯುತ್ತದೆ ಎಂದು ತಿಳಿಸಿದರು.

ರಾಜಕಾರಣದ ಬಗ್ಗೆ ಯಾವುದೇ ಅಧ್ಯಯನ ಇಲ್ಲದೆ ಬರೆಯಬಹುದು. ಆದರೆ, ವನ್ಯಜೀವಿ ಬಗ್ಗೆ ಬರೆಯಬೇಕಾದರೆ ತಯಾರಿಬೇಕು. ಯಾವುದು ಆದ್ಯತೆ ಇಲ್ಲವೋ ಅದನ್ನು ಆದ್ಯತೆಯಾಗಿ ಮಾಡಿಕೊಂಡಿದ್ದಾರೆ. ಸಮಯವಿಲ್ಲದ ಓದುಗರಿಗೆ ಜಾಗವಿಲ್ಲದ ಪತ್ರಿಕೆಗೆ ಬರೆಯುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಜಕಾರಣಿಗಳ ಬಗ್ಗೆ ಬರೆಯುವುದು ನಮ್ಮ ಕರ್ಮ. ಪತ್ರಿಕೆಗಳಲ್ಲಿ ವನ್ಯಜೀವಿಗಳ ಬಗ್ಗೆ ಬರೆಯುವವರಿಗೆ ಅವಕಾಶ ನೀಡುತ್ತಿಲ್ಲ. ವನ್ಯಜೀವಿಗಳ ಬಗ್ಗೆ ಚಾನಲ್, ಮ್ಯಾಗಜಿನ್ ಮಾಡಬಹುದು ಎಂದು ಈಗಾಗಲೇ ಸಾಬೀತಾಗಿದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ಘಟನೆ ನಮ್ಮ ಮೇಲೆ ಪ್ರಭಾವ ಬೀರುತ್ತದೆ. ಹಾಗೇ ಅಧ್ಯಯನ ಮಾಡುವವರಿಗೆ ಉತ್ತಪ್ಪ ಅವರ ಕೃತಿಗಳಿಂದ ಸಾಕಷ್ಟು ಅಂಶ ಸಿಗಲಿದೆ ಎಂದರು.

ಪ್ರಜಾವಾಣಿ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ ಮಾತನಾಡಿ, ನಾನು ಮೈಸೂರು ಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಆದಿವಾಸಿಗಳ ಬಗ್ಗೆ ಕುತೂಹಲ ಉಂಟಾಗಿ ಕಾಡಿನಲ್ಲಿರುವ ಜನರ ಬಗ್ಗೆ ಹೆಚ್ಚು ಬರೆದಿದ್ದೇನೆ. ನಾಡಿನಲ್ಲಿ ಹೇಗೆ ಬದುಕಬೇಕು ಎಂಬುದು ತಿಳಿಸಿದ್ದು ಕಾಡು. ಕಾಡಿನಲ್ಲಿ ಹಗಲು ಹಗಲಾಗಿರುತ್ತದೆ. ರಾತ್ರಿ ರಾತ್ರಿಯಾಗಿರುತ್ತದೆ. ಆದರೆ, ನಾಡಿನಲ್ಲಿ ಇದನ್ನು ಬದಲಾವಣೆ ಮಾಡಿಕೊಂಡಿದ್ದಾರೆ ಎಂದರು.

ಕಾಡಿನಲ್ಲಿ ಪ್ರಾಣಿಗಳು ಯಾವ ಸಮಯದಲ್ಲಿ ದಾಳಿ ಮಾಡುತ್ತವೆ ಎಂಬುದು ತಿಳಿಯುತ್ತದೆ. ಆದರೆ, ನಾಡಿನಲ್ಲಿ ಯಾವ ಪ್ರಾಣಿ ಹೇಗೆ ದಾಳಿ ಮಾಡುತ್ತವೆ ಎಂಬುದನ್ನು ತಿಳಿಯಲು ಸಾಧ್ಯವಿಲ್ಲ. ಕಾಡಿನಲ್ಲಿ ಆಹಾರವೇ ಔಷಧಿಯಾಗಿತ್ತು. ಕಾಡಿನ ಯಾವುದೇ ಪ್ರಾಣಿ ಬಲವಂತ ಮಾಡುವುದಿಲ್ಲ. ಜೊತೆಗೆ ರೆಕಾರ್ಡ್ ಮಾಡಿಕೊಳ್ಳುವುದಿಲ್ಲ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಪ್ರಕೃತಿ ಜೊತೆ ಹೊಂದಾಣಿಕೆ ಮಾಡಿಕೊಂಡರೆ ಉತ್ತಮ ಸಮಾಜ ಸೃಷ್ಟಿಯಾಗುತ್ತದೆ ಎಂಬುದನ್ನು ಉತ್ತಪ್ಪ ಅವರು ಕೃತಿಗಳಲ್ಲಿ ವಿವರಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಕನ್ನಡ ಪ್ರಭ ಪ್ರಧಾನ ಸಂಪಾದಕ ರವಿ ಹೆಗಡೆ, ವಿಜಯ ಕರ್ನಾಟಕ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ, ಲೇಖಕ ಐತಿಚಂಡ ರಮೇಶ್ ಉತ್ತಪ್ಪ, ಮೈಸೂರು ಕಲ್ಚರಲ್ ಅಸೋಸಿಯೇಷನ್ ಎ.ಪಿ.ನಾಗೇಶ್, ಅಕ್ಷರ ಮಂಟಪ ಪ್ರಕಾಶನ ಪ್ರಕಾಶಕ ಚೇತನ್ ಕಣಬೂರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಡಿಸಿ ಕಚೇರಿ ಮುಂದೆ ಕೈಗಾರಿಕೆಗಳಿಗೆ ಭೂಮಿ ನೀಡಿದ ರೈತರ ಪ್ರತಿಭಟನೆ

ರೈತರ ಮಕ್ಕಳಿಗೆ ಉದ್ಯೋಗ ಕಲ್ಪಿಸುವಲ್ಲಿ ಅಧಿಕಾರಿಗಳು ವಿಫಲ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಕೆಐಎಡಿಬಿಗೆ ಭೂಮಿ ನೀಡಿದ ರೈತರ ಹಕ್ಕುಗಳ ಹೋರಾಟ ವೇದಿಕೆ, ಜನಾಂದೋಲನ ಮಹಾಮೈತ್ರಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಿದವು.

ಮೈಸೂರು, ಮೇ 9(ಜಿಎ)–ಕೈಗಾರಿಕೆಗಾಗಿ ಭೂಮಿ ನೀಡಿರುವ ರೈತರ ಮಕ್ಕಳಿಗೆ ಉದ್ಯೋಗ ನೀಡುವ ಸಂಬಂಧ ಸಭೆ ನಡೆಸಿ ಕೈಗಾರಿಕೆಗಳಿಗೆ ಸೂಚನಾ ಪತ್ರ ನೀಡಲು ಅಧಿಕಾರಿಗಳು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಆರೋಪಿಸಿ ಕೆಐಎಡಿಬಿಗೆ ಭೂಮಿ ನೀಡಿದ ರೈತರ ಹಕ್ಕುಗಳ ಹೋರಾಟ ವೇದಿಕೆ, ಜನಾಂದೋಲನ ಮಹಾಮೈತ್ರಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆಗಳು ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಿದವು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮೂಲಕ ಸುಮಾರು 15 ವರ್ಷದ ಹಿಂದೆಯೇ ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಅಡಕನಹಳ್ಳಿ, ತಾಂಡ್ಯ, ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ ನಿಯಮಗಳನ್ನು ಗಾಳಿಗೆ ತೂರಿ ಭೂಮಿ ನೀಡಿದ ರೈತರಿಗೆ ಕೈಗಾರಿಕೆಗಳಲ್ಲಿ ಕಾಯಂ ಉದ್ಯೋಗ ನೀಡಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಹಲವು ಹೋರಾಟದ ಬಳಿಕ 2023ರಲ್ಲಿ ಕೆಐಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನೇತೃತ್ವದಲ್ಲಿ ಭೂಮಿ ಕಳೆದುಕೊಂಡ ರೈತರ ಮಕ್ಕಳಿಗೆ ಕೆಲಸ ನೀಡಲು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿ ರಚಿಸಲಾಯಿತು. ಸಮಿತಿ ಮೂಲಕ ಉದ್ಯೋಗ ಪಡೆಯಲು ಅರ್ಜಿ ಸ್ವೀಕರಿಸಿದ್ದು, ಬೆರಳೆಣಿಕೆಯಷ್ಟು ಜನರಿಗೆ ಮಾತ್ರ ಉದ್ಯೋಗ ದೊರೆತಿದೆ. ಸಮಿತಿ ಆರಂಭವಾಗಿ ಎಂಟು ತಿಂಗಳು ಕಳೆದರೂ ರೈತರ ಅರ್ಜಿ ಪರಿಶೀಲಿಸಿ ಅವರಿಗೆ ಕೈಗಾರಿಕೆಗಳನ್ನು ಸೂಚಿಸಿಲ್ಲ ಎಂದು ದೂರಿದರು.

ಈ ಬಗ್ಗೆ ಸಮಿತಿಯ ಅಧ್ಯಕ್ಷರು ಲೋಕಸಭೆ ಚುನಾವಣೆಯ ನೆಪವೊಡ್ಡಿ ನಡೆಯಬೇಕಿದ್ದ ಸಭೆ ರದ್ದು ಮಾಡಿದ್ದಾರೆ. ರೈತರ ಸಮಸ್ಯೆಗೆ ಪೂರಕವಾಗಿ ನಡೆದುಕೊಳ್ಳುತ್ತಿಲ್ಲ. ಇತ್ತ ರೈತರು ಭೂಮಿಯೂ ಇಲ್ಲದೆ, ಉದ್ಯೋಗವೂ ಇಲ್ಲದೆ ಪರಿತಪಿಸುತ್ತಿದ್ದಾರೆ. ಇದು ರಾಜಕೀಯ ಪಕ್ಷದ ಕಾರ್ಯಕ್ರಮವಲ್ಲದ್ದರಿಂದ ಚುನಾವಣೆ ಅಡ್ಡ ಬರುವುದಿಲ್ಲ. ರೈತರ ಜೀವನಾಧಾರವಾಗಿದ್ದ ಭೂಮಿಯನ್ನು ಏಕಪಕ್ಷೀಯವಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ, ರೈತರ ಕುಟುಂಬಕ್ಕೆ ಸಿಗಬೇಕಿರುವ ಕಾನೂನಾತ್ಮಕ ಹಕ್ಕು ಇದುವರೆಗೂ ಸಿಕ್ಕಿಲ್ಲ. ಹೀಗಾಗಿ ಜಿಲ್ಲಾಧಿಕಾರಿಗಳು ಮಧ್ಯಪ್ರವೇಶಿಸಿ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ರೈತ ಸಂಘದ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಎಐಕೆಕೆಎಂಎಸ್ ಜಿಲ್ಲಾ ಸಂಚಾಲಕ ಎಚ್.ಎಂ.ಬಸವರಾಜು ಮತ್ತು ಭೂಮಿ ನೀಡಿದ ರೈತರು ಪಾಲ್ಗೊಂಡಿದ್ದರು.

ಮೇ 12, ಹಳೇ ಚಿತ್ರಗೀತೆಗಳ ಸಂಗೀತ ಸಂಜೆ



ಮೈಸೂರು, ಮೇ 9(ಎಂಟಿವೈ)– ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಮೇ 12ರಂದು ಸಂಜೆ 4 ಗಂಟೆಯಿಂದ ಹಳೆಯ ಚಲನಚಿತ್ರಗಳ ಗೀತೆಗಳ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೊಸ ಬೆಳಕು ಗಾಯನ ತಂಡದ ಅಧ್ಯಕ್ಷೆ ಉಷಾ ಸುಧಾಕರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರನಟ ಡಾ. ರಾಜ್‌ಕುಮಾರ್, ಡಾ. ಪುನೀತ್ ರಾಜ್‌ಕುಮಾರ್ ಹಾಗೂ ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಹಾಡಿರುವ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ ನಡೆಸಲಾಗುತ್ತದೆ. ಸುಮಾರು 32 ಹಾಡುಗಳನ್ನು 26 ಮಂದಿ ಗಾಯಕರು ಲೈವ್ ವಾದ್ಯದೊಂದಿಗೆ ಹಾಡಲಿದ್ದಾರೆ. ಹೊಸ ಗಾಯಕರಿಗೂ ಲೈವ್ ಕಾರ್ಯಕ್ರಮದ ಅವಕಾಶ ನೀಡಲಾಗುತ್ತಿದೆ. ಖ್ಯಾತ ಗಾಯಕರು ಸಹಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೊಸ ಬೆಳಕು ಗಾಯನ ತಂಡದ ಗಾಯಕರಾದ ರಾಧಿಕಾ, ಮೇಘ ಶ್ರೀಸುರೇಶ್, ರಮೇಶ್ ಹಾಗೂ ಶಿವಕುಮಾರ್ ಇದ್ದರು.

6ನೇ ತರಗತಿ ಪ್ರವೇಶ ಪರೀಕ್ಷೆ

ಮೈಸೂರು,ಮೇ 9– ಮೈಸೂರಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಚೇರಿಯಡಿ ಕಾರ್ಯನಿರ್ವಹಿಸುತ್ತಿರುವ ದೊಡ್ಡಕಾನ್ಯದ ಡಾ॥ ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ, ಪಿರಿಯಾಪಟ್ಟಣದ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಟಿ.ನರಸೀಪುರದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ 6ನೇ ತರಗತಿ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಮೇ 19 ರಂದು ಬೆಳಿಗ್ಗೆ 11 ರಿಂದ 1 ಗಂಟೆವರೆಗೆ ಪರೀಕ್ಷೆಯನ್ನು ಬೆಂಗಳೂರು–ಮೈಸೂರು ರಸ್ತೆಯ ಶೋಭಾ ಗಾರ್ಡನ್ ಹತ್ತಿರದ ಮೌಲಾನ ಆಜಾದ್ ಮಾದರಿ ಶಾಲೆ, ಹುಣಸೂರಿನ ಬಜಾರ್ ರಸ್ತೆಯಲ್ಲಿರುವ ಮೌಲಾನ ಆಜಾದ್ ಮಾದರಿ ಶಾಲೆ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಶೇ73.40 ತೇರ್ಗಡೆ

ವ್ಯಾಸಂಗಕ್ಕೆ ಅನುವು ಮಾಡಿಕೊಂಡಿದ್ದಾರೆ. ನಗರ ಪ್ರದೇಶಗಳಿಗಿಂತ ಗ್ರಾಮೀಣ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿರುವುದಲ್ಲದೆ, ಹೆಚ್ಚು ಪ್ರಥಮ ಸ್ಥಾನಗಳನ್ನು ಪಡೆಯುವಲ್ಲಿ ಮುಂದಿದ್ದಾರೆ. ಬಾಗಲಕೋಟೆ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ಮೊರಾರ್ಜಿ ದೇಸಾಯಿ ಶಾಲೆಯ ವಿದ್ಯಾರ್ಥಿನಿ ಅಂಕಿತಾ ಬಸಪ್ಪ ಕನ್ನೂರ 625ಕ್ಕೆ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ನಂತರ 625ಕ್ಕೆ 624 ಅಂಕಗಳೊಂದಿಗೆ ಏಳು ವಿದ್ಯಾರ್ಥಿಗಳು ಎರಡನೇ ಸ್ಥಾನ ಪಡೆದಿದ್ದಾರೆ. 14 ವಿದ್ಯಾರ್ಥಿಗಳು 623 ಅಂಕ ಪಡೆಯುವ ಮೂಲಕ 3ನೇ ಸ್ಥಾನದಲ್ಲೂ, 21 ಮಂದಿ 622 ಅಂಕ ಪಡೆದು 4ನೇ ಸ್ಥಾನದಲ್ಲೂ, 44 ವಿದ್ಯಾರ್ಥಿಗಳು 621 ಅಂಕ ಪಡೆದು 5ನೇ ಸ್ಥಾನದಲ್ಲಿದ್ದರೆ, 64 ಮಂದಿ 620 ಅಂಕ ಪಡೆದು 6ನೇ ಸ್ಥಾನ ಗಳಿಸಿದ್ದಾರೆ. ಉಡುಪಿ ಶೇಕಡ 94ರಷ್ಟು ಪಡೆದು ಮೊದಲ ಸ್ಥಾನದಲ್ಲೂ, ದಕ್ಷಿಣ ಕನ್ನಡ ಶೇಕಡ 92.12 ಪಡೆದು ದ್ವಿತೀಯ ಸ್ಥಾನ, ಶಿವಮೊಗ್ಗ ಶೇಕಡ 88.67 ರಷ್ಟು ಪಡೆದು ಮೂರನೇ ಸ್ಥಾನ ಹೊಂದಿದ್ದು, ಯಾದಗಿರಿ ಶೇಕಡ 50.59 ರಷ್ಟು ತೇರ್ಗಡೆ ಪ್ರಮಾಣದೊಂದಿಗೆ ಕೊನೆಯ ಸ್ಥಾನದಲ್ಲಿದೆ.

ಕೊಡಗು 88.67%, ಹಾಸನ 86.28%, ಮೈಸೂರು 85.5%, ಮಂಡ್ಯ 73.59%, ದಾವಣಗೆರೆ 72.48%, ಚಾಮರಾಜನಗರ 71.59% ತೇರ್ಗಡೆ ಪ್ರಮಾಣ ಪಡೆದಿವೆ.

ಅನುತ್ತೀರ್ಣರಾದ ವಿದ್ಯಾರ್ಥಿಗಳು ತೇರ್ಗಡೆ ಹೊಂದಲು ಎರಡು ಬಾರಿ ಪರೀಕ್ಷೆ ಬರೆಯಲು ಮಂಡಳಿ ಅವಕಾಶ ಮಾಡಿಕೊಟ್ಟಿದೆ. ಇದೇ ಮೊದಲ ಬಾರಿ ಸರ್ಕಾರ ಮೂರು ಪರೀಕ್ಷೆಗಳನ್ನು ಪರಿಚಯಿಸಿದ್ದು, ಮೇ ಮೂರನೇ ವಾರದಲ್ಲಿ ಎರಡನೇ ಪರೀಕ್ಷೆ ಆರಂಭವಾಗಲಿದೆ. ಉತ್ತೀರ್ಣರಾದ ವಿದ್ಯಾರ್ಥಿಗಳು ಸಹ ಉಳಿದ ಎರಡು ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು, ಯಾವ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯುತ್ತಾರೋ ಆ ಅಂಕ ಪಟ್ಟಿಯನ್ನು ಪಡೆಯಬಹುದಾಗಿದೆ.

ಅಧಿಕೃತ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಲಾದ ಮಾರ್ಕ್ ಶೀಟ್ ತಾತ್ಕಾಲಿಕ: ಅಧಿಕೃತ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಲಾದ ಆನ್‌ಲೈನ್ ಮಾರ್ಕ್ ಶೀಟ್ ತಾತ್ಕಾಲಿಕವಾಗಿರುವುದರಿಂದ, ವಿದ್ಯಾರ್ಥಿಗಳು ತಮ್ಮ ಶಾಲೆಗಳ ಅಧಿಕೃತ ಸೂಚನೆಯ ಪ್ರಕಾರ ಫಲಿತಾಂಶಗಳನ್ನು ಪ್ರಕಟಿಸಿದ ಕೆಲವು ದಿನಗಳ ನಂತರ ತಮ್ಮ ಶಾಲೆಗಳಿಂದ SSLC ಮಾರ್ಕ್‌ಶೀಟ್ ಪಡೆಯಬೇಕು.

ಪಾಸಾದರೂ ಅಂಕ ಹೆಚ್ಚಿಸಿಕೊಳ್ಳಲು ಪರೀಕ್ಷೆ–2, ಪರೀಕ್ಷೆ–3ಕ್ಕೆ ಅವಕಾಶ: ವಿದ್ಯಾರ್ಥಿಗಳು ಪಾಸಾಗಲಿ ಅಥವಾ ಫೇಲಾಗಲಿ 3 ಬಾರಿ ಪರೀಕ್ಷೆ ಬರೆಯಲು ಅವಕಾಶವಿದೆ. ಪಾಸಾದರೂ ಅಂಕ ಹೆಚ್ಚಿಸಿಕೊಳ್ಳಲು ಪರೀಕ್ಷೆ–2, ಪರೀಕ್ಷೆ–3 ಬರೆಯಬಹುದು. ಈ ಬಾರಿಯ ಫಲಿತಾಂಶ ಪ್ರಮಾಣ ಶೇ 73.40 ಆಗಿದ್ದು, ಕಳೆದ ಬಾರಿಗಿಂತ ಶೇ 10ರಷ್ಟು ಕಡಿಮೆ ಆಗಿದೆ. ಕಳೆದ ವರ್ಷ ಶೇ.83.89ರಷ್ಟು ಫಲಿತಾಂಶ ದಾಖಲಾಗಿತ್ತು.

ಅವಕಾಶ ಸಿಗದಿದ್ದಕ್ಕೆ ಫಲಿತಾಂಶ ಕಡಿತ

ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿತ್ತು. ಇದರಿಂದಾಗಿ ಪರೀಕ್ಷಾ ಮೇಲ್ವಿಚಾರಕರು ಕಟ್ಟುನಿಟ್ಟಿನಿಂದಾಗಿ ಪರೀಕ್ಷೆಗಳನ್ನು ನಡೆಸಿದರು. ಇದರ ಪರಿಣಾಮ ವಾಗಿ ಫಲಿತಾಂಶ ಶೇ. 30 ರಷ್ಟು ಕುಸಿಯಿತು. ಗ್ರೇಸ್ ಅಂಕ ಇಲ್ಲದೆ ಫಲಿತಾಂಶವನ್ನು ನೀಡಿದ್ದರೆ, ಇನ್ನೂ 1,75,000 ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುತ್ತಿದ್ದರು. ಸರ್ಕಾರ ಮಧ್ಯೆ ಪ್ರವೇಶ ಮಾಡಿ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ 20 ಅಂಕಗಳ ಗ್ರೇಸ್ ಮಾರ್ಕ್ಸ್ ನೀಡಿದ್ದಲ್ಲದೆ, ಪರೀಕ್ಷೆ ಪಾಸಾಗಲು ಇದ್ದ ಕನಿಷ್ಠ 35 ಅಂಕಗಳನ್ನು 25ಕ್ಕೆ ಇಳಿಸಿದ್ದರಿಂದ ಫಲಿತಾಂಶ ಕುಸಿತ ಶೇಕಡ 10ಕ್ಕೆ ಇಳಿಯಿತು. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ವೆಬ್‌ಕಾಸ್ಟಿಂಗ್ ವಿಧಾನಕ್ಕೆ ಹೊಂದಿಕೊಳ್ಳುವುದರಿಂದ ಫಲಿತಾಂಶದಲ್ಲಿ ಚೇತರಿಕೆ ಕಾಣುವ ವಿಶ್ವಾಸವಿದೆ ಎಂದು ಮಂಡಳಿ ಸಮರ್ಥಿಸಿಕೊಂಡಿದೆ.

ವಿಷ ಸೇವಿಸಿದ ಚಿಕ್ಕೋಡಿ ವಿದ್ಯಾರ್ಥಿನಿ

ಆದರೆ, ನಿಖಿಲ್ ಫೇಲ್ ಆಗಿರುವ ವಿಚಾರ ತಿಳಿದು ಮನೆಯವರು ಬೈಯ್ಯಬಹುದು, ಇದರಿಂದ ನನಗೆ ಅವಮಾನ ಆಗುತ್ತದೆ ಎಂದು ಮನನೊಂದು ಜಮೀನಿನ ಕಡೆಗೆ ಹೋಗಿದ್ದಾನೆ. ಅಲ್ಲಿ ಹಸು ಕಟ್ಟಲು ಇಟ್ಟಿದ್ದ ಹಗ್ಗದಿಂದ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ತಿಳಿದುಬಂದಿದೆ. ಇನ್ನು ಎಸ್‌ಎಸ್‌ಎಲ್‌ಸಿ ಫಲಿತಾಂಶ ನೋಡಲು ಶಾಲೆಯ ಕಡೆಗೆ ಹೋದ ಮಗ ಇನ್ನೂ ಬಂದಿಲ್ಲ ಎಂದು ಪೋಷಕರು ಶಾಲೆಯತ್ತ ತೆರಳಿದ್ದಾರೆ. ಆಗ ಶಿಕ್ಷಕರು ಆತನ 2 ವಿಷಯ ಫೇಲ್ ಆಗಿದ್ದು, ಮನೆಗೆ ಹೋದ ಎಂದು ತಿಳಿಸಿದ್ದಾರೆ. ಆಗ ಮಗನನ್ನು ಎಲ್ಲೆಡೆ ಹುಡುಕಿ ಕೊನೆಗೆ ಜಮೀನಿನ ಬಳಿ ಹೋಗಿ ನೋಡಿದಾಗ ಮರದಲ್ಲಿ ನೇಣು ಬಿಗಿದುಕೊಂಡು ನೇತಾಡುತ್ತಿರುವುದು ಕಂಡುಬಂದಿದೆ. ಕೂಡಲೇ ಆತನನ್ನು ಪೋಷಕರು ಮರದಿಂದ ಇಳಿಸಿದರೂ ಆತನ ಪ್ರಾಣಪಕ್ಷಿ ಹಾರಿ ಹೋಗಿತ್ತು. ವಿದ್ಯಾರ್ಥಿಯ ದುಡುಕಿನ ನಿರ್ಧಾರದಿಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಮತ್ತೊಂದೆಡೆ ಮದ್ದೂರು ತಾಲೂಕು ಹುಲಿಗೆರೆಪುರ ಗ್ರಾಮದ ಮಂಜೇಗೌಡ ಮತ್ತು ಭಾನುಮತಿ ದಂಪತಿ ಪುತ್ರಿ, ನಗರಕೆರೆ ಗ್ರಾಮದ ಪೂರ್ಣಿಮಾ ಪ್ರೌಢಶಾಲೆ ವಿದ್ಯಾರ್ಥಿನಿ ಅಮೃತಾ(15) ಎಂಬಾಕೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.57ರಷ್ಟು ಅಂಕ ಗಳಿಸಿ ತೇರ್ಗಡೆ ಹೊಂದಿದ್ದಳು. ಆದರೆ ತಾನು ಫೇಲಾಗಿರುವುದಾಗಿ ತಪ್ಪಾಗಿ ಭಾವಿಸಿಕೊಂಡು ಮನೆಯಲ್ಲೇ ನೇಣಿಗೆ ಶರಣಾಗಿದ್ದಾಳೆ.

ಚಿಕ್ಕೋಡಿಯಲ್ಲಿ ವಿದ್ಯಾರ್ಥಿನಿ ಆತ್ಮಹತ್ಯೆಗೆ ಯತ್ನ: ವಿದ್ಯಾರ್ಥಿನಿಯೊಬ್ಬಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಫೇಲ್ ಆಗಿದ್ದರಿಂದ ಮನೆಯಲ್ಲಿ ಇಟ್ಟಿದ್ದ ವಿಷವನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಗ್ರಾಮದಲ್ಲಿ ನಡೆದಿದೆ. ಕೂಡಲೇ ವಿದ್ಯಾರ್ಥಿನಿ ಒದ್ದಾಡುವುದನ್ನು ನೋಡಿದ ಪೋಷಕರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಸದ್ಯಕ್ಕೆ ವಿದ್ಯಾರ್ಥಿನಿ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದಾಳೆ. ಆಸ್ಪತ್ರೆಗೆ ಚಿಕ್ಕೋಡಿ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎ. ಮೇಕಲಮರಡಿ ಭೇಟಿ ಮಾಡಿ ಪೋಷಕರಿಗೆ ಸಾಂತ್ವನ ಹೇಳಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.05.2024 ಶುಕ್ರವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಮತ್ತು ಥೈರಾಯಿಡ್ ಗ್ರಂಥಿ ವ್ಯಾಧಿಗಳ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೀವಿತ ಕ್ರಿಯೇಷನ್ಸ್ :** ಕುಂಟೆಬಿಲ್ಲೆ ಚಲನಚಿತ್ರ ಮುಹೂರ್ತ ಸಮಾರಂಭ, ಸಾನ್ನಿಧ್ಯ : ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಅರ್ಕಮಠದ ಶ್ರೀನಿವಾಸ ಅರ್ಕ, ಯೋಗನರಸಿಂಹಸ್ವಾಮಿ ದೇವಸ್ಥಾನದ ಶ್ರೀ ಭಾಷ್ಯಂ ಸ್ವಾಮೀಜಿ, ಕ್ಲಾಪ್ ಮಾಡುವವರು : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ವಿಚ್ ಆನ್ ಮಾಡುವವರು : ಶಾಸಕ ಕೆ. ಹರೀಶ್‌ಗೌಡ, ವಿಶೇಷ ಆಹ್ವಾನಿತರು : ಶಾಸಕರಾದ ಜಿ.ಟಿ. ದೇವೇಗೌಡ, ಅನಿಲ್ ಚಿಕ್ಕಮಾದು, ಜಿ.ಡಿ. ಹರೀಶ್‌ಗೌಡ, ಮಾಜಿ ಶಾಸಕರಾದ ಎಲ್. ನಾಗೇಂದ್ರ, ಸಾ.ರಾ. ಮಹೇಶ್, ಎಂ.ಕೆ. ಸೋಮಶೇಖರ್, ಸ್ಥಳ: ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ದೇವಸ್ಥಾನ, ಕೆ.ಜಿ. ಕೊಪ್ಪಲು, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ಆದರ್ಶ ಸೇವಾ ಸಂಘ :** ಆಚಾರ್ಯತ್ರಯ ಜಯಂತಿ ಹಾಗೂ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಸಾಮೂಹಿಕ ಉಪನಯನ, ಸ್ಥಳ: ಶ್ರೀ ವಿದ್ಯಾಭಾರತೀ ಕಲ್ಯಾಣ ಮಂಟಪ, ಉತ್ತರಾದಿಮಠದ ರಸ್ತೆ, ಫೋರ್ಟ್ ಮೊಹಲ್ಲಾ, ಬೆಳಗ್ಗೆ 9.05 ರಿಂದ.

■ **ಸುತ್ತೂರು ಮಠ :** ಬಸವ ಜಯಂತಿ ಮತ್ತು ಅಕ್ಷಯ ತೃತೀಯ ಆಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ, ಪುಷ್ಪಾರ್ಚನೆ, ವಚನ ಗಾಯನ, ಉಪನ್ಯಾಸ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 8.30ಕ್ಕೆ.

■ **ಜಾಗತಿಕ ಲಿಂಗಾಯತ ಮಹಾಸಭಾ, ವಿವಿಧ ಸಂಘ ಸಂಸ್ಥೆಗಳು :** ಬಸವ ಜಯಂತಿ, ಬೆಳಗ್ಗೆ 8.30ಕ್ಕೆ ಷಟ್‌ಸ್ಥಲ ಧ್ವಜಾರೋಹಣ : ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಸಾನ್ನಿಧ್ಯ : ಶ್ರೀ ಸಿದ್ದಮಲ್ಲ ಸ್ವಾಮೀಜಿ, ಶರತ್‌ಚಂದ್ರ ಸ್ವಾಮೀಜಿ ಅವರಿಂದ ಬಸವಣ್ಣ ಮತ್ತು ಸಾಂಸ್ಕೃತಿಕ ನಾಯಕತ್ವ ಕುರಿತು ವಿಷಯಾವಲೋಕನ, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ವಿಶೇಷ ಅತಿಥಿಗಳು : ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಪಾಲಿಕೆ ಆಯುಕ್ತೆ ಡಾ.ಎನ್.ಎನ್. ಮಧು, ವಿಶೇಷ ಭೂ ಸ್ವಾಧೀನಾಧಿಕಾರಿ ಸುಪ್ರಿಯಾ ಬಣಗಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಪಾಲಿಕೆ ಮಾಜಿ ಸದಸ್ಯೆ ಸೌಮ್ಯ ಉಮೇಶ್, ಬೆಳಗ್ಗೆ 7 ಗಂಟೆಯಿಂದ 8ರವರೆಗೆ ಇಷ್ಟಲಿಂಗ ದೀಕ್ಷಾ, ಸಹಜ ಶಿವಯೋಗ ಕಾರ್ಯಕ್ರಮ, 9 ಗಂಟೆಗೆ ವೇದಿಕೆ ಕಾರ್ಯಕ್ರಮ, ವಚನ ಪಾಠಶಾಲೆ ಮತ್ತು ಶರಣ ಸಂವಾದ, ಸ್ಥಳ: ಬಸವ ಕೇಂದ್ರ, ಬಸವೇಶ್ವರ ರಸ್ತೆ, ಅಗ್ರಹಾರ

■ **ಡಾಕ್ಟರ್ ಯತೀಂದ್ರ ಯುವ ಬ್ರಿಗೇಡ್ :** ಕಾಯಕಯೋಗಿ ಶ್ರೀ ಬಸವೇಶ್ವರ ಜಯಂತಿ ಅಂಗವಾಗಿ ಗೋಪೂಜೆ ಹಾಗೂ ಮೇವು ವಿತರಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕಡಕೊಳ ಶಿವು, ನಿವೃತ್ತ ಶಿಕ್ಷಕ ಮಹದೇವಸ್ವಾಮಿ, ಸ್ಥಳ: ಸಿವೇಜ್ ಫಾರಂ ಆವರಣ, ಕನಕಗಿರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ :** ಪಿತೃವಾಕ್ಯ ಪರಿಪಾಲಕ ಪರಶುರಾಮ ಜಯಂತಿ, ಮುಖ್ಯ ಅತಿಥಿಗಳು : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ ಟಿ ಪ್ರಕಾಶ್, ಹಿರಿಯ ಸಮಾಜ ಸೇವಕರಾದ ಕೆ ರಘುರಾವ್ ವಾಜಪೇಯಿ, ಅರ್ಚಕರ ಸಂಘದ ಅಧ್ಯಕ್ಷರಾದ ವಿದ್ವಾನ್ ಕೃಷ್ಣಮೂರ್ತಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಎಚ್ ಎನ್ ಶ್ರೀಧರಮೂರ್ತಿ, ಸ್ಥಳ: ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಕಚೇರಿ, ಚಾಮರಾಜಪುರಂ, ಬೆಳಗ್ಗೆ 11ಕ್ಕೆ.

■ **ರಂಗಾಂತರಂಗ, ಮೈಸೂರು :** ಕಲರವ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು : ರಂಗ ಸಮಾಜದ ಸದಸ್ಯ ಡಾ. ರಾಜಪ್ಪ ದಳವಾಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್, ಸೋಮಾನಿ ಬಿ.ಎಡ್. ಕಾಲೇಜು ಪ್ರಿನ್ಸಿಪಾಲ್ ಡಾ. ಆರ್.ಜಿ. ಉಷಾ, ಯುವರಂಗ ನಿರ್ದೇಶಕ ಕೆ.ಎಂ. ಕೀರ್ತಿರಾಜ್, ಸ್ಥಳ : ಕಲಾಮಂದಿರ ಆವರಣ, ಸಂಜೆ 4.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಲೀಲಾ ಅಪ್ಪಾಜಿ, ಪ್ರಸ್ತುತಿ– ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತವಾಣಿ – ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ವೈ.ಪಿ. ಚಂದ್ರಶೇಖರ, ಮುಖ್ಯಸ್ಥರು, ಭೂಗೋಳ ಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗ. ಪ್ರಸ್ತುತಿ– ಎನ್. ಕೇಶವಮೂರ್ತಿ, ಪ್ರಾಯೋಜಕರು–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಮ್ಮ ಆರೋಗ್ಯ, 10.00 ಶಾಸ್ತ್ರೀಯ ಸಂಗೀತ –ವೊಲೈಟಿ ವೆಂಕಟೇಶ್ವರಲು – ಹಾಡುಗಾರಿಕೆ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ, 1.00 ಚಿತ್ರಗೀತೆಗಳು, 1.20 ಭಾವಗೀತೆ, 1.30 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಟಿ.ಎನ್.ಎಸ್. ಕೃಷ್ಣ – ಹಾಡುಗಾರಿಕೆ, 4.00 ಮಹಿಳಾರಂಗ, 4.30ವೃತ್ತಿ ಮಾರ್ಗದರ್ಶನ–"ಪಾಲಿಮರ್ ಸೈನ್ಸ್ ಅಂಡ್ ಟೆಕ್ನಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು" ಕುರಿತು ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪಾಲಿಮರ್ ಸೈನ್ಸ್ ಅಂಡ್ ಟೆಕ್ನಾಲಜಿ ವಿಭಾಗದ ಮುಖ್ಯಸ್ಥರಾದ ಅಸೋಸಿಯೇಟ್ ಪ್ರೊಫೆಸರ್ ಡಾ. ಎಸ್. ರೂಪಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 5.45 ಕರಾಮುವಿವಿ ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ. ವೈ.ಪಿ. ಚಂದ್ರಶೇಖರ, ಮುಖ್ಯಸ್ಥರು, ಭೂಗೋಳ ಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗ. ಪ್ರಸ್ತುತಿ– ಎನ್. ಕೇಶವಮೂರ್ತಿ, 6.55 ಕೃಷಿರಂಗ– ಪಪಾಯ ಬೇಸಾಯ ಕುರಿತು ಸಂವಾದ, ಭಾಗವಹಿಸುತ್ತಾರೆ–ಮಳವಳ್ಳಿ ತಾಲೂಕು ರಾವಣಿಯ ನಿತ್ಯಾನಂದ ಹಾಗೂ ಮೈಸೂರಿನ ಡಾ. ವಸಂತ್ ಕುಮಾರ್ ತಿಮಕಾಪುರ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಕನ್ನಡ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ ಕೊಡಿಯಾಲ ಕೆ.ಎನ್. ಕೃಷ್ಣಮೂರ್ತಿ ಹಾಗೂ ಕೆ. ಎನ್. ಸುರೇಂದ್ರ–ನಾಗಸ್ವರ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು

ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದ ಟಾಸ್ಕ್‌ನಲ್ಲಿ ಯಶಸ್ವಿಯಾದ ಮೈಸೂರು ಜಿಲ್ಲಾಡಳಿತ

ಎಸ್‌ಎಸ್‌ಎಲ್‌ಸಿಯಲ್ಲಿ 19ರಿಂದ 7ನೇ ಸ್ಥಾನಕ್ಕೇರಿಕೆ

- ಟಾಪ್ 5ರೊಳಗೆ ಇರಬೇಕೆಂದು ಸಿಎಂ ತಾಕೀತು ಮಾಡಿದ್ದರು
- ಆದರೆ 10ರೊಳಗೆ ಬರುವಲ್ಲಿ ಶೈಕ್ಷಣಿಕ ವಲಯ ತೃಪ್ತಿ
- ಮೈಸೂರು ಜಿಲ್ಲಾ ಡಿಡಿಪಿಐ ಸುದ್ದಿಗೋಷ್ಠಿಯಲ್ಲಿ ಫಲಿತಾಂಶ ವಿವರಣೆ

ಮೈಸೂರು, ಮೇ 9(ಎಸ್‌ಬಿಡಿ)– ಮೈಸೂರು ಜಿಲ್ಲೆ ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಟಾಪ್ 10 ರೊಳಗೆ ಸ್ಥಾನ ಪಡೆದಿದೆ. ಈ ಮೂಲಕ ತವರು ಜಿಲ್ಲೆಯ ಫಲಿತಾಂಶ ಸುಧಾರಿಸಬೇಕೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಶಯ ಈಡೇರಿದಂತಾಗಿದೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಮೂರ್‍ನಾಲ್ಕು ವರ್ಷಗಳಿಂದ ಮೈಸೂರು ಜಿಲ್ಲೆಗೆ ಹಿನ್ನಡೆಯಾಗಿತ್ತು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಟಾಪ್ 5ರೊಳಗೆ ಮೈಸೂರು ಸ್ಥಾನ ಗಳಿಸಬೇಕೆಂದು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಟಾಸ್ಕ್ ನೀಡಿ, ಇದನ್ನು ಗಂಭೀರವಾಗಿ ಪರಿಗಣಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದರು. ಪರಿಣಾಮ ಕಳೆದ ಬಾರಿ ಶೇ.83ರಷ್ಟು ಫಲಿತಾಂಶದೊಂದಿಗೆ ರಾಜ್ಯ ಮಟ್ಟದಲ್ಲಿ 19ನೇ ಸ್ಥಾನದಲ್ಲಿದ್ದ ಮೈಸೂರು, ಈ ಬಾರಿ ಶೇ.87.19 ಫಲಿತಾಂಶದೊಂದಿಗೆ 7ನೇ ಸ್ಥಾನಕ್ಕೆ ಜಿಗಿದಿದೆ. ಇದರಿಂದ ಇಲ್ಲಿನ ಶೈಕ್ಷಣಿಕ ವಲಯದಲ್ಲಿ ಹೊಸ ಚೈತನ್ಯ ಮೂಡಿದಂತಾಗಿದೆ.

ಪ್ರಸಕ್ತ 2023–24ನೇ ಸಾಲಿನಲ್ಲಿ 17,847 ಬಾಲಕರು ಹಾಗೂ 18,949 ಬಾಲಕಿಯರು ಸೇರಿ ಒಟ್ಟು 36,796 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇವರಲ್ಲಿ 14,681(ಶೇ.82.26) ಬಾಲಕರು ಹಾಗೂ 17,402(ಶೇ.91.84) ಬಾಲಕಿಯರು ಸೇರಿ ಒಟ್ಟು 32,083 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. 1466 ಮಂದಿ ಎ+ ಗ್ರೇಡ್, 4168 ಎ, 6044 ಬಿ+, 7524 ಬಿ, 8233 ಸಿ+ ಹಾಗೂ 4648 ವಿದ್ಯಾರ್ಥಿಗಳು ಸಿ ಗ್ರೇಡ್ ಪಡೆದಿದ್ದಾರೆ. 3166 ಬಾಲಕರು ಹಾಗೂ 1547 ಬಾಲಕಿಯರು ಸೇರಿ ಒಟ್ಟು 4,713 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಈ ಬಾರಿ ಪರೀಕ್ಷೆಗೆ ಹಾಜರಾಗಿದ್ದ 291 ವಿಶೇಷ ಅಗತ್ಯವಿರುವ ಮಕ್ಕಳ (ಸಿಡಬ್ಲ್ಯೂಎಸ್‌ಎನ್)ಲ್ಲಿ 225 ವಿದ್ಯಾರ್ಥಿಗಳು(ಶೇ.77.32) ತೇರ್ಗಡೆ ಹೊಂದಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಹೆಚ್.ಕೆ.ಪಾಂಡು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

148 ಶಾಲೆಗೆ ಶೇ.100: ಜಿಲ್ಲೆಯಲ್ಲಿ 276 ಸರ್ಕಾರಿ, 133 ಅನುದಾನಿತ ಹಾಗೂ 271 ಅನುದಾನ ರಹಿತ ಸೇರಿದಂತೆ ಒಟ್ಟು 680 ಶಾಲೆಗಳಿವೆ. ಇದರಲ್ಲಿ ಕ್ರಮವಾಗಿ 45, 10 ಹಾಗೂ 93 ಸೇರಿದಂತೆ ಒಟ್ಟು 148 ಶಾಲೆಗಳು ಶೇ.100ರಷ್ಟು ಫಲಿತಾಂಶ ಸಾಧಿಸಿವೆ. ಜಿಲ್ಲೆಯಲ್ಲಿ ಯಾವುದೇ ಶಾಲೆ ಶೂನ್ಯ ದಾಖಲಿಸಿಲ್ಲ ಎಂಬುದು ಈ ಬಾರಿಯ ವಿಶೇಷವಾಗಿದೆ.

ನರಸೀಪುರ ಪ್ರಥಮ: ಶೈಕ್ಷಣಿಕ ಕ್ಷೇತ್ರವಾರು ಫಲಿತಾಂಶ ಗಮನಿಸಿದರೆ ಕಳೆದ ಬಾರಿ ಹಿನ್ನಡೆ ಅನುಭವಿಸಿದ್ದ ತಿ.ನರಸೀಪುರ ತಾಲೂಕು ಈ ಬಾರಿ ಶೇ.93.30 ಫಲಿತಾಂಶದೊಂದಿಗೆ ಪ್ರಥಮ ಸ್ಥಾನ ಗಳಿಸಿದೆ. ಮೈಸೂರು ಗ್ರಾಮಾಂತರ ಕ್ಷೇತ್ರ ಶೇ.93.05, ಮೈಸೂರು ದಕ್ಷಿಣ ಶೇ.90.42, ಕೆ.ಆರ್.ನಗರ ಶೇ.89.48, ನಂಜನಗೂಡು ಶೇ.86.74, ಹುಣಸೂರು ಶೇ.85.24, ಮೈಸೂರು ಉತ್ತರ ಶೇ.84.68, ಪಿರಿಯಾಪಟ್ಟಣ ಶೇ.81.03 ಹಾಗೂ ಹೆಚ್.ಡಿ.ಕೋಟೆ ಶೇ.79.09 ಫಲಿತಾಂಶದೊಂದಿಗೆ ಈ ಬಾರಿ ಕೊನೆಯ ಸ್ಥಾನದಲ್ಲಿದೆ.

620ಕ್ಕಿಂತ ಹೆಚ್ಚು ಪಡೆದವರು: ಸದ್ವಿದ್ಯಾ ಶಾಲೆಯ ಡಿ.ಎಸ್.ಧನ್ವಿ (623 ಅಂಕ), ಭಾರತೀಯ ವಿದ್ಯಾಭವನದ ಎಸ್.ಜಾಹ್ನವಿ(623), ವಿಜಯ ವಿಠಲ ಶಾಲೆಯ ಪ್ರಥಮ್ ಎಸ್.ಭಾರದ್ವಾಜ್(622), ಸದ್ವಿದ್ಯಾ ಶಾಲೆಯ ಎ.ಕಾವ್ಯಶ್ರೀ(621), ಆರ್.ಭೂಮಿಕಾ(621), ವಿಜಯ ವಿಠಲ ಶಾಲೆಯ ಬಿ.ಸುದೀಪ್ತ(621), ಭಾರತೀಯ ವಿದ್ಯಾಭವನದ ಎಸ್.ಪ್ರಗತಿ(621), ಸಾವಿತ್ರಿ ಕಾನ್ವೆಂಟ್‌ನ ಅನ್ವಿತಾ ಬಿ.ಭಟ್(620), ಸದ್ವಿದ್ಯಾ ಶಾಲೆಯ ಶ್ರೀಗೌರಿ ಎಸ್.ಕುಮಾರ್ (620) ಹಾಗೂ ವಿಜಯ ವಿಠಲ ಶಾಲೆಯ ಎಂ.ಡಿ.ಸುದೀಕ್ಷಾ(620) ಸೇರಿ ಜಿಲ್ಲೆಯ 11 ವಿದ್ಯಾರ್ಥಿಗಳು 620ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ.

ನಂಜನಗೂಡು ತಾಲೂಕು ದೇಬೂರು ಆದರ್ಶ ವಿದ್ಯಾಲಯದ ಹೆಚ್.ಎಂ.ಬಾಂಧವ್ಯ(618), ಚಿಕ್ಕಹುಣಸೂರು ಆದರ್ಶ ವಿದ್ಯಾಲಯದ ಎಸ್.ಸ್ನೇಹಾ(613) ಸೇರಿದಂತೆ ಸರ್ಕಾರಿ ಶಾಲೆಗಳ 29 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

ರಿಪೀಟರ್ಸ್ ರಿಸಲ್ಟ್: ಮರು ಪರೀಕ್ಷೆ ತೆಗೆದುಕೊಂಡಿದ್ದ 816 ಮಂದಿಯಲ್ಲಿ 382 ಮಂದಿ ತೇರ್ಗಡೆ ಹೊಂದಿದ್ದು, 434 ಮಂದಿ ಅನುತ್ತೀರ್ಣಗೊಂಡಿದ್ದಾರೆ.



ಸುದ್ದಿಗೋಷ್ಠಿ ನಂತರ ಡಿಡಿಪಿಐ ಹೆಚ್.ಕೆ.ಪಾಂಡು ಜಿಲ್ಲೆಯ ಟಾಪರ್ಸ್ ಡಿ.ಎಸ್.ಧನ್ವಿ ಹಾಗೂ ಎಸ್.ಜಾಹ್ನವಿಯನ್ನು ಅಭಿನಂದಿಸಿದರು.

ಉತ್ತಮ ಫಲಿತಾಂಶ ಸಂಘಟಿತ ಪ್ರಯತ್ನದ ಫಲ

ಮೈಸೂರು: ಸಂಘಟಿತ ಪರಿಶ್ರಮದಿಂದ ಈ ಬಾರಿ ಮೈಸೂರು ಜಿಲ್ಲೆಗೆ ಉತ್ತಮ ಫಲಿತಾಂಶ ಬಂದಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಕೆ.ಪಾಂಡು ಹರ್ಷ ವ್ಯಕ್ತಪಡಿಸಿದರು. ಮುಖ್ಯಮಂತ್ರಿಗಳು ಕೆಡಿಪಿ ಸಭೆಯಲ್ಲಿ ಟಾಸ್ಕ್ ನೀಡಿದ್ದರು. ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಪಂ ಸಿಇಓ ಮಾರ್ಗದರ್ಶದಲ್ಲಿ ಜಿಲ್ಲಾ ತಂಡ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿತು. ಪರೀಕ್ಷಾ ನೋಡಲ್ ಅಧಿಕಾರಿ ನಿರುಪಾವೆಸ್ಲಿ ಸೇರಿದಂತೆ ಜಿಲ್ಲಾ ತಂಡದ ಪ್ರತಿಯೊಬ್ಬರೂ ಕ್ರಿಯಾ ಯೋಜನೆ ಅನುಷ್ಠಾನಕ್ಕೆ ಹಗಲಿರುಳು ಶ್ರಮಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಪ್ರೌಢಶಾಲಾ ಸಹಶಿಕ್ಷಕರ ಸಂಘ, ಮುಖ್ಯ ಶಿಕ್ಷಕರ ಸಂಘ, ಬೋಧಕೇತರ ಸಂಘಗಳೂ ಉತ್ತಮ ಸಹಕಾರ ನೀಡಿವೆ. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುಖ್ಯಶಿಕ್ಷಕರು, ಸಹ ಶಿಕ್ಷಕರ ಪರಿಶ್ರಮ ತುಂಬಾ ಇದೆ ಎಂದು ಫಲಿತಾಂಶ ಸುಧಾರಣೆಗೆ ಕಾರಣರಾದವರಿಗೆ ಧನ್ಯವಾದ ತಿಳಿಸಿದರು.

ಉತ್ತಮ ವಾತಾವರಣ ನಿರ್ಮಾಣ: ಈ ವರ್ಷವೂ ಸಿದ್ಧತೆ ಮಾಡಿಕೊಂಡಿದ್ದೇವೆ. ಈಗಾಗಲೇ ಶೇ.80ರಷ್ಟು ಪಠ್ಯ ಪುಸ್ತಕ ಬಂದಿದ್ದು, ಕೆಲ ದಿನಗಳಲ್ಲೇ ವಿತರಣೆ ಮಾಡಲಾಗುತ್ತದೆ. ಒಂದೇ ಬಾರಿಗೆ ಸಮವಸ್ತ್ರ ಬರಲಿದೆ. ಶಾಲಾ ಕಟ್ಟಡ ದುರಸ್ತಿ, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಎಲ್ಲಾ ಮೂಲ ಸೌಕರ್ಯಕ್ಕೆ ಈಗಾಗಲೇ ಕ್ರಿಯಾ ಯೋಜನೆ ಮಾಡಿಕೊಳ್ಳಲಾಗಿದೆ. ಒಟ್ಟಾರೆ ಕಲಿಕೆಗೆ ಉತ್ತಮ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ. ಖಾಸಗಿ ಶಾಲೆಗಳಲ್ಲಿ ಇಲಾಖೆ ನಿಗದಿಪಡಿಸಿದ ಶುಲ್ಕವನ್ನು ಸಂಗ್ರಹಿಸಬೇಕು. ಶುಲ್ಕ ಪಟ್ಟಿಯನ್ನು ಶಾಲೆಯ ಸೂಚನಾ ಫಲಕದಲ್ಲಿ ಪ್ರದರ್ಶನ ಮಾಡುವುದರ ಜೊತೆಗೆ ಅದರ ಪ್ರತಿಯನ್ನು ಡಿಡಿಪಿಐ ಕಚೇರಿಗೆ ಕಳುಹಿಸಬೇಕು ಎಂದು ಸೂಚನೆ ನೀಡಲಾಗಿದೆ ಎಂದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಪರಿಷತ್ ಚುನಾವಣೆ; ನಾಮಪತ್ರ ಸಲ್ಲಿಕೆ ಆರಂಭ

ಪಕ್ಷೇತರ ಅಭ್ಯರ್ಥಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ನಾಮಪತ್ರ ಸಲ್ಲಿಕೆ

ಮೈಸೂರು,ಮೇ 9(ಪಿಎಂ)– ವಿಧಾನ ಪರಿಷತ್ತಿನ ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಸಂಬಂಧ ಗುರುವಾರ ಅಧಿಸೂಚನೆ ಪ್ರಕಟವಾಗುವುದರೊಂದಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭಗೊಂಡಿತು. ಮೊದಲ ದಿನ ಪಕ್ಷೇತರ ಅಭ್ಯರ್ಥಿಯಾಗಿ ಕೆಆರ್ ನಗರದ ಕೆ.ಸಿ.ಪುಟ್ಟಸಿದ್ದಶೆಟ್ಟಿ ನಾಮಪತ್ರ ಸಲ್ಲಿಸಿದರು.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಅವರ ಉಮೇದುವಾರಿಕೆ ಸಲ್ಲಿಸಿದರು. ನಾಮಪತ್ರ ಸಲ್ಲಿಸಲು ಮೇ 16 ಕಡೆ ದಿನವಾಗಿದ್ದು, ಮೇ 17ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಮೇ 20 ಉಮೇದುವಾರಿಕೆ ಹಿಂಪಡೆಯಲು ಕೊನೆ ದಿನವಾಗಿದ್ದು, ಜೂ.3 ರಂದು ಬೆಳಗ್ಗೆ 8ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದೆ. ಜೂ.6ರಂದು ಮತ ಎಣಿಕೆ ನಡೆದು ಫಲಿತಾಂಶ ಹೊರಬೀಳಲಿದೆ.



ಕೆ.ಸಿ.ಪುಟ್ಟಸಿದ್ದಶೆಟ್ಟಿ

ದಕ್ಷಿಣ ಶಿಕ್ಷಕರ ಕ್ಷೇತ್ರವು ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳ ವ್ಯಾಪ್ತಿಯನ್ನು ಒಳಗೊಂಡಿದೆ. ಕ್ಷೇತ್ರದ ಅಂತಿಮ ಮತದಾರರ ಪಟ್ಟಿಯು 2023ರ ಡಿ.30ರಂದು ಪ್ರಕಟಗೊಂಡಿದ್ದು, ಕ್ಷೇತ್ರದಲ್ಲಿ 10,355 ಪುರುಷರು, 8,022 ಮಹಿಳೆಯರು ಹಾಗೂ ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ 18,379 ಮತದಾರರು ಇದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ವೇಳಾಪಟ್ಟಿಯಂತೆಯೇ ನೈರುತ್ಯ ಶಿಕ್ಷಕರ ಕ್ಷೇತ್ರ ಮತ್ತು ನೈರುತ್ಯ ಪದವೀಧರರ ಕ್ಷೇತ್ರದ ಪರಿಷತ್ ಚುನಾವಣೆ ನಡೆಯುತ್ತಿದ್ದು, ಇಂದು ಈ ಕ್ಷೇತ್ರಗಳ ಸಂಬಂಧ ಯಾವುದೇ ನಾಮಪತ್ರ ಸಲ್ಲಿಕೆಯಾಗಿಲ್ಲ.

ಹಳೇ ಮೈಸೂರು ಭಾಗದ ಕೆಲವೆಡೆ ಭಾರಿ ಮಳೆ ಸಾಧ್ಯತೆ

ಮೈಸೂರು,ಮೇ 9(ಪಿಎಂ)– ಭಾರತೀಯ ಹವಾಮಾನ ಇಲಾಖೆ ಪ್ರಕಾರ ಮುಂದಿನ ಐದು ದಿನಗಳವರೆಗೆ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ಕೆಲವು ಭಾಗದಲ್ಲಿ ಭಾರಿ ಗಾಳಿಯೊಂದಿಗೆ (40ರಿಂದ 50 ಕಿ.ಮೀ.) ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ.

ಇದರ ಹೊರತಾಗಿ ಮೇ 10ರಿಂದ 14ರವರೆಗೆ ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗವು ಪ್ರಕಟಣೆಯಲ್ಲಿ ತಿಳಿಸಿದೆ.

ಹೂಟಗಳ್ಳಿ ನಗರಸಭೆ ವತಿಯಿಂದ ಹೆಬ್ಬಾಳು ಕೆರೆಯಲ್ಲಿ ಸತ್ತ ಮೀನುಗಳ ತೆರವು

ಮೈಸೂರು, ಮೇ 9 (ಆರ್‌ಕೆ)–ಹೂಟಗಳ್ಳಿ ನಗರಸಭೆ ವತಿಯಿಂದ ಮೈಸೂರಿನ ಹೆಬ್ಬಾಳು ಕೆರೆಯಲ್ಲಿ ಸತ್ತು ತೇಲುತ್ತಿದ್ದ ಸಾವಿರಾರು ಮೀನುಗಳನ್ನು ತೆರವುಗಳಿಸಲಾಗಿದೆ. ಬುಧವಾರ (ನಿನ್ನೆ)ದಿಂದ ತೆಪ್ಪ ಮೂಲಕ ಕಾರ್ಯಾಚರಣೆ ನಡೆಸಿ ಸಂಗ್ರಹಿಸಿದ ಸತ್ತ ಮೀನುಗಳನ್ನು ಹೆಬ್ಬಾಳು ಕೆರೆ ಪಕ್ಕದಲ್ಲಿ ಜೆಸಿಬಿಯಿಂದ ಗುಂಡಿ ತೆಗೆದು ಹೂತುಹಾಕಿದರು. ಈ ಕುರಿತಂತೆ 'ಮೈಸೂರು ಮಿತ್ರ' ನಿಗೆ ಮಾಹಿತಿ ನೀಡಿದ ಹೂಟಗಳ್ಳಿ ನಗರಸಭೆ ಆಯುಕ್ತ ಬಿ.ಎಸ್.ಚಂದ್ರಶೇಖರ, ಹೆಬ್ಬಾಳು ಕೆರೆಯಲ್ಲಿ ಸತ್ತು ತೇಲುತ್ತಿದ್ದ ಸಾವಿರಾರು ಮೀನುಗಳನ್ನು ಸಂಗ್ರಹಿಸಿ ಭೂಮಿಯಲ್ಲಿ ಹೂಳಿದ್ದೇವೆ. ಕೆರೆ ನೀರಿನಲ್ಲಿ ತೇಲುತ್ತಿದ್ದ ಪ್ಲಾಸ್ಟಿಕ್ ಪದಾರ್ಥ, ಕಸ–ಕಡ್ಡಿ ತ್ಯಾಜ್ಯವನ್ನು ಸಹ ನಗರಸಭೆ ಸಿಬ್ಬಂದಿಯ ಮೂಲಕ ಸ್ವಚ್ಛಗೊಳಿಸಿದ್ದೇವೆ ಎಂದರು. ಕೆರೆಗೆ ನೀರು ಹರಿದು ಬರುವ ಮಳೆ ನೀರಿನ ಚರಂಡಿಗಳನ್ನು ಬುಧವಾರದಿಂದ ಸ್ವಚ್ಛಗೊಳಿಸುತ್ತಿದ್ದೇವೆ. ಹಾಗೂ ಮಲೀನ ನೀರು ಕೆರೆಗೆ ತಲುಪುತ್ತಿದೆಯೇ ಎಂಬುದನ್ನು ತಿಳಿಯಲು ಸರ್ವೆಕಾರ್ಯ ನಡೆಸುತ್ತಿದ್ದೇವೆ. ಒಂದು ವೇಳೆ ಯಾವುದೇ ಕೈಗಾರಿಕಾ ಘಟಕದಿಂದ ತ್ಯಾಜ್ಯ ಹೆಬ್ಬಾಳು ಕೆರೆ ತಲುಪುತ್ತಿರುವುದು ಕಂಡು ಬಂದರೆ ಅಂತಹ ಕಂಪನಿಗೆ ನೋಟಿಸ್ ನೀಡಿ ಸಂಪರ್ಕ ಬಂದ್ ಮಾಡಿಸುತ್ತೇವೆ ಎಂದು ತಿಳಿಸಿದರು. ಕೆರೆ ಆವರಣ, ವಾಕಿಂಗ್ ಪಾತ್, ಪ್ರವೇಶ ದ್ವಾರಗಳಲ್ಲಿ ಅಡ್ಡಾದಿಡ್ಡಿಯಾಗಿ ಬಿಸಾಡಿರುವ ಕಸಗಳನ್ನು ತೆರವುಗೊಳಿಸಿ ಸ್ವಚ್ಛ ಮಾಡಲಾಗಿದ್ದು, ಮುಂದೆ ಪ್ಲಾಸ್ಟಿಕ್ ಕಸ ಹಾಕಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಚಂದ್ರಶೇಖರ ತಿಳಿಸಿದರು. ಹೆಬ್ಬಾಳು ಕೆರೆಗೆ ಕೈಗಾರಿಕಾ ತ್ಯಾಜ್ಯ ಹಾಗೂ ಒಳಚರಂಡಿ ಮಲಿನ ನೀರು ಹರಿದು ಬರುತ್ತಿದ್ದರೆ, ಅದನ್ನು ಬಂದ್ ಮಾಡಿ ಸಂಬಂಧಪಟ್ಟ ಕೈಗಾರಿಕೆಗೆ ನೋಟಿಸ್ ಜಾರಿ ಮಾಡಿ ಅಗತ್ಯ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಅವರು ತಿಳಿಸಿದರು.



ಅಕ್ಷಯ ತೃತೀಯ ಶುಭ ಸಂದರ್ಭ ಚಿನ್ನಾಭರಣ ಖರೀದಿಗೆ ಬಿಗ್ ಆಫರ್

ಮೈಸೂರು, ಮೇ 9(ಎಂಕೆ)– ಅಕ್ಷಯ ತೃತೀಯ ಶುಭ ದಿನದಂದು ಮೈಸೂರಿನ ಸುಪ್ರಸಿದ್ಧ ಚಿನ್ನಾಭರಣ ವ್ಯಾಪಾರ ಮಳಿಗೆಗಳಲ್ಲಿ ಆಕರ್ಷಕ ರಿಯಾಯಿತಿ ನೀಡಿದ್ದು, ವಿವಿಧ ಬಗೆಯ ಚಿನ್ನ, ವಜ್ರಾಭರಣ ಖರೀದಿ ಆಫರ್ ಜೋರಾಗಿದೆ.

ಭೀಮಾ

BHIMA JEWELLERS GOLD • DIAMONDS • SILVER • PLATINUM

ಮೈಸೂರಿನ ಸಬರ್ಬನ್ (ಗ್ರಾಮಾಂತರ) ಬಸ್ ನಿಲ್ದಾಣ(ಬಿಎನ್ ರೋಡ್)ಬಳಿ ಇರುವ ಭೀಮಾ ಜ್ಯುವೆಲ್‌ನಲ್ಲಿ ಅಕ್ಷಯ ತೃತೀಯ ಅಂಗವಾಗಿ ವಿಶೇಷ ರಿಯಾಯ್ತಿಗಳನ್ನು ಘೋಷಿಸಲಾಗಿದೆ. ಬೆಳ್ಳಿ ಪ್ರತಿ ಕೆಜಿಗೆ ಬರೋಬ್ಬರಿ 4000 ರೂ. ರಿಯಾಯ್ತಿ ಪಡೆದುಕೊಳ್ಳಬಹುದು. ಹಾಗೆಯೇ ಚಿನ್ನಾಭರಣ ಪ್ರತಿ ಖರೀದಿ ಮೇಲೆ ಗ್ರಾಂಗೆ 400 ರೂ. ಹಾಗೂ ವಜ್ರಾಭರಣಗಳ ಪ್ರತಿ ಕ್ಯಾರೆಟ್‌ಗೆ 15 ಸಾವಿರ ರೂ.ವರೆಗೆ ರಿಯಾಯ್ತಿ ಪಡೆಯಬಹುದಾಗಿದೆ. ಚಿನ್ನದ ನಾಣ್ಯಗಳಿಗೆ ಝೀರೋ ಪರ್ಸೆಂಟ್ ಮೇಕಿಂಗ್ ಚಾರ್ಜ್ ಸೌಲಭ್ಯ ನೀಡಲಾಗಿದೆ.

ಜೋಸ್ ಆಲುಕ್ಕಾಸ್

JOS ALUKKAS A TRADITION OF FINE JEWELLERY

ಜೋಸ್ ಆಲುಕ್ಕಾಸ್‌ನಲ್ಲಿ 60 ಸಾವಿರ ರೂ. ಮೌಲ್ಯದ ಚಿನ್ನಾಭರಣಗಳು ಮತ್ತು ವಜ್ರಗಳ ಖರೀದಿ ಮೇಲೆ ಚಿನ್ನದ ನಾಣ್ಯ ಉಚಿತ, ಚಿನ್ನಾಭರಣಗಳ ಮೇಕಿಂಗ್ ಚಾರ್ಜಸ್ ಮೇಲೆ ಶೇ.30 ರಷ್ಟು ರಿಯಾಯ್ತಿ ಹಾಗೂ ವಜ್ರಗಳ ಮೇಲೆ ಶೇ.20, ಪ್ಲಾಟಿನಂ ಆಭರಣಗಳ ಮೇಲೆ ಶೇ.7 ರಷ್ಟು ರಿಯಾಯ್ತಿ ನೀಡಿದ್ದು, ಹಳೆಯ ಚಿನ್ನಾಭರಣಗಳನ್ನು ಎಕ್ಸ್‌ಚೇಂಜ್ ಮಾಡಿಕೊಳ್ಳುವ ಮೂಲಕ ಅಧಿಕ ಲಾಭವನ್ನು ಪಡೆದುಕೊಳ್ಳಬಹುದಾಗಿದೆ. 50 ಸಾವಿರ ರೂ.ಗಳಿಗಿಂತ ಹೆಚ್ಚಿನ ವಹಿವಾಟನ್ನು ಎಸ್‌ಬಿಐ ಕಾರ್ಡ್ ಬಳಕೆ ಮೂಲಕ ನಡೆಸಿದರೆ ಇನ್‌ಸ್ಟಂಟ್ ಆಗಿ 5 ಸಾವಿರ ರೂ. ಕ್ಯಾಶ್‌ಬ್ಯಾಕ್ ದೊರೆಯಲಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ.0821–2441012 ಸಂಪರ್ಕಿಸಬಹುದಾಗಿದೆ.

ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸದಿದ್ದರೆ

ಜೂ.1ರಿಂದ ದಂಡ ವಸೂಲಿ

ಬೆಂಗಳೂರು, ಮೇ9– ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಆದೇಶದಂತೆ ರಾಜ್ಯದಲ್ಲಿ ಕರ್ನಾಟಕ ಸಾರಿಗೆ ಇಲಾಖೆಯಿಂದ ಎಲ್ಲ ವಾಹನಗಳಿಗೂ ಹೈ ಸೆಕ್ಯುರಿಟಿ ರಿಜಿಸ್ಟ್ರೇಶನ್ ಪ್ಲೇಟ್‌ಗಳ ಅಳವಡಿಕೆಗೆ ಆದೇಶ ಹೊರಡಿಸಿದೆ. ಆದರೆ, ವಾಹನ ಸವಾರರ ಮನವಿಗೆ ಓಗೊಟ್ಟಿದ್ದ ರಾಜ್ಯ ಸರ್ಕಾರ ಈಗಾಗಲೇ 3ನೇ ಬಾರಿ ಮೇ 31ಕ್ಕೆ ಗಡುವು ವಿಸ್ತರಿಸಿದೆ. ಈಗ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಅವಧಿ ವಿಸ್ತರಣೆಗೆ ಸರ್ಕಾರ ನಿರಾಸಕ್ತಿ ತೋರಿದ್ದು, ಜೂನ್ ತಿಂಗಳಿಂದ ದಂಡ ವಸೂಲಿ ಮಾಡಲು ನಿರ್ಧರಿಸಿದೆ.



ಏಪ್ರಿಲ್ 2019 ಕ್ಕಿಂತ ಮೊದಲು ರಾಜ್ಯದಲ್ಲಿ ನೋಂದಣಿ ಮಾಡಿಕೊಂಡ ಎಲ್ಲಾ ದ್ವಿಚಕ್ರ, ತ್ರಿಚಕ್ರ ವಾಹನಗಳು, ಕಾರುಗಳು, ಲಘು, ಮಧ್ಯಮ ಮತ್ತು ಭಾರಿ ವಾಹನಗಳಿಗೆ ಈ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ನಿಯಮ ಅನ್ವಯವಾಗಲಿದೆ. ಈವರೆಗೆ ರಾಜ್ಯದಲ್ಲಿ 34 ಲಕ್ಷ ವಾಹನಗಳಿಗೆ ಮಾತ್ರ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಮಾಡಲಾಗಿದೆ. ಈಗ ಮೇ 31 ರೊಳಗೆ ಎಲ್ಲಾ ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಕಡ್ಡಾಯವಾಗಿದ್ದು, ಇನ್ನು 21 ದಿನವಷ್ಟೇ ಬಾಕಿಯಿದೆ. ಇನ್ನೂ 1.56 ಕೋಟಿ ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಬಾಕಿಯಿದೆ. ಈಗಾಗಲೇ ಸಾರಿಗೆ ಇಲಾಖೆಯಿಂದ ರಾಜ್ಯದ ವಾಹನ ಸವಾರರಿಗೆ 3 ಬಾರಿ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಅವಧಿ ವಿಸ್ತರಣೆ ಮಾಡಲಾಗಿದೆ. ಆದರೂ ವಾಹನ ಸವಾರರು ಆಸಕ್ತಿ ತೋರಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ದಂಡ ವಿಧಿಸಲು ಮುಂದಾಗಿದೆ. ಜೂ.1 ರಿಂದ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಿಕೊಳ್ಳದ ವಾಹನ ಸವಾರರಿಗೆ ದಂಡಾಸ್ತ್ರ ಪ್ರಯೋಗಕ್ಕೆ ಮುಂದಾಗಿದೆ. ಹೀಗಾಗಿ, ವಾಹನ ಮಾಲೀಕರ ವಿರುದ್ಧ ಸಾರಿಗೆ ಇಲಾಖೆ ದಂಡಂ ದಶಗುಣಂ ಅಸ್ತ್ರ ಪ್ರಯೋಗಕ್ಕೆ ಸಿದ್ಧವಾಗಿದೆ. ರಾಜ್ಯದಲ್ಲಿ ಜೂ.1ರೊಳಗೆ ಹೆಚ್‌ಎಸ್ ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಮಾಡಿಕೊಳ್ಳದ ವಾಹನ ಸವಾರರಿಗೆ ಮೊದಲು ಬಾರಿಗೆ 500 ರೂ. ದಂಡ, ಎರಡನೇ ಬಾರಿ ಸಿಕ್ಕಿ ಬಿದ್ದರೆ 1,000 ರೂ. ದಂಡ ವಿಧಿಸಲು ತೀರ್ಮಾನ ಕೈಗೊಂಡಿದೆ.

ರಾಜ್ಯದಲ್ಲಿ ಕೊಡಗು ಜಿಲ್ಲೆಗೆ 4ನೇ ಸ್ಥಾನ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 88.67 ಶೇಖಡವಾರು ಅಂಕ

ಮಡಿಕೇರಿ, ಮೇ 9–ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಕೊಡಗು ಜಿಲ್ಲೆ 88.67 ಶೇಖಡವಾರು ಅಂಕ ಗಳಿಸುವ ಮೂಲಕ ರಾಜ್ಯದಲ್ಲಿ 4ನೇ ಸ್ಥಾನ ಪಡೆದಿದೆ. ಕಳೆದ ಬಾರಿ ಶೇ.93ರಷ್ಟು ಫಲಿತಾಂಶ ದಾಖಲಿಸಿದ್ದರೂ, 8ನೇ ಸ್ಥಾನದಲ್ಲಿದ್ದ ಕೊಡಗು ಜಿಲ್ಲೆ ಈ ಬಾರಿ ಶೈಕ್ಷಣಿಕವಾಗಿ ಅತ್ಯುತ್ತಮ ಸಾಧನೆ ತೋರಿದೆ.

ಜಿಲ್ಲೆಯಲ್ಲಿ ಒಟ್ಟು 27 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿದ್ದು, 6123 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಈ ಪೈಕಿ 5429 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.88.67 ಫಲಿತಾಂಶ ದೊರಕಿದೆ. 2848 ಬಾಲಕರು ಪರೀಕ್ಷೆ ಬರೆದಿದ್ದು, ಈ ಪೈಕಿ 2631 ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ.92.38 ಅಂಕ ದಾಖಲಿಸಿದ್ದರೆ, 3158 ಬಾಲಕಿಯರು ಪರೀಕ್ಷೆ ಬರೆದಿದ್ದು, ಈ ಪೈಕಿ 2926 ವಿದ್ಯಾರ್ಥಿನಿಯರು ತೇರ್ಗಡೆಯಾಗಿ ಶೇ.93.95 ಅಂಕ ಪಡೆದಿದ್ದಾರೆ. ಒಟ್ಟು 117 ವಿದ್ಯಾರ್ಥಿಗಳು ಪುನರಾವರ್ತಿತರಾಗಿ ಪರೀಕ್ಷೆ ಬರೆದು ಉತ್ತೀರ್ಣರಾಗಿದ್ದಾರೆ. ಎಂದಿನಂತೆ ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸುವ ಮೂಲಕ ದಾಖಲೆಯನ್ನು ಕಾಪಾಡಿಕೊಂಡಿದ್ದಾರೆ.

ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳ ಪೈಕಿ ಮಡಿಕೇರಿ ವ್ಯಾಪ್ತಿಯ 13, ವಿರಾಜಪೇಟೆ 18 ಹಾಗೂ ಸೋಮವಾರಪೇಟೆ ವ್ಯಾಪ್ತಿಯ ಒಟ್ಟು 33 ಶಾಲೆಗಳು ಶೇ.100 ಫಲಿತಾಂಶ ಪಡೆದು ಸಾಧನೆ ತೋರಿವೆ. ಜಿಲ್ಲೆಯ ವಿವಿಧ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಒಟ್ಟು 11 ವಿದ್ಯಾರ್ಥಿಗಳು 610ಕ್ಕೂ ಹೆಚ್ಚು ಅಂಕ ಪಡೆಯುವ ಮೂಲಕ ಶೈಕ್ಷಣಿಕ ಸಾಧನೆ ಮಾಡಿದ್ದಾರೆ.

> ಈ ಬಾರಿ ಕೊಡಗು ಜಿಲ್ಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗರಿಷ್ಠ 5ನೇ ಸ್ಥಾನ ಪಡೆಯುವ ಗುರಿ ಯೋಜನೆ ರೂಪಿಸಲಾಗಿತ್ತು. ಹೀಗಾಗಿ ಶಾಲಾ, ತಾಲೂಕು, ಜಿಲ್ಲಾವಾರು ಶೈಕ್ಷಣಿಕ ಪ್ರಗತಿ ನಿಗದಿ ಮಾಡಲಾಗಿತ್ತು. ವಿದ್ಯಾರ್ಥಿಗಳಿಗೆ 8ನೇ ತರಗತಿಯಿಂದಲೇ ಹಂತ ಹಂತವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸಲು ಸಿದ್ಧತೆ ಮಾಡಲಾಗುತ್ತಿದೆ. ಇದರಿಂದಲೇ ಉನ್ನತ ಸ್ಥಾನ ಪಡೆಯಲು ಸಾಧ್ಯವಾಗಿದೆ.
> –ಎಂ.ಚಂದ್ರಕಾಂತ್, ಉಪನಿರ್ದೇಶಕ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

> ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ವೆಬ್‌ಕಾಸ್ಟಿಂಗ್ ಮೂಲಕ ಪರೀಕ್ಷೆಯ ಮೇಲೆ ನಿಗಾ ವಹಿಸಲಾಗಿತ್ತು. ಈ ಕುರಿತು ವಿದ್ಯಾರ್ಥಿಗಳು ಹಾಗೂ ಪೋಷಕರಿಗೂ ಮಾಹಿತಿ ನೀಡಿ ಪರೀಕ್ಷೆಯ ಭಯಪಡದಂತೆ ಧೈರ್ಯ ತುಂಬಲಾಗಿತ್ತು. ಅಲ್ಲದೇ, ವಿಷಯವಾರು ಶಿಕ್ಷಕರಿಗೆ ಪ್ರತಿ ಕೇಂದ್ರದಲ್ಲೂ ತರಬೇತಿ ನೀಡಲಾಗಿತ್ತು. ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕೊಡಗು ಜಿಲ್ಲೆಗೆ 4ನೇ ಸ್ಥಾನ ತಂದು ಕೊಡುವಲ್ಲಿ ಅಪಾರ ಶ್ರಮ ವಹಿಸಿದ್ದಾರೆ.
> –ಎಂ.ಮಹದೇವಸ್ವಾಮಿ, ಎಸ್‌ಎಸ್‌ಎಲ್‌ಸಿ ನೋಡಲ್ ಅಧಿಕಾರಿ

ಜಿಲ್ಲಾ ಜೆಡಿಎಸ್ ಕಾರ್ಯಕರ್ತರ ಪ್ರತಿಭಟನೆ

ಪೆನ್‌ಡ್ರೈವ್ ಪ್ರಕರಣ ಸಿಬಿಐ ತನಿಖೆಗೆ ಒಪ್ಪಿಸಲು ಆಗ್ರಹ

ಮಡಿಕೇರಿ, ಮೇ 9–ರಾಜ್ಯ ಸರ್ಕಾರದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಎಸ್‌ಐಟಿ ಬದಲಾಗಿ 'ಪೆನ್‌ಡ್ರೈವ್' ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ಕೊಡಗು ಜಿಲ್ಲಾ ಜೆಡಿಎಸ್ ಕಾರ್ಯಕರ್ತರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಜೆಡಿಎಸ್ ಜಿಲ್ಲಾ ಕಾರ್ಯಾಧ್ಯಕ್ಷ ಕಾಟ್ನಮನೆ ವಿಠಲ್ ಗೌಡ, ಮಹಿಳಾ ಘಟಕದ ಅಧ್ಯಕ್ಷೆ ಬಿ.ಬಿ.ಪುಷ್ಪಾವತಿ ನೇತೃತ್ವದಲ್ಲಿ ಗಾಂಧಿ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಮೆರವಣಿಗೆ ನಡೆಸಿದ ಜೆಡಿಎಸ್ ಕಾರ್ಯಕರ್ತರು, ಕೆಲಕಾಲ ಪ್ರತಿಭಟನೆ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಪರಮೇಶ್ವರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಕಾಂಗ್ರೆಸ್ ಸರ್ಕಾರ ದ್ವೇಷ ರಾಜಕಾರಣದ ಮೂಲಕ ಜೆಡಿಎಸ್ ಅನ್ನು ನಿರ್ನಾಮ ಮಾಡುವ ಸಂಚು ರೂಪಿಸುತ್ತಿದೆ. ರಾಜ್ಯ ಸರ್ಕಾರವೇ ನೇಮಿಸಿರುವ ಎಸ್‌ಐಟಿ ಕಾಂಗ್ರೆಸ್‌ನವರ ಅಣತಿಯಂತೆ ತನಿಖೆ ನಡೆಸುತ್ತಿದೆ. ಆದ್ದರಿಂದ ಪ್ರಕರಣವನ್ನು ಸಂಪೂರ್ಣವಾಗಿ ಸಿಬಿಐಗೆ ಒಪ್ಪಿಸಬೇಕು. ಸಂತ್ರಸ್ತ ಮಹಿಳೆಯರ ಭಾವಚಿತ್ರಗಳನ್ನು ಸೋರಿಕೆ ಮಾಡಿರುವ ಎಲ್ಲಾ ಆರೋಪಿಗಳನ್ನು ತನಿಖೆ ನಡೆಸಬೇಕು. ಅವರ ವಿರುದ್ಧವೂ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿದರು.

ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿಯಿಂದ ನಿಷ್ಪಕ್ಷಪಾತ ತನಿಖೆ ನಡೆಯುತ್ತಿಲ್ಲ. ರಾಜಕೀಯವಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಗೌರವಕ್ಕೆ ಚ್ಯುತಿ ತಂದು, ಜೆಡಿಎಸ್ ನಿರ್ಮೂಲನೆ ಮಾಡುವ ಉದ್ದೇಶದಿಂದ ಪೆನ್‌ಡ್ರೈವ್ ಪ್ರಕರಣ ನಡೆದಿದೆ ಎಂದು ಆರೋಪಿಸಿದರು.



ಮಡಿಕೇರಿಯ ಜಿಲ್ಲಾಧಿಕಾರಿ ಕಚೇರಿ ಎದುರು ಪೆನ್‌ಡ್ರೈವ್ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸಂಪುಟದಿಂದ ಕೈ ಬಿಡಿ: ಪ್ರಜ್ವಲ್ ರೇವಣ್ಣರನ್ನು ಗುರಿಯಾಗಿಸಿ ಸಾಮಾಜಿಕ ಜಾಲತಾಣ ಮತ್ತು ಪೆನ್‌ಡ್ರೈವ್ ಮೂಲಕ ಅಶ್ಲೀಲ ಚಿತ್ರಗಳನ್ನು ಡಿ.ಕೆ.ಶಿವಕುಮಾರ್ ಬಹಿರಂಗಪಡಿಸಿರುವುದನ್ನು ರಾಜ್ಯದ ಜನತೆ ಅರಿತಿದ್ದಾರೆ. ಆದ್ದರಿಂದ ಡಿ.ಕೆ.ಶಿವಕುಮಾರ್ ಅವರನ್ನು ಸಚಿವ ಸಂಪುಟದಿಂದ ಕೈ ಬಿಡಬೇಕೆಂದು ಕಾಟ್ನಮನೆ ವಿಠಲ್ ಗೌಡ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ಕೋರ್ ಕಮಿಟಿ ಸದಸ್ಯರಾದ ಸಿ.ಎಲ್.ವಿಶ್ವ ಪ್ರವೀಣ್, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಜಾಸಿರ್, ಜಿಲ್ಲಾ ಹಿರಿಯ ಉಪಾಧ್ಯಕ್ಷ ಪಾಣತ್ತಲೆ ವಿಶ್ವನಾಥ್, ಮಹಿಳಾ ಎಸ್‌ಸಿ ಘಟಕದ ಅಧ್ಯಕ್ಷೆ ಜಯಮ್ಮ ಪ್ರಮುಖರಾದ ಗುಲಾಬಿ ಜನಾರ್ಧನ್, ರವಿಕಿರಣ್, ಸಿ.ಎಸ್.ನಾಗರಾಜು, ಕೋಟಿ ರಮಣ, ಕಾರ್ಮಾಡು ಸುಬ್ಬಣ್ಣ, ಕೊತೂರು ಸುರೇಶ್, ಪಿ.ಎ.ಮಂಜುನಾಥ್, ಶರತ್ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಉರುಳಿ ಬಿದ್ದ ಹಾಲಿನ ಲಾರಿ


ತಿತಿಮತಿ–ಚೆನ್ನಂಗೊಲ್ಲಿ ಮಾರ್ಗದಲ್ಲಿ ಉರುಳಿ ಬಿದ್ದ ಹಾಲಿನ ಲಾರಿ.

ಮಡಿಕೇರಿ, ಮೇ 9–ಕೂಡಿಗೆ ಡೇರಿಯಿಂದ ಪೊನ್ನಂಪೇಟೆ ತಾಲೂಕಿಗೆ ಹಾಲು ಸರಬರಾಜು ಮಾಡುತ್ತಿದ್ದ ಮಿನಿ ಲಾರಿ ಚಾಲಕನ ನಿಯಂತ್ರಣ ತಪ್ಪಿ ಉರುಳಿ ಬಿದ್ದ ಘಟನೆ ತಿತಿಮತಿ–ಚೆನ್ನಂಗೊಲ್ಲಿ ಮಾರ್ಗದಲ್ಲಿ ಬುಧವಾರ ರಾತ್ರಿ ನಡೆದಿದೆ.

ಗೋಣಿಕೊಪ್ಪ ಹಾಗೂ ಪೊನ್ನಂಪೇಟೆ ಕಡೆಗೆ ಹಾಲು ಸಾಗಿಸುತ್ತಿದ್ದ ಲಾರಿ ರಾತ್ರಿ 12.30ರಲ್ಲಿ ತಿತಿಮತಿ ಚೆನ್ನಂಗೊಲ್ಲಿ ಮಧ್ಯೆ ಮಗುಚಿ ಬಿದ್ದಿದ್ದು, ಲಾರಿ ಚಾಲಕ ಮತ್ತು ಸಹಾಯಕನಿಗೆ ಸಣ್ಣಮಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಅಪಘಾತದಿಂದ ಲಾರಿ ಹಾಗೂ ಹಾಲಿನ ಉತ್ಪನ್ನಗಳಿಗೆ ಹಾನಿಯಾಗಿವೆ. ಗೋಣಿಕೊಪ್ಪ ಠಾಣಾಧಿಕಾರಿ ರೂಪಾ ಬಿರೇದಾರ್ ಮತ್ತು ಸಿಬ್ಬಂದಿ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಪ್ರಜ್ವಲ್ ರೇವಣ್ಣ ಬಂಧನಕ್ಕೆ ಒತ್ತಾಯ

ವಿರಾಜಪೇಟೆ: ಪೆನ್‌ಡ್ರೈವ್ ಪ್ರಕರಣದ ಸಂಸದ ಪ್ರಜ್ವಲ್ ರೇವಣ್ಣನನ್ನು ಬಂಧಿಸಿ ಸೂಕ್ತ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಗತಿಪರ ಸಂಘಟನೆಯ ಕಾರ್ಯಕರ್ತರು ತಾಲೂಕು ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಂಚಾಲಕಿ ಪದ್ಮಿನಿ ಶ್ರೀಧರ್ ಮಾತನಾಡಿ, ಪ್ರಜ್ವಲ್ ರೇವಣ್ಣ ಅಧಿಕಾರ ಹಾಗೂ ಕುಟುಂಬದ ಪ್ರಭಾವ ಬಳಸಿಕೊಂಡು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ, ಆ ಮಹಿಳೆಯರ ನಗ್ನ ವಿಡಿಯೋ ಮಾಡಿದ್ದಾರೆ. ಈಗ ಈ ಪ್ರಕರಣವನ್ನು ಮುಚ್ಚಿಹಾಕಲು ವಿದೇಶಕ್ಕೆ ಪರಾರಿಯಾಗಿದ್ದಾರೆ ಎಂದು ಆರೋಪಿಸಿದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪೆನ್‌ಡ್ರೈವ್ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿದ್ದರು, ಆದರೆ, ಈಗ ಪ್ರಜ್ವಲ್ ರೇವಣ್ಣ ಪರವಾಗಿ ಮಾತನಾಡುತ್ತಿದ್ದಾರೆ. ಎಸ್‌ಐಟಿ ಅಧಿಕಾರಿಗಳು ಯಾವುದೇ ರಾಜಕೀಯ ಪ್ರಭಾವ ಹಾಗೂ ಒತ್ತಡಕ್ಕೆ ಒಳಗಾಗದೆ ಪ್ರಕರಣದ ಆರೋಪಿಗಳನ್ನು ಬಂಧಿಸಿ, ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ನಂತರ ಪ್ರತಿಭಟನಾಕಾರರು ತಾಲೂಕು ಕಚೇರಿಯ ಶಿರಸ್ತೇದಾರ್ ಡಿ.ಅಮಿತಾ ರೈ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ವೈ.ಎಸ್.ಪಾರ್ವತಿ, ಜೆ.ಆರ್.ಪ್ರೇಮಾ, ಜಿ.ರೇಖಾ, ಸಿಐಟಿಯು ಸಂಘಟನೆ ಜಿಲ್ಲಾಧ್ಯಕ್ಷ ಪಿ.ಆರ್.ಭರತ್, ಕಾರ್ಯದರ್ಶಿ ಎ.ಸಿ.ಸಾಬು, ಹೆಚ್.ಪಿ.ರಮೇಶ್ ಭಾಗವಹಿಸಿದ್ದರು.


ಪ್ರಜ್ವಲ್ ರೇವಣ್ಣನನ್ನು ಬಂಧಿಸುವಂತೆ ಆಗ್ರಹಿಸಿ ಜನವಾದಿ ಮಹಿಳಾ, ಪ್ರಗತಿಪರ ಸಂಘಟನೆಯ ಕಾರ್ಯಕರ್ತರು ತಾಲೂಕು ಕಚೇರಿಯ ಶಿರಸ್ತೇದಾರ್ ಡಿ.ಅಮಿತಾ ರೈ ಅವರಿಗೆ ಮನವಿ ಸಲ್ಲಿಸಿದರು.

ಎಸ್‌ಎಸ್‌ಎಲ್‌ಸಿ: ಮಂಡ್ಯ ಜಿಲ್ಲೆಗೆ 74.54ರಷ್ಟು ಫಲಿತಾಂಶ

19ನೇ ಸ್ಥಾನಕ್ಕೆ ಕುಸಿದ ಮಂಡ್ಯ, 623 ಅಂಕ ಪಡೆದ ನವನೀತ್ ಜಿಲ್ಲೆಗೆ ಪ್ರಥಮ, ರಾಜ್ಯಕ್ಕೆ ತೃತೀಯ

ಮಂಡ್ಯ,ಮೇ9–ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಿದ್ದು, ಕಳೆದ ಹಲವು ವರ್ಷಗಳಿಂದ 2 ಅಥವಾ ಮೂರನೇ ಸ್ಥಾನ ಕಾಪಾಡಿಕೊಳ್ಳುತ್ತಿದ್ದ ಮಂಡ್ಯ ಜಿಲ್ಲೆ ಈ ಬಾರಿ ಫಲಿತಾಂಶದಲ್ಲಿ ಭಾರೀ ಕುಸಿತ ಕಂಡಿದ್ದು, ಶೇ.74.54ರಷ್ಟು ಫಲಿತಾಂಶ ಪಡೆದು 19ನೇ ಸ್ಥಾನಕ್ಕೆ ಕುಸಿದಿದೆ.

ಈ ಬಾರಿ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 20,246 ಮಂದಿ ಪರೀಕ್ಷೆ ಬರೆದಿದ್ದರು. ಈ ಪೈಕಿ 15092 ಮಂದಿ ಉತ್ತೀರ್ಣರಾಗಿದ್ದಾರೆ. ಬಾಲಕರು 10,212 ಮಂದಿ ಪರೀಕ್ಷೆ ಬರೆದಿದ್ದು, 6645 ಮಂದಿ ಉತ್ತೀರ್ಣರಾದರೆ ಹೆಣ್ಣು ಮಕ್ಕಳ ಪೈಕಿ 10,034 ಮಂದಿ ಪರೀಕ್ಷೆ ಬರೆದು 8447 ಮಂದಿ ಉತ್ತೀರ್ಣರಾಗಿದ್ದಾರೆ. ಈ ಪೈಕಿ ಬಾಲಕರು 65.07ರಷ್ಟು ಉತ್ತೀರ್ಣರಾದರೆ, ಹೆಣ್ಣು ಮಕ್ಕಳ ಪೈಕಿ 84.18ರಷ್ಟು ಫಲಿತಾಂಶ ಬಂದಿದೆ.

ಈ ಪೈಕಿ ಸರ್ಕಾರಿ ಶಾಲೆಗೆ 71.85ರಷ್ಟು ಫಲಿತಾಂಶ, 63.27ರಷ್ಟು ಅನುದಾನಿತ ಶಾಲೆಗೆ ಫಲಿತಾಂಶ ಬಂದರೆ, 87.46ರಷ್ಟು ಅನುದಾನ ರಹಿತ ಶಾಲೆಗಳಿಗೆ ಫಲಿತಾಂಶ ಬಂದಿದೆ. ಮಂಡ್ಯ ತಾಲ್ಲೂಕಿನ ತುಂಬಕೆರೆ ಗ್ರಾಮದರಾದ ಮೊರಾರ್ಜಿ ಶಾಲೆಯಲ್ಲಿ ವ್ಯಾಸಾಂಗ ಮಾಡುತ್ತಿದ್ದ ಕೆ.ಸಿ.ನವನೀತ್ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದು, ರಾಜ್ಯಕ್ಕೆ ತೃತೀಯ ಸ್ಥಾನ ಪಡೆದಿದ್ದು, 625ಕ್ಕೆ 623 ಅಂಕ ಪಡೆದಿದ್ದಾರೆ. ಇನ್ನು ಮಳವಳ್ಳಿ ತಾಲೂಕಿನ ಸರ್ಕಾರಿ ಶಾಲೆಯಲ್ಲಿ ವ್ಯಾಸಾಂಗ ಮಾಡುತ್ತಿದ್ದ ಮಾರಗೌಡನಹಳ್ಳಿ ಗ್ರಾಮದ ಹೆಚ್.ವಿ.ವಿನಯ್ 621 ಅಂಕ ಪಡೆದು ದ್ವಿತೀಯ ಸ್ಥಾನದಲ್ಲಿದ್ದರೆ, ಮದ್ದೂರು ತಾಲೂಕಿನ ಶಿವಪುರ ಗ್ರಾಮದ ಪೂರ್ಣಪ್ರಜ್ಞಾ ಶಾಲೆಯ ವಿದ್ಯಾರ್ಥಿನಿ ಎಸ್.ಖುಷಿ 619 ಅಂಕ ಪಡೆದಿದ್ದಾರೆ. ಅದೇ ತಾಲೂಕಿನ ಅದೇ ಶಾಲೆಯ ಗಗನ್ ಎಸ್.ಗೌಡ 619 ಸ್ಥಾನ ಪಡೆದು ಮೂರನೇ ಸ್ಥಾನದಲ್ಲಿದ್ದು, ಈ ನಾಲ್ಕು ವಿದ್ಯಾರ್ಥಿಗಳು ಜಿಲ್ಲೆಗೆ ಪ್ರಥಮ ಮೂರು ಅಂಕಗಳಿಸಿದ ವಿದ್ಯಾರ್ಥಿಗಳಾಗಿದ್ದಾರೆ

ವಲಯವಾರು ಫಲಿತಾಂಶ: 86.93ರಷ್ಟು ಫಲಿತಾಂಶ ಪಡೆದಿರುವ ಮಂಡ್ಯ ಉತ್ತರ ವಲಯ ಪ್ರಥಮ ಸ್ಥಾನ ಪಡೆದರೆ, 80.81ರಷ್ಟು ಫಲಿತಾಂಶ ಪಡೆದ ಮಂಡ್ಯ ದಕ್ಷಿಣ ವಲಯ ಎರಡನೇ ಸ್ಥಾನದಲ್ಲಿದೆ. 79.07ರಷ್ಟು ಫಲಿತಾಂಶ ಪಡೆದು ಶ್ರೀರಂಗಪಟ್ಟಣ ಮೂರನೇ ಸ್ಥಾನದಲ್ಲಿದ್ದರೆ, 74.03ರಷ್ಟು ಸ್ಥಾನ ಪಡೆದ ನಾಗಮಂಗಲ ನಾಲ್ಕನೇ ಸ್ಥಾನದಲ್ಲಿದೆ.

ಮಳವಳ್ಳಿ ತಾಲೂಕಿಗೆ 73.55ರಷ್ಟು ಫಲಿತಾಂಶ ಬಂದು ಐದನೇ ಸ್ಥಾನದಲ್ಲಿದ್ದು, 72.54ರಷ್ಟು ಫಲಿತಾಂಶ ಪಡೆದ ಪಾಂಡವಪುರ ಆರನೇ ಸ್ಥಾನದಲ್ಲಿದೆ. 70.22ರಷ್ಟು ಫಲಿತಾಂ ಪಡೆದ ಮದ್ದೂರು ಏಳನೇ ಸ್ಥಾನದಲ್ಲಿದ್ದರೆ, 67.11ರಷ್ಟು ಫಲಿತಾಂಶ ಪಡೆದ ಕೆಆರ್.ಪೇಟೆ ಕೊನೆಯ ಸ್ಥಾನದಲ್ಲಿದೆ.

ಡಿಸಿ ಅಭಿನಂದನೆ ಸಲ್ಲಿಕೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದಲ್ಲಿ ಜಿಲ್ಲೆಯ 32 ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶ ಪಡೆದುಕೊಂಡಿದ್ದು, ಮಂಡ್ಯ ಜಿಲ್ಲೆಯ ಮೊರಾರ್ಜಿ ದೇಸಾಯಿ ಶಾಲೆಯ ನವನೀತ್ ವಿದ್ಯಾರ್ಥಿ 625 ಅಂಕಗಳಿಗೆ 623 ಅಂಕಗಳನ್ನು ಪಡೆದು ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಹಾಗೂ ಮಂಡ್ಯ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ.

ಸರ್ಕಾರಿ ಶಾಲೆಯ ವಿದ್ಯಾರ್ಥಿ ಪ್ರಥಮ ಸ್ಥಾನ ಪಡೆದುಕೊಂಡಿರುವುದು ಇತರೆ ವಿದ್ಯಾರ್ಥಿಗಳಿಗೆ ಮಾದರಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಶ್ಲಾಘಿಸಿದರು.

ನಗರದ ಡಿಸಿ ಕಚೇರಿಯಲ್ಲಿ ವಿದ್ಯಾರ್ಥಿಯನ್ನು ಅಭಿನಂದಿಸಿ ಮಾತನಾಡಿದ ಅವರು, ನವನೀತ್ ಅವರ ತಂದೆ ತಾಯಿ ಕೃಷಿಕರಾಗಿದ್ದು, ರೈತರ ಮಕ್ಕಳು ಸಹ ಉನ್ನತ ಸಾಧನೆ ಮಾಡಬಹುದು ಎಂದು ತೋರಿಸಿಕೊಟ್ಟಿದ್ದಾರೆ ಎಂದರು.

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣವಾಗಿದ್ದೇನೆ ಎಂದು ತಪ್ಪು ಗ್ರಹಿಕೆಯಿಂದ ಮದ್ದೂರು ತಾಲೂಕಿನ ಓರ್ವ ವಿದ್ಯಾರ್ಥಿನಿ ಹಾಗೂ ನಾಗಮಂಗಲ ತಾಲೂಕಿನ ಓರ್ವ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣಾಗಿರುವುದು ದುಃಖದ ಸಂಗತಿ. ವಿದ್ಯಾರ್ಥಿಗಳು ಇಂತಹ ದುಡುಕು ನಿರ್ಧಾರಗಳನ್ನು ತೆಗೆದುಕೊಳ್ಳಬಾರದು. ಪರೀಕ್ಷೆ ಬರೆದು ಉತ್ತೀರ್ಣರಾಗಲು ಅವಕಾಶಗಳನ್ನು ಕಲ್ಪಿಸಲಾಗಿದೆ ಎಂದರು.

ಸಿಇಓ ಶೇಕ್ ತನ್ವೀರ್ ಆಸೀಫ್, ಎಡಿಸಿ ಡಾ.ಎಚ್.ಎಲ್.ನಾಗರಾಜು, ನವನೀತ್ ಕುಟುಂಬ ಹಾಗೂ ಅಧಿಕಾರಿ ವರ್ಗ ಉಪಸ್ಥಿತರಿದ್ದರು.



623 ಅಂಕಗಳನ್ನು ಪಡೆದ ವಿದ್ಯಾರ್ಥಿ ನವನೀತ್‌ನನ್ನು ಸನ್ಮಾನಿಸಲಾಯಿತು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ


ಮೇ 14ರಂದು ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ನಾಮಪತ್ರ ಸಲ್ಲಿಕೆ

ಮಂಡ್ಯ,ಮೇ 9– ಜೂನ್ 3ರಂದು ನಡೆಯಲಿರುವ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ವಿಧಾನಪರಿಷತ್‌ನ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಮೇ 14ರಂದು ಮೈಸೂರಿನಲ್ಲಿ ತಮ್ಮ ಉಮೇದುವಾರಿಕೆ ಸಲ್ಲಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗಿಯಾಗಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಗುರುವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಮುಖಂಡರ ಸಭೆ ಹಾಗೂ ಚುನಾವಣಾ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಚುನಾವಣೆಗೆ ಒಟ್ಟು 4 ಲೋಕಸಭಾ ಕ್ಷೇತ್ರ ವ್ಯಾಪ್ತಿಯ 29 ವಿಧಾನಸಭಾ ಕ್ಷೇತ್ರಗಳು ಒಳಪಡಲಿದ್ದು, ಅಂದಿನ ಕಾರ್ಯಕ್ರಮಕ್ಕೆ ಕ್ಷೇತ್ರ ವ್ಯಾಪ್ತಿಯ ಪಕ್ಷದ ಎಲ್ಲಾ ಮಂತ್ರಿಗಳು, ಶಾಸಕರು, ಮಾಜಿ ಶಾಸಕರು, ಮುಖಂಡರುಗಳು ಭಾಗಿಯಾಗಲಿದ್ದಾರೆ ಎಂದು ವಿವರಿಸಿದರು.

ನಮ್ಮ ಪಕ್ಷದ ಕಾರ್ಯಕರ್ತರು ಕಳೆದೊಂದು ವರ್ಷದಿಂದ ವಿಧಾನಸಭೆ ಹಾಗೂ ಸಂಸತ್ ಚುನಾವಣೆಯನ್ನು ಬಹಳ ಅಚ್ಚುಕಟ್ಟಾಗಿ ಮಾಡಿದ್ದಾರೆ. ವಿಧಾನಸಭೆಯಲ್ಲಿ ಸಿಕ್ಕ ಗೆಲುವು ಲೋಕಸಭೆಯಲ್ಲೂ ನಮಗೆ ಸಿಗಲಿದ್ದು, ಅದೇ ಗೆಲುವು ಪರಿಷತ್ ಚುನಾವಣೆಯಲ್ಲೂ ಸಿಗಲಿದೆ. ಮಂಡ್ಯ ಜಿಲ್ಲೆಯಲ್ಲಿ ದಿನೇಶ್‌ಗೂಳಿಗೌಡರಿಂದ ಶುರುವಾದ ಗೆಲುವಿನ ನಾಗಾಲೋಟ ಇಂದಿಗೂ ಅದೇ ರೀತಿ ಮುಂದುವರೆದಿದ್ದು, ಪರಿಷತ್ ಚುನಾವಣೆಯಲ್ಲೂ ಅದೇ ಗೆಲುವಿನ ಫಲಿತಾಂಶ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆ ವಿರೂಪ ಖಂಡಿಸಿ ಕುರುಬರ ಸಂಘ ಪ್ರತಿಭಟನೆ



ಕೆ.ಆರ್.ಪೇಟೆ, ಮೇ 9– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಬೀಕನಹಳ್ಳಿ ಗ್ರಾಮದಲ್ಲಿ ಕಿಡಿಗೇಡಿಗಳು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ವಿರೂಪಗೊಳಿಸಿರುವ ಘಟನೆಯನ್ನು ಖಂಡಿಸಿ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯ ಘಟಕ, ಮಂಡ್ಯ ಜಿಲ್ಲಾ ಘಟಕ ಹಾಗೂ ತಾಲೂಕು ಘಟಕಗಳ ಆಶ್ರಯದಲ್ಲಿ ಬೀಕನಹಳ್ಳಿ ಗ್ರಾಮದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಲಾಯಿತು.

ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಮಂಡ್ಯ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್ ಮತ್ತು ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಪುರುಷೋತ್ತಮ್ ನೇತೃತ್ವದಲ್ಲಿ ಸ್ವಾತಂತ್ರ್ಯ ಸೇನಾನಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಭಗ್ನಗೊಳಿಸಿ ಅವಮಾನ ಮಾಡಿರುವ ಘಟನೆಯನ್ನು ತೀವ್ರವಾಗಿ ಖಂಡಿಸಿದರು ಹಾಗೂ ಆರೋಪಿಗಳನ್ನು ಪತ್ತೆ ಹಚ್ಚಿ ಕೂಡಲೇ ಬಂಧಿಸಿ ಜೈಲಿಗಟ್ಟುವ ಮೂಲಕ ತಕ್ಕ ಪಾಠ ಕಲಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಮಂಡ್ಯ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್ ಮಾತನಾಡಿ, ಸಂಗೊಳ್ಳಿ ರಾಯಣ್ಣ ಒಂದು ಜಾತಿಗೆ ಅಥವಾ ಧರ್ಮಕ್ಕೆ ಸೀಮಿತವಾದ ವ್ಯಕ್ತಿಯಲ್ಲ. ಸರ್ವ ಜನಾಂಗದ ಸ್ವತ್ತಾಗಿರುವ ಸಂಗೊಳ್ಳಿ ರಾಯಣ್ಣ ಸ್ವಾತಂತ್ರ್ಯ ಹೋರಾಟದ ಕಿಚ್ಚಿನ ಹಾಗೂ ತ್ಯಾಗದ ಬಗ್ಗೆ ತಿಳಿಯದೇ ಇರುವ ವಿಕೃತ ಮನಸ್ಸಿನ ವ್ಯಕ್ತಿಗಳು ಮಾತ್ರ ಪ್ರತಿಮೆ ವಿರೂಪಗೊಳಿಸುವಂತಹ ನೀಚ ಕೆಲಸವನ್ನು ಮಾಡಲು ಸಾಧ್ಯ. ಇಂತಹ ವ್ಯಕ್ತಿಗಳನ್ನು ಕೂಡಲೇ ಬಂಧಿಸಿ ಜೈಲಿಗೆ ಕಳುಹಿಸಬೇಕು ಎಂದರು.

ಬೆಳಗೊಳ ಕುಮಾರ್ ನಿಧನ

ಶ್ರೀರಂಗಪಟ್ಟಣ: ತಾಲೂಕಿನ ಬೆಳಗೊಳ ಗ್ರಾಮದ ಪ್ರಸನ್ನ ಕುಮಾರ್ (57) ಬುಧವಾರ ಹೃದಯಾಘಾತದಿಂದ ತಮ್ಮ ನಿವಾಸದಲ್ಲಿ ನಿಧನ ಹೊಂದಿದ್ದಾರೆ.



ಮೃತರು ಪತ್ನಿ ಹಾಗೂ ಇಬ್ಬರು ಪುತ್ರಿಯರು, ಸಹೋದರರನ್ನು ಅಗಲಿದ್ದಾರೆ. ಸ್ವಗ್ರಾಮ ಬೆಳಗೊಳದ ಜಮೀನಿನಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

7 ರಿಂದ 24ನೇ ಸ್ಥಾನಕ್ಕೆ ಕುಸಿದ ಚಾ.ನಗರ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಶೇ.73.83ರಷ್ಟು ಫಲಿತಾಂಶ

ಚಾಮರಾಜನಗರ, ಮೇ 9– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಚಾಮರಾಜನಗರ ಜಿಲ್ಲೆ ಕುಸಿತ ಕಂಡಿದ್ದು, 7ನೇ ಸ್ಥಾನದಿಂದ 24ನೇ ಸ್ಥಾನಕ್ಕೆ ಕುಸಿತ ಕಂಡಿದೆ.

ಈ ಬಾರಿ ಜಿಲ್ಲೆಯಲ್ಲಿ 11,239 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 8300 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.73.83ರಷ್ಟು ಫಲಿತಾಂಶ ಪಡೆದಿದೆ. ಈ ಮೂಲಕ ರಾಜ್ಯದ ಗಡಿ ಜಿಲ್ಲೆಗಳಲ್ಲಿ ಒಂದಾಗಿರುವ ಚಾಮರಾಜನಗರ ಒಟ್ಟಾರೆ ಫಲಿತಾಂಶದಲ್ಲಿ 24ನೇ ಸ್ಥಾನ ಪಡೆದುಕೊಂಡಿದೆ. ಕಳೆದ ಬಾರಿ ಶೇ.93.92ರಷ್ಟು ಫಲಿತಾಂಶದೊಂದಿಗೆ ರಾಜ್ಯದಲ್ಲಿ 7ನೇ ಸ್ಥಾನದಲ್ಲಿದ್ದ ಜಿಲ್ಲೆ ಈ ಬಾರಿ 24ನೇ ಸ್ಥಾನ ಪಡೆಯುವ ಮೂಲಕ 17 ಸ್ಥಾನಗಳಷ್ಟು ಇಳಿಕೆ ಕಂಡಿದೆ.

ಜಿಲ್ಲೆಯಲ್ಲಿ ಈ ಬಾರಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದ 5589 ಬಾಲಕರು ಹಾಗೂ 5650 ಬಾಲಕಿಯರು ಸೇರಿ ಒಟ್ಟು 11,239 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 3659 ಬಾಲಕರು ಹಾಗೂ 4641 ಬಾಲಕಿಯರು ಸೇರಿ ಒಟ್ಟು 8300 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಬಾಲಕಿಯರೇ ಮೇಲುಗೈ: ಈ ಸಲವೂ ಜಿಲ್ಲೆಯಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಅಲ್ಲದೇ ಬಾಲಕರಿಗಿಂತ ಬಾಲಕಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ಬರೆದಿರುವುದು ವಿಶೇಷ. ಶೇ.82.14ರಷ್ಟು ಬಾಲಕಿಯರು ಹಾಗೂ ಶೇ.65.47ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ.

ನಗರ ಪ್ರದೇಶಗಳಿಂದ 3976 ವಿದ್ಯಾರ್ಥಿಗಳು ಪರೀಕ್ಷೆ ಹಾಜರಾಗಿದ್ದರು. ಇವರ ಪೈಕಿ 1401 ಬಾಲಕರು, 1711 ಬಾಲಕಿಯರು ಸೇರಿ 3112 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಗ್ರಾಮೀಣ ಪ್ರದೇಶದ 7263 ವಿದ್ಯಾರ್ಥಿಗಳ ಪೈಕಿ 2258 ಬಾಲಕರು, 2930 ಬಾಲಕಿಯರು ಸೇರಿ 5188 ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ.

ಚಾಮರಾಜನಗರ ತಾಲೂಕಿನಲ್ಲಿ 3643 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 2664 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಗುಂಡ್ಲುಪೇಟೆಯಲ್ಲಿ 2426 ವಿದ್ಯಾರ್ಥಿಗಳ ಪೈಕಿ 1923 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಹನೂರಿನಲ್ಲಿ 2267 ವಿದ್ಯಾರ್ಥಿಗಳ ಪೈಕಿ 1603 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಕೊಳ್ಳೇಗಾಲದಲ್ಲಿ 2000 ವಿದ್ಯಾರ್ಥಿಗಳ ಪೈಕಿ 1470 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಯಳಂದೂರು ತಾಲೂಕಿನಲ್ಲಿ 884 ವಿದ್ಯಾರ್ಥಿಗಳ ಪೈಕಿ 640 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಜಿಲ್ಲೆಯ ಸರ್ಕಾರಿ ಶಾಲೆಯ 5752 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇವರ ಪೈಕಿ 4090 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಅನುದಾನಿತ ಶಾಲೆಯ 2967 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇವರ ಪೈಕಿ 2012 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಅನುದಾನ ರಹಿತ ಶಾಲೆಯ 2520 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇವರ ಪೈಕಿ 2198 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.


618 ಅಂಕಗಳಿಸಿದ ಕೊಳ್ಳೇಗಾಲ ತಾಲೂಕಿನ ಆದರ್ಶ ಶಾಲೆಯ ವಿದ್ಯಾರ್ಥಿ ಸಿ.ವಿ.ಪ್ರಜನ್‌ಗೆ ಮುಖ್ಯ ಶಿಕ್ಷಕಿ ಪ್ರಿಯದರ್ಶಿನಿ, ಎಸ್‌ಡಿಎಂಸಿ ಅಧ್ಯಕ್ಷ ಸುರೇಶ್ ಸಿಹಿ ತಿನಿಸಿದರು.

ಆದರ್ಶ ಶಾಲಾ ವಿದ್ಯಾರ್ಥಿಗಳ ಸಾಧನೆ: ಗುಂಡ್ಲುಪೇಟೆ ತಾಲೂಕಿನ ಸರ್ಕಾರಿ ಆದರ್ಶ ಶಾಲೆಯ ನಾಲ್ವರು ವಿದ್ಯಾರ್ಥಿಗಳು ಜಿಲ್ಲೆಯಲ್ಲಿ ಮೊದಲ ಮೂರು ಸ್ಥಾನ ಪಡೆದಿರುವುದು ವಿಶೇಷ ಅಲ್ಲದೇ, ಟಾಪ್ 10 ವಿದ್ಯಾರ್ಥಿಗಳಲ್ಲಿ ಈ ಶಾಲೆಯ 8 ವಿದ್ಯಾರ್ಥಿಗಳಿದ್ದಾರೆ!

ಗುಂಡ್ಲುಪೇಟೆ ತಾಲೂಕಿನ ಸರ್ಕಾರಿ ಆದರ್ಶ ಶಾಲೆ ವಿದ್ಯಾರ್ಥಿನಿ ರತ್ನಮ್ಮ 619(ಶೇ.99.04) ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಕೊಳ್ಳೇಗಾಲ ತಾಲೂಕಿನ ಆದರ್ಶ ಶಾಲೆಯ ಸಿ.ವಿ.ಪ್ರಜನ್, ಎಸ್.ಸಂಜನಾ ತಲಾ 618 ಅಂಕ ಪಡೆದು ದ್ವಿತೀಯ ಸ್ಥಾನ ಹಾಗೂ ಚಾಮರಾಜನಗರ ಆದರ್ಶ ಶಾಲೆಯ ಆರ್ಯ ಎಂ.ಅರುಣ್ 617 ಅಂಕ ಪಡೆದು ಮೂರನೇ ಸ್ಥಾನ ಪಡೆದಿದ್ದಾರೆ.

ಕೊಳ್ಳೇಗಾಲ ನಿಸರ್ಗ ಸಂಸ್ಥೆಯ ಯುಕ್ತಾ 616, ಗುಂಡ್ಲುಪೇಟೆ ಆದರ್ಶ ಶಾಲೆಯ ಎನ್.ಎಂ.ನಂದನ್ 615, ಗುಂಡ್ಲುಪೇಟೆಯ ಕ್ರಿಸ್ಟ್ ಸಿಎಂಐ ಶಾಲೆಯ ಎಂ.ಎನ್.ಅಂಕಿತಾ 615, ಕೊಳ್ಳೇಗಾಲ ಆದರ್ಶ ಶಾಲೆಯ ಉಮ್ಮೆ ಝುಹಾ 614, ಗುಂಡ್ಲುಪೇಟೆ ಆದರ್ಶ ಶಾಲೆಯ ಅಹಲ್ಯಾ ಆನಂದ್ 613 ಹಾಗೂ ಕೊಳ್ಳೇಗಾಲ ಆದರ್ಶ ಶಾಲೆಯ ಆಫಿಯಾ ಕುಲ್ಸುಮ್ 612 ಅಂಕ ಪಡೆದಿದ್ದಾರೆ.

ಶೇ.100ರಷ್ಟು ಫಲಿತಾಂಶ ಪಡೆದ ಶಾಲೆಗಳು: ಕೊಳ್ಳೇಗಾಲದ ಆದರ್ಶ ವಿದ್ಯಾಲಯ, ಕಾಮಗೆರೆಯ ಸ್ಯೆಂಟ್ ಕ್ಸೇವಿಯರ್ ಪ್ರೌಢಶಾಲೆ, ತೆರಕಣಾಂಬಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮಲಯ್ಯನಪುರದ ಆದರ್ಶ ವಿದ್ಯಾಲಯ, ಹರವೆಯ ಮೊರಾರ್ಜಿ, ಜ್ಯೋತಿಗೌಡನಪುರದ ಕಿತ್ತೂರು ರಾಣಿ ಚೆನ್ನಮ್ಮ, ಹರದನಹಳ್ಳಿಯ ಅಂಬೇಡ್ಕರ್ ವಸತಿ ಶಾಲೆ, ಚಾಮರಾಜನಗರದ ಸೇವಾ ಭಾರತಿ ಆಂಗ್ಲ ಮಾಧ್ಯಮ ಶಾಲೆಗೆ ಶೇ.100ರಷ್ಟು ಫಲಿತಾಂಶ ಲಭಿಸಿದೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಜೆಡಿಎಸ್ ಪ್ರತಿಭಟನೆ



ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡುವಂತೆ ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮೇ 9– ಪೆನ್‌ಡ್ರೈವ್ ಪ್ರಕರಣದ ತನಿಖೆ ಸಂಬಂಧ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಜಾತ್ಯತೀತ ಜನತಾದಳದ ಕಾರ್ಯಕರ್ತರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಚಾಮರಾಜೇಶ್ವರ ದೇವಸ್ಥಾನ ಎದುರು ಚಾಮರಾಜನಗರ ಲೋಕಸಭಾ ಕ್ಷೇತ್ರದ ಜೆಡಿಎಸ್ ಸಹ ಉಸ್ತುವಾರಿ ಬಿ.ಪುಟ್ಟಸ್ವಾಮಿ ಹಾಗೂ ಮುಖಂಡ ಆಲೂರು ಮಲ್ಲು ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ರಸ್ತೆ ಸಂಚಾರ ತಡೆ ನಡೆಸಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರ ವಿರುದ್ಧ ಘೋಷಣೆ ಕೂಗಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರ ದುರುಪಯೋಗಿಸಿಕೊಂಡು ಮಹಿಳೆಯರ ಮಾನವ ಹರಾಜು ಹಾಕುತ್ತಿದೆ. ಪೆನ್‌ಡ್ರೈವ್ ಪ್ರಕರಣದ ತಪ್ಪಿಸ್ಥರಿಗೆ ಶಿಕ್ಷೆ ನೀಡುವ ಬದಲು ಅಮಾಯಕರನ್ನು ಬಂಧಿಸಲಾಗಿದೆ. ಈ ಪ್ರಕರಣ ಸಂಬಂಧ ಡಿ.ಕೆ.ಶಿವಕುಮಾರ್ ಅವರ ಆಡಿಯೋ ವೈರಲ್ ಆಗಿದೆ. ಆದ್ದರಿಂದ ಡಿಕೆಶಿ ರಾಜೀನಾಮೆ ನೀಡಬೇಕು. ಪೆನ್‌ಡ್ರೈವ್ ಹಂಚಿಕೆ ಮಾಡಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಪೊಲೀಸರು, ಪ್ರತಿಭಟನಾಕಾರರ ನಡುವೆ ತಳ್ಳಾಟ: ಇದೇ ವೇಳೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾವಚಿತ್ರವನ್ನು ಸುಡಲು ಮುಂದಾದಾಗ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ನೂಕಾಟ, ತಳ್ಳಾಟ ಉಂಟಾಯಿತು. ಕೊನೆಗೆ ಪ್ರತಿಭಟನಾಕಾರರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾವಚಿತ್ರ ಹರಿದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಕಡಬೂರು ಮಂಜುನಾಥ್, ರೇಚಂಬಳ್ಳಿ ಕುಮಾರ್, ಹೊಮ್ಮ ಮಹದೇವಸ್ವಾಮಿ, ವೈ.ಕೆ.ಮೋಳೆ ಸೋಮಣ್ಣ, ಶ್ರೀನಿವಾಸಗೌಡ, ಬಿ.ಎಂ. ಮಹದೇವಸ್ವಾಮಿ, ಸಿದ್ದರಾಜುನಾಯಕ, ಆನಂದ್, ಕ.ಮಂಗಳಮ್ಮ, ಪುಷ್ಪಲತಾ, ರವಿರಾಮು, ಸೋಮು, ರವೀಶ್, ಶಂಕರ್, ಕುಮಾರ್, ಮಹದೇವಸ್ವಾಮಿ, ನಂದೀಶ್, ಶ್ರೀನಾಥ್ ಇತರರು ಭಾಗವಹಿಸಿದ್ದರು.

ಸಿ.ಪಿ.ರಾಜಣ್ಣ ನಿಧನ

ಚಾಮರಾಜನಗರ: ವರ್ತಕರ ಸಂಘದ ಮಾಜಿ ಅಧ್ಯಕ್ಷ, ಸೋಮಣ್ಣ ಲೇಔಟ್ ನಿವಾಸಿ ಸಿ.ಪಿ.ರಾಜಣ್ಣ(81) ಗುರುವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು.



ನಗರದ ಪ್ರಸಿದ್ಧ ವರ್ತಕರಾಗಿದ್ದ ಇವರು ಹಾಲಿ ದಾಸಬಣಜಿಗರ ಸಂಘದ ಗೌರವಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಮೃತರಿಗೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ನಗರದ ಹೊರವಲಯದ ದಾಸಬಣಜಿಗರ ಚಿರಶಾಂತಿ ಧಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ಮೈಸೂರು ಮಿತ್ರ ಶುಕ್ರವಾರ 10 ಮೇ 2024

ಸಂತ ಫಿಲೋಮಿನಾಸ್ ಕಾಲೇಜಲ್ಲಿ ಜೈ ಶ್ರೀರಾಮ್ ಹಾಡಿಗೆ ವಿರೋಧ; ಹಿಂದೂ ವಿದ್ಯಾರ್ಥಿಗೆ ಥಳಿತ

ಸಂಸದ ಪ್ರತಾಪ್ ಸಿಂಹ ಆರೋಪ



ಮೈಸೂರು, ಮೇ 9– ಮೈಸೂರಿನ ಸಂತ ಫಿಲೋಮಿನಾಸ್ ಕಾಲೇಜಿನಲ್ಲಿ ಬುಧವಾರ ನಡೆದ ವಾರ್ಷಿಕೋತ್ಸವ ವೇಳೆ ಜೈ ಶ್ರೀರಾಮ್ ಎಂದು ಹಾಡಿದಾಗ ಕಾರ್ಯಕ್ರಮವನ್ನು ಹಾಳುಗೆಡವಿ, ಹಿಂದೂ ವಿದ್ಯಾರ್ಥಿಯನ್ನು ಥಳಿಸಲಾಗಿದೆ ಎಂದು ಮೈಸೂರು– ಕೊಡಗು ಸಂಸದ ಪ್ರತಾಪ್ ಸಿಂಹ ಆರೋಪಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮೂರು ವಿಡಿಯೋ ಕ್ಲಿಪ್ಪಿಂಗ್‌ಗಳನ್ನು ಪೋಸ್ಟ್ ಮಾಡಿರುವ ಅವರು, 'ನಿನ್ನೆ ಮೈಸೂರಿನ ಸಂತ ಫಿಲೋಮಿನಾಸ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಖ್ಯಾತ ಗಾಯಕ ಶ್ರೀ ಹರ್ಷ ಅವರು "ಜಯತು ಜಯತು ಶ್ರೀರಾಮ್" ಎಂದು ಹಾಡಿದಾಗ ಕಾರ್ಯಕ್ರಮವನ್ನು ಹಾಳುಗೆಡವಿದ್ದಲ್ಲದೆ ಒಬ್ಬ ಹಿಂದೂ ವಿದ್ಯಾರ್ಥಿಯನ್ನು ಥಳಿಸಿದ್ದಾರೆ. ಇದನ್ನೆಲ್ಲ ನೋಡಿಯೂ ಕೈಕಟ್ಟಿ ಕುಳಿತುಕೊಳ್ಳಬೇಕಾ?' ಎಂದು ಬರೆದುಕೊಂಡಿದ್ದಾರೆ.

ಬೋರ್‌ವೆಲ್‌ಗಳನ್ನು ಕೊರೆಸಿ ಕುಡಿಯುವ ನೀರು ಪೂರೈಸಿ

ಅಧಿಕಾರಿಗಳಿಗೆ ಅಂಜುಮ್ ಪರ್ವೇಜ್ ಸೂಚನೆ



ಮೈಸೂರು, ಮೇ 9 (ಆರ್‌ಕೆ): ಬೋರ್‌ವೆಲ್‌ಗಳನ್ನು ಕೊರೆಸಿ ಮೈಸೂರು ಜಿಲ್ಲೆಯಾದ್ಯಂತ ಗ್ರಾಮೀಣ ಪ್ರದೇಶಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಅವರು ಅಧಿಕಾರಿಗಳಿಗೆ ಇಂದಿಲ್ಲಿ ಸೂಚನೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, ಕುಡಿಯುವ ನೀರಿನ ಸಂಪರ್ಕ ಜಾಲದಿಂದ ನೀರು ಸರಬರಾಜು ಮಾಡಲು ನೀರಿನ ಕೊರತೆ ಉಂಟಾದಲ್ಲಿ ಜಲಮೂಲ ದೃಢಪಡಿಸಿ ಬೋರ್‌ವೆಲ್‌ಗಳನ್ನು ಕೊರೆಸಿ, ನಂತರವೂ ಸಮಸ್ಯೆಯಾದಲ್ಲಿ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ಕ್ರಮವಹಿಸಿ ಎಂದರು.

ಈಗಲೇ ಖಾಸಗಿ ಬೋರ್‌ವೆಲ್‌ಗಳನ್ನು ಗುರ್ತಿಸಿ, ಅಗತ್ಯ ಬಿದ್ದರೆ ಟ್ಯಾಂಕರ್‌ಗಳ ಮೂಲಕವೂ ನೀರು ಪೂರೈಸಬೇಕು, ಅನುದಾನ ಬೇಕಾದಲ್ಲಿ ಪ್ರಸ್ತಾವನೆ ಸಲ್ಲಿಸಿ ಎಂದ ಅವರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ ಎಂದೂ ಅಂಜುಮ್ ಪರ್ವೇಜ್ ಅವರು ತಿಳಿಸಿದರು.

ನರೇಗಾ ಯೋಜನೆಯಡಿ ಮಾನವ ಸಂಪನ್ಮೂಲ ಬಳಸಿ ಕಾಮಗಾರಿ ನಡೆಸಬೇಕು, ಮಾನವ ದಿನಗಳನ್ನು ಹೆಚ್ಚಿಸಿ ತಡ ಮಾಡದೇ ಫಲಾನುಭವಿಗಳಿಗೆ ಡಿಬಿಟಿ ಮೂಲಕ ಹಣ ವರ್ಗಾಯಿಸುವಂತೆಯೂ ಅವರು ತಾಕೀತು ಮಾಡಿದರು.

ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ಸಂಗ್ರಹ, ಬಾಪೂಜಿ ಸೇವಾ ಕೇಂದ್ರ ಡಿಜಿಟಲ್ ಲೈಬ್ರರಿ, ಸ್ವಚ್ಛ ಭಾರತ ಮಿಷನ್ ಯೋಜನೆಗಳ ಪ್ರಗತಿ ಪರಿಶೀಲಿಸಿದ ಅವರು, ಗ್ರಾಮೀಣ ಜನರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಭಿವೃದ್ಧಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಉಪಕಾರ್ಯದರ್ಶಿಗಳಾದ ನಾಗರಾಜು, ಜಗನ್ನಾಥ ಮೂರ್ತಿ, ಮುಖ್ಯ ಯೋಜನಾಧಿಕಾರಿ ಮಂಜುನಾಥ ಅಂಗಡಿ, ಮುಖ್ಯ ಲೆಕ್ಕಾಧಿಕಾರಿ ಜಿ.ಬಸವರಾಜು ಹಾಗೂ ಇತರ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 9–ಮೈಸೂರಿನ ಎನ್.ಆರ್. ಮೊಹಲ್ಲಾದಲ್ಲಿರುವ ಸಂತ ಆನ್ಸ್ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ಜೈಬಾ ಅನು ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 591 ಅಂಕ ಪಡೆದು ಅತ್ಯುನ್ನತ ಶೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಎನ್.ಆರ್. ಮೊಹಲ್ಲಾದ ವಸಿಂ ಸಿದ್ಧಿಖಾ ಮತ್ತು ಅಫ್ರಾ ಸಿದ್ಧಿಖಾ ದಂಪತಿ ಪುತ್ರಿ.

ಅತ್ಯುನ್ನತ ಶ್ರೇಣಿಯಲ್ಲಿ ಪಾಸ್



ಮೈಸೂರು, ಮೇ 9– ಮೈಸೂರಿನ ವಿಜಯ ವಿಠಲ ಶಾಲೆಯ ವಿದ್ಯಾರ್ಥಿ ಹೆಚ್.ಜಿ.ಜೀವನ್‌ಕುಮಾರ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 588(ಶೇ.94) ಅಂಕ ಗಳಿಸಿದ್ದಾನೆ. ಈತ ಮೈಸೂರು ತಾಲೂಕು ಹೊಸಹುಂಡಿ ಗ್ರಾಮದ ಗಿರೀಶ್ ಹಾಗೂ ಪೂರ್ಣಿಮಾ ದಂಪತಿ ಪುತ್ರ

ಅಂಜುಮ್ ಪರ್ವೇಜ್‌ರಿಂದ ಹಳೇ ಉಂಡುವಾಡಿ ಕಾಮಗಾರಿ ಪರಿಶೀಲನೆ



ಮೈಸೂರು,ಮೇ9(ಆರ್‌ಕೆ): ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಅವರು ಇಂದು ಬೆಳಿಗ್ಗೆ ಕೆಆರ್‌ಎಸ್ ಹಿನ್ನೀರಲ್ಲಿ ಪ್ರಗತಿಯಲ್ಲಿರುವ ಹಳೇ ಉಂಡುವಾಡಿ ಕುಡಿಯುವ ನೀರು ಸರಬರಾಜು ಯೋಜನೆಯ ಪ್ರಗತಿ ಪರಿಶೀಲಿಸಿದರು.

ಬೆಂಗಳೂರಿನಿಂದ ಬೆಳಿಗ್ಗೆ 11–30 ಗಂಟೆಗೆ ಹಳೇ ಉಂಡುವಾಡಿಯ ಜಾಕ್‌ವೆಲ್ ಡ್ರಾಟ್ ಕಾಲುವೆ, ಬೀಚನಕುಪ್ಪೆ ಬಳಿಯ ನೀರು ಶುದ್ಧೀಕರಣ ಘಟಕ (ಡಬ್ಲ್ಯುಟಿಪಿ) ಕಾಮಗಾರಿಗಳನ್ನು ವೀಕ್ಷಿಸಿದ ಅವರಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಸಿಫ್ ಅಹಮದ್ ಅವರು ಯೋಜನೆ ಪ್ರಗತಿ ಕುರಿತು ವಿವರಿಸಿದರು.

ಕೊಳವೆ ಮಾರ್ಗ, ವಿದ್ಯುತ್ ಪೂರೈಕೆಗೆ ಕೈಗೊಳ್ಳಲುದ್ದೇಶಿಸಿರುವ ಎಕ್ಸ್‌ಪ್ರೆಸ್ ಫೀಡರ್ ಲೈನ್ ಸ್ಥಳವನ್ನು ಪರಿಶೀಲಿಸಿದ ಅಂಜುಮ್ ಪರ್ವೇಜ್, ನಿಗದಿತ ಅವಧಿಯೊಳಗಾಗಿ ಕಾಮಗಾರಿ ಪೂರ್ಣಗೊಳಿಸಿ, ಹಳೇ ಉಂಡುವಾಡಿಯಿಂದ ಮೈಸೂರು ಮತ್ತು ಸುತ್ತಮುತ್ತಲ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಪ್ರಕ್ರಿಯೆ ಆರಂಭಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಉಪಕಾರ್ಯದರ್ಶಿ ಜಗನ್ನಾಥ ಮೂರ್ತಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಟಿ.ಪ್ರದೀಪ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ರಂಜಿತ್ ಕುಮಾರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಚೀಫ್ ಇಂಜಿನಿಯರ್ ಚಂದ್ರಪ್ಪ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಪಂಗಡ ವಿಭಾಗದ ಅಧ್ಯಕ್ಷರಾಗಿ ನಾಗವಾಲ ಮಹೇಶ್ ಅವರನ್ನು ನೇಮಕ ಮಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ನೇಮಕಾತಿ ಪತ್ರವನ್ನು ನೀಡಿದರು.ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ರಾಜೀವ್ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಇಲವಾಲ ಸುರೇಶ್, ಮಾಜಿ ಗ್ರಾಪಂ ಸದಸ್ಯ ಚಿಕ್ಕೇಗೌಡನಕೊಪ್ಪಲು ಬೆಟ್ಟಯ್ಯ, ಗ್ರಾಪಂ ಸದಸ್ಯ ಸೀಗಳ್ಳಿ ಕುಮಾರ್ ಇತರರಿದ್ದರು.

ಮೈಸೂರು ಜಿಲ್ಲಾ ಕಸಾಪದಿಂದ ಶ್ರೀನಿವಾಸ ಪ್ರಸಾದರಿಗೆ ಶ್ರದ್ಧಾಂಜಲಿ

ಮೈಸೂರು, ಮೇ 9(ಎಂಕೆ)– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇತ್ತೀಚೆಗೆ ನಿಧನರಾದ ಹಿರಿಯ ರಾಜಕಾರಣಿ, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಹಾಗೂ ನುಡಿನಮನ ಸಲ್ಲಿಸಲಾಯಿತು.

ವಿಜಯನಗರ 1ನೇ ಹಂತದಲ್ಲಿರುವ ಸಾಹಿತ್ಯ ಸಭಾಂಗಣದಲ್ಲಿ ಗುರುವಾರ ವಿ.ಶ್ರೀನಿವಾಸ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಳಿಕ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ನೀಲಗಿರಿ ಎಂ ತಳವಾರ್ ಮಾತನಾಡಿ, ಓಲೈಕೆ, ಹೊಗಳಿಕೆ ಸಹಿಸದ ಅಪರೂಪದ ರಾಜಕಾರಣಿ ವಿ.ಶ್ರೀನಿವಾಸ ಪ್ರಸಾದ್ ಎಂದು ಸ್ಮರಿಸಿದರು.

ಕಳೆದ 10–12 ವರ್ಷಗಳಿಂದ ಅವರೊಂದಿಗೆ ಒಡನಾಟವಿದ್ದು, ಅವರ ಲಿಪಿಕಾರರಾಗಿ ಕೆಲಸ ಮಾಡಿದ್ದೇನೆ. ಇವತ್ತಿನ ರಾಜಕಾರಣದಿಂದ ಅವರು ಸಂಪೂರ್ಣ ದೂರವಿದ್ದರು ಎಂಬುದೇ ಆಶಾದಾಯಕ ಸಂಗತಿಯಾಗಿದೆ ಎಂದಿಗೂ ಯಾರಿಂದಲೂ ಓಲೈಕೆ, ಹೊಗಳಿಕೆ ಸ್ವೀಕರಿಸದ ನಾ ಕಂಡ ಅತ್ಯಂತ ಅಪರೂಪದ ರಾಜಕಾರಣಿ ಅವರಾಗಿದ್ದರು. ಅವರ ಕುರಿತಾದ ನಾಲ್ಕು ಕೃತಿಗಳು ಹೊರಬಂದಿದ್ದರೂ ಬೃಹತ್ ಗ್ರಂಥ, ಉದ್ದುದ್ದ ಭಾಷಣಗಳ ಮೇಲೆ ಅವರಿಗೆ ನಂಬಿಕೆ ಇರಲಿಲ್ಲ. ಇರುವುದರಲ್ಲಿ ಸ್ಪಷ್ಟತೆ ಹಾಗೂ ನಿಖರತೆಗೆ ಆದ್ಯತೆ ನೀಡುತ್ತಿದ್ದರು ಎಂದು ಮೆಲುಕು ಹಾಕಿದರು.

ಎಂದಿಗೂ ನನ್ನನ್ನು ಹೆಸರಿಡಿದು ಕರೆದವರಲ್ಲಾ. ಯಾವಾಗಲೂ ಪ್ರೊಫೆಸರ್ ಎಂದೇ ಕರೆಯುತ್ತಿದ್ದರು. ಯಾವ ಮುಲಾಜಿಗೂ ಒಳಗಾಗದೆ ನೇರವಾಗಿ ಮಾತನಾಡುವ ಸ್ವಭಾವ ಅವರದ್ದಾಗಿದ್ದು, ನಿಜ ನಡತೆ ಅವರಲ್ಲಿತ್ತು. ಲೇಖಕರು, ಸಾಹಿತಿಗಳೆಂದರೆ ಶ್ರೀನಿವಾಸ ಪ್ರಸಾದ್‌ರಿಗೆ ವಿಶೇಷ ಕಾಳಜಿ. ಅವರು ತಮ್ಮ ಕಡೇ ದಿನಗಳವರೆಗೂ ಬರೆಯುವುದನ್ನು ಬಿಟ್ಟಿರಲಿಲ್ಲ. ದಲಿತ ಸಮುದಾಯ ಸೇರಿದಂತೆ ಸಮಾಜಕ್ಕೆ ಕೊಡುಗೆ ನೀಡಿದ ಸಾಧಕರ ಚರಿತ್ರೆಗಳನ್ನು ದಾಖಲು ಮಾಡಬೇಕು ಎಂಬುದು ಅವರ ಆಶಯವಾಗಿತ್ತು. ಮರಳುಗಾಡಿನಲ್ಲಿ ನೀರು ಸಿಗುವಂತೆ ರಾಜಕಾರಣದಲ್ಲಿ ಶ್ರೀನಿವಾಸ ಪ್ರಸಾದ್ ಸಜ್ಜನ ರಾಜಕಾರಣಿಯಾಗಿದ್ದರು ಎಂದು ಗುಣಗಾನ ಮಾಡಿದರು.

ಸಮ ಸಮಾಜದ ಚಿಂತಕ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಸಂಸದರಾದ ಶ್ರೀನಿವಾಸ ಪ್ರಸಾದರು ಸಮ ಸಮಾಜದ ಚಿಂತಕರಾಗಿದ್ದರು. ಎಲ್ಲಾ ಸಮುದಾಯವರನ್ನು ಒಟ್ಟಾಗಿ ಕಾಣುವ ನಾಯಕರಾಗಿದ್ದರು. ಅವರ ಪ್ರಕಾರ ವಿಶ್ವದ ಶ್ರೇಷ್ಠ ಜಗದ್ಗುರು ಬುದ್ಧ ಆಗಿದ್ದರೆ ಸದಾ ಕಲಿಯುವ ವಿದ್ಯಾರ್ಥಿಯಂತೆ ಯಾರಾದರೂ ಗೊತ್ತಿಲ್ಲದ ವಿಷಯಗಳನ್ನು ಹೇಳುತ್ತಿದ್ದರೆ ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದ ಅವರು ನಮ್ಮ ಕುಟುಂಬದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು ಎಂದು ಸ್ಮರಿಸಿದರು.

ಮುಡಾ ಮಾಜಿ ಅಧ್ಯಕ್ಷ ಬಸವೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಹಿರಿಯ ಲೇಖಕಿ ಡಾ.ಕೆ. ಲೀಲಾ ಪ್ರಕಾಶ್, ರಂಗಕರ್ಮಿ ರಾಜಶೇಖರ ಕದಂಬ, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಡಾ.ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ಮೈಸೂರು ವಿವಿ ಬಾಬು ಜಗಜೀವನ ರಾಮ್ ಅಧ್ಯಯನ ಸಂಸ್ಥೆ ಮಾಜಿ ನಿರ್ದೇಶಕ ಮೈಲಹಳ್ಳಿ ರೇವಣ್ಣ, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಸೋಮಶೇಖರ್, ಕವಿ ಎಂ.ಬಿ.ಜಯಶಂಕರ್, ವಿ.ಶ್ರೀನಿವಾಸ ಪ್ರಸಾದರ ಸಹೋದರ ವಿ.ರಾಮಸ್ವಾಮಿ, ಅಳಿಯ ಡಾ.ಮೋಹನ್, ಜಿಲ್ಲಾ ಕಸಾಪ ಕಾರ್ಯದರ್ಶಿ ಲತಾ ಮೋಹನ್ ಮತ್ತಿತರರಿದ್ದರು.



ಮೈಸೂರು ಜಿಲ್ಲಾ ಕಸಾಪ ವತಿಯಿಂದ ಹಿರಿಯ ರಾಜಕಾರಣಿ, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜೂ.16, 17ರಂದು 'ದಕ್ಷಿಣ ಭಾರತ ಉತ್ಸವ್' ಸಮ್ಮೇಳನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ 'ದಕ್ಷಿಣ ಭಾರತ ಉತ್ಸವ್' ಸಮ್ಮೇಳನದ ಪೋಸ್ಟರ್ ಅನ್ನು ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಮೈಸೂರು ಚೇಂಬರ್ಸ್ ಮತ್ತು ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು, ಪ್ರವಾಸೋದ್ಯಮ ಸಮಿತಿ ಅಧ್ಯಕ್ಷ ಕೆ.ಷಣ್ಮುಗಂ, ಎಫ್‌ಕೆಸಿಸಿಐ ಉಪಾಧ್ಯಕ್ಷರಾದ ಎಂ.ಜಿ.ಬಾಲಕೃಷ್ಣರೆಡ್ಡಿ, ಉಮಾರೆಡ್ಡಿ, ಮಾಜಿ ಅಧ್ಯಕ್ಷ ಬಿ.ವಿ.ಗೋಪಾಲ್‌ರೆಡ್ಡಿ ಅವರನ್ನು ಕಾಣಬಹುದು.

ಮೈಸೂರು, ಮೇ 9(ಎಂಟಿವೈ)– ಕೈಗಾರಿಕೋದ್ಯಮಿಗಳನ್ನು ಆಕರ್ಷಿಸುವ ನಿಟ್ಟಿನಲ್ಲಿ ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ವತಿಯಿಂದ ಜೂ. 15 ಮತ್ತು 16 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿನ ಪ್ರಿನ್ಸೆಸ್ ಶೈನ್ ಸಭಾಂಗಣದಲ್ಲಿ 'ದಕ್ಷಿಣ ಭಾರತ ಉತ್ಸವ್' ಸಮ್ಮೇಳನ ಆಯೋಜಿಸಲಾಗುತ್ತಿದೆ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ಈ ಸಮ್ಮೇಳನವನ್ನು ಆಯೋಜಿಸಲಾಗಿದೆ. ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ನಡೆಸುತ್ತಿರುವ ಈ ಸಮ್ಮೇಳನವನ್ನು ಜೂ.15ರಂದು ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಸಮ್ಮೇಳನದಲ್ಲಿ ಕೈಗಾರಿಕಾ ಸಚಿವರೂ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆ, ಅವಕಾಶ ಮತ್ತು ಉದ್ಯೋಗ ಸೃಷ್ಟಿಗೆ ಒತ್ತು ನೀಡಿ, ದಕ್ಷಿಣ ಭಾರತದ ಪ್ರವಾಸೋದ್ಯಮ ಸಾಮರ್ಥ್ಯ ಪ್ರದರ್ಶಿಸುವ ಗುರಿ ಇದೆ ಸಿಂಗಾಪುರ, ಮಲೇಷಿಯಾ, ದುಬೈ ಹಾಗೂ ಇನ್ನಿತರ ದೇಶಗಳಿಂದ ಹೂಡಿಕೆದಾರರು ಆಗಮಿಸುತ್ತಿದ್ದು, ಮುಖ್ಯವಾಗಿ ಮೈಸೂರನ್ನು ದಕ್ಷಿಣ ಭಾರದ ಪ್ರವಾಸೋದ್ಯಮ ತಾಣವಾಗಿ ಉತ್ತೇಜಿಸಲು ಆದ್ಯತೆ ನೀಡಲಾಗುತ್ತಿದೆ. ಇದಕ್ಕಾಗಿ ಆಸಕ್ತ ಎಂಎಸ್‌ಎಂಇಗಳನ್ನು ಆಕರ್ಷಿಸಲಾಗುತ್ತಿದೆ ಎಂದು ತಿಳಿಸಿದರು.

ಸಾಂಸ್ಕೃತಿಕ ನಗರಿ ಮೈಸೂರು, ಕರ್ನಾಟಕದ ಹೃದಯ ಸ್ಥಾನದಂತೆ ಇದೆ. ಇತಿಹಾಸ, ಪರಂಪರೆ, ಸಂಸ್ಕೃತಿಯ ನೈಜತೆಗೆ ಹೆಸರುವಾಸಿಯಾಗಿದೆ. ಆದ್ದರಿಂದ ಇಲ್ಲಿನ ಕೈಗಾರಿಕಾ ಮತ್ತು ಆರ್ಥಿಕ ಬೆಳವಣಿಗೆಗೆ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ಸ್ಥಾಪನೆ, ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ, ಅಂತರ ರಾಷ್ಟ್ರೀಯ ಕ್ರೀಡಾ ಸಂಕೀರ್ಣ, ವಿಮಾನ ನಿಲ್ದಾಣದ ವಿಸ್ತರಣೆಗೆ ಬೇಕಾದ ಭೂಸ್ವಾಧೀನ, ಸುಸಜ್ಜಿತ ಐಐಟಿ ಕಾಲೇಜು ಸ್ಥಾಪನೆ, ಎಲ್ಲ ಕೈಗಾರಿಕಾ ಪ್ರದೇಶಗಳಿಗೆ ಮೂಲ ಸೌಕರ್ಯ ನೀಡಿಕೆ ಕುರಿತಂತೆ ವಿವಿಧ ಸೌಲಭ್ಯಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗುತ್ತದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಚೇಂಬರ್ಸ್ ಮತ್ತು ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು, ಎಫ್‌ಕೆಸಿಸಿಐ ಉಪಾಧ್ಯಕ್ಷರಾದ ಎಂ.ಜಿ.ಬಾಲಕೃಷ್ಣರೆಡ್ಡಿ, ಉಮಾರೆಡ್ಡಿ, ಮಾಜಿ ಅಧ್ಯಕ್ಷ ಬಿ.ವಿ.ಗೋಪಾಲ್‌ರೆಡ್ಡಿ, ಪ್ರವಾಸೋದ್ಯಮ ಸಮಿತಿ ಅಧ್ಯಕ್ಷ ಕೆ.ಷಣ್ಮುಗಂ ಇದ್ದರು.

ಮಹಿಳೆ ಅಪಹರಣ ಪ್ರಕರಣ

ಹೆಚ್.ಡಿ.ರೇವಣ್ಣ ಜಾಮೀನು ಅರ್ಜಿ ವಿಚಾರಣೆ ಸೋಮವಾರಕ್ಕೆ ಮುಂದೂಡಿಕೆ



ಬೆಂಗಳೂರು, ಮೇ 9– ಮಹಿಳೆ ಅಪಹರಣ ಪ್ರಕರಣದಲ್ಲಿ ಜೈಲು ಪಾಲಾಗಿರುವ ಜೆಡಿಎಸ್ ಶಾಸಕ ಹೆಚ್.ಡಿ. ರೇವಣ್ಣ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ನ್ಯಾಯಾಲಯ ಸೋಮವಾರಕ್ಕೆ ಮುಂದೂಡಿದೆ.

ಮಧ್ಯಂತರ ನಿರೀಕ್ಷಣಾ ಜಾಮೀನು ಕೋರಿ ಹೆಚ್.ಡಿ.ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ಇಂದು ನಗರದ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಲ್ಲಿ ನಡೆಯಿತು. ರೇವಣ್ಣ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ವಿ.ನಾಗೇಶ್, ಮಹಿಳೆ ಕಿಡ್ನಾಪ್ ಪ್ರಕರಣದಲ್ಲಿ ರೇವಣ್ಣ ಪಾತ್ರವಿಲ್ಲ. ಅವರ ವಿರುದ್ಧ ಐಪಿಸಿ ಸೆಕ್ಷನ್ 364 ಅಡಿಯಲ್ಲಿ ಪ್ರಕರಣ ದಾಖಲಿಸುವ ಅಗತ್ಯವಿರಲಿಲ್ಲ ಎಂದರು.

ಸುಳ್ಳು ಹೇಳಿ ತಾಯಿಯನ್ನು ಕರೆದೊಯ್ದರು ಎಂದು ಸಂತ್ರಸ್ತೆ ಮಗ ನೀಡಿರುವ ದೂರಿನಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಆಕೆಗೆ ಸುಳ್ಳು ಹೇಳಿ ವಂಚಿಸಿರುವ ಆರೋಪ ಅಪಹರಣ ಆಗುವುದಿಲ್ಲ. ಸಿಎಂ ಹೇಳಿದ್ದಾರೆ ಎಂದು ಕರೆದೊಯ್ದರೆ ಸಿಎಂ ಬಂಧಿಸಬೇಕೇ ಎಂದು ಪ್ರಶ್ನಿಸಿದ ವಕೀಲರು, ರೇವಣ್ಣ ಬಲ ಪ್ರಯೋಗ ಅಥವಾ ಮೋಸ ಮಾಡಿ ಕರೆದೊಯ್ದಿರುವ ಆರೋಪ ಇಲ್ಲ. ಆದಾಗ್ಯೂ, ಅವರನ್ನು ನಂಬರ್ 1 ಆರೋಪಿಯನ್ನಾಗಿ ಮಾಡಲಾಗಿದ್ದು, ಅವರಿಗೆ ಜಾಮೀನು ಮಂಜೂರು ಮಾಡುವಂತೆ ಮನವಿ ಮಾಡಿದರು.

ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕ ಜಯ್ನಾ ಕೊಠಾರಿ, ವಾದ ಮಂಡಿಸಲು ಕಾಲಾವಕಾಶಕ್ಕೆ ನ್ಯಾಯಾಲಯವನ್ನು ಕೋರಿದರು. ಇದರಿಂದಾಗಿ ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್, ಮುಂದಿನ ವಿಚಾರಣೆಯನ್ನು ಸೋಮವಾರ ಬೆಳಗ್ಗೆ 11–30ಕ್ಕೆ ಮುಂದೂಡಿದರು. ಇದರಿಂದಾಗಿ ಇನ್ನೂ ಮೂರು ದಿನಗಳ ಕಾಲ ರೇವಣ್ಣ ಅವರು ಜೈಲಿನಲ್ಲಿ ಇರಬೇಕಾಗಿದೆ

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 9– ತಾಲೂಕಿನ ಶ್ರೀರಾಂಪುರದ ನಿರ್ಮಲ ಪ್ರೌಢಶಾಲೆಯ ವಿದ್ಯಾರ್ಥಿನಿ ಎಸ್.ಅಮೃತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 550(ಶೇ.88) ಅಂಕಗಳನ್ನು ಗಳಿಸಿದ್ದಾಳೆ. ಈಕೆ ಜಯಪುರ ರಾಘವೇಂದ್ರ ಪ್ರೌಢಶಾಲೆಯ ಸಹಶಿಕ್ಷಕ ಸಿದ್ದರಾಮು ಅವರ ಪುತ್ರಿ.



ಮೈಸೂರು ನಗರಪಾಲಿಕೆ ಮಾಜಿ ಸದಸ್ಯರಾದ ಭಾಗ್ಯ ಮಾದೇಶ್ ಅವರ ಪುತ್ರ ಮದನ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಮೈಸೂರು ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಕೆ.ಆರ್.ಮಿಲ್ ಶಿವಣ್ಣ, ಸುರೇಶ್ ಗೋಲ್ಡ್, ಕೃಷ್ಣೇಗೌಡ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಮದನ್ ತಂದೆ ಹಾಗೂ ಪಾಲಿಕೆ ಮಾಜಿ ಸದಸ್ಯ ಮಾದೇಶ್ ಉಪಸ್ಥಿತರಿದ್ದಾರೆ.

ಜನಸೇವಕ ಯುವ ಬ್ರಿಗೇಡ್‌ನಿಂದ ವಿವಿಧ ಕ್ಷೇತ್ರ ಸಾಧಕರಿಗೆ 'ಕಾಯಕ ಯೋಗಿ ಬಸವಶ್ರೀ ಪ್ರಶಸ್ತಿ'

ಮೈಸೂರು, ಮೇ 9(ಎಂಕೆ)– ಜನಸೇವಕ ಯುವ ಬ್ರಿಗೇಡ್ ವತಿಯಿಂದ ಬಸವ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಾದ ಪ್ರೊ.ಸಾಧನಾ ತಂತ್ರಿ(ಶಿಕ್ಷಣ ಕ್ಷೇತ್ರ), ಮಾಯಾ ಶಾನ್‌ಬಾಗ್(ಸಾಮಾಜಿಕ ಕ್ಷೇತ್ರ), ಎಸ್.ಇ. ಗಿರೀಶ್(ಆರೋಗ್ಯ ಕ್ಷೇತ್ರ), ಮಹೇಂದ್ರ ಸಿಂಗ್ ಕಾಳಪ್ಪ(ಪರಿಸರ ಕ್ಷೇತ್ರ) ಆರ್. ಮಹೇಶ್ ಕುಮಾರ್(ಸಂಘಟನಾ ಕ್ಷೇತ್ರ) ಅವರಿಗೆ 'ಕಾಯಕ ಯೋಗಿ ಬಸವಶ್ರೀ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಮೈಸೂರಿನ ಹೊರವಲಯದಲ್ಲಿರುವ ರೂಪಾನಗರದ ಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಹಾಗೂ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಬಳಿಕ ಮಾತನಾಡಿದ ಅವರು, ಕನ್ನಡ ನಾಡಿನ ಪ್ರಪ್ರಥಮ ಆಧ್ಯಾತ್ಮಿಕ ಗುರುಗಳಾದ ಬಸವಣ್ಣನವರು ಕುಂದಾಚಾರದ ವಿರುದ್ಧ ಸಿಡಿದೆದ್ದು, ಅನುಭವ ಮಂಟಪ ಸ್ಥಾಪಿಸುವ ಮೂಲಕ ಸಮ ಸಮಾಜದ ನಿರ್ಮಾಣದಲ್ಲಿ ತಮ್ಮದೇ ಹೋರಾಟ ನಡೆಸಿದ್ದಾರೆ ಎಂದು ಸ್ಮರಿಸಿದರು.

ವಚನಗಳ ಮೂಲಕ ಸಮಾಜದಲ್ಲಿ ಆಧ್ಯಾತ್ಮ ಚಿಂತನೆಯನ್ನು ಹರಿಸಿದ ಬಸವಣ್ಣನವರು, ಸಾಹಿತ್ಯ ಕ್ಷೇತ್ರ ಮಾತ್ರವಲ್ಲದೆ ವೈದ್ಯಕೀಯ ಕ್ಷೇತ್ರಕ್ಕೂ ಕೊಡುಗೆ ನೀಡಿದ್ದಾರೆ. ವಚನಗಳ ಮೂಲಕ ಆರೋಗ್ಯ ಕಾಳಜಿ ವಹಿಸುವಂತೆ ತಿಳಿಸಿದ್ದಾರೆ. ಹಾಗೆಂಯೇ ಪ್ರಸ್ತುತ ಸಮಾಜದ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲಿದ ಸಾಂಸ್ಕೃತಿಕ ನಾಯಕ ಎಂದು ಹೇಳಿದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾದ ನಾರಾಯಣಗೌಡ, ಬಿಜೆಪಿ ಮುಖಂಡ ಅರುಣ್ ಕುಮಾರ್ ಗೌಡ, ವಿವೇಕಾನಂದ ಇನ್ಸ್‌ಟಿಟ್ಯೂಟ್ ಅಧ್ಯಕ್ಷೆ ಸವಿತಾ ಗೌಡ, ಜನಸೇವಕ ಯುವ ಬ್ರಿಗೇಡ್ ಅಧ್ಯಕ್ಷ ಡಿ.ರಾಘವೇಂದ್ರ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಶ್ರೀಧರ್, ಪ್ರವೀಣ್ ಕುಮಾರ್, ಮಹದೇವ್‌ಸ್ವಾಮಿ, ನಂಜುಂಡಸ್ವಾಮಿ, ಸ್ಪಂದನ, ಚಂದ್ರಶೇಖರ್ ಪಾಟೀಲ್, ರಕ್ಷಾ ಪ್ರಭು ಮತ್ತಿತರರಿದ್ದರು.



ಜನಸೇವಕ ಯುವ ಬ್ರಿಗೇಡ್ ವತಿಯಿಂದ ಬಸವ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ 'ಕಾಯಕ ಯೋಗಿ ಬಸವಶ್ರೀ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ನಿವೃತ್ತ ಬ್ಯಾಂಕ್ ನೌಕರ ಆತ್ಮಹತ್ಯೆ



ಚಾಮರಾಜನಗರ, ಮೇ 9–ಜೀವನದಲ್ಲಿ ಜುಗುಪ್ಸೆಗೊಂಡು ನಿವೃತ್ತ ಬ್ಯಾಂಕ್ ನೌಕರ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬೆಂಡರವಾಡಿಯಲ್ಲಿ ಬುಧವಾರ ರಾತ್ರಿ ನಡೆದಿದೆ.

ನಗರದ ಶಂಕರಪುರ ಬಡಾವಣೆಯ ನಿವಾಸಿ ಪ್ರಸಾದ್ ಆತ್ಮಹತ್ಯೆ ಮಾಡಿಕೊಂಡ ನಿವೃತ್ತ ನೌಕರ. ತಾಲೂಕು ಸೇವಾದಳದ ಉಪಾಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಸಾದ್, ಹಲವು ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದರು. ಇವರ ಪತ್ನಿ ಕೋವಿಡ್ ಸಂದರ್ಭದಲ್ಲಿ ಮೃತಪಟ್ಟಿದ್ದರು. ಬಳಿಕ ಒಂಟಿ ಜೀವನ ನಡೆಸುತ್ತಿದ್ದ ಇವರು ಜುಗುಪ್ಸೆಗೊಂಡು ಬುಧವಾರ ರಾತ್ರಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೆರೆಯಲ್ಲಿ ಗುರುವಾರ ಬೆಳಗ್ಗೆ ಶವ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಹೃದಯದಲ್ಲಿ ಬುದ್ಧ, ಅಂಬೇಡ್ಕರ್ ತತ್ವ ಸ್ಥಾಪಿಸಿಕೊಂಡಿದ್ದ ವಿ.ಶ್ರೀನಿವಾಸ ಪ್ರಸಾದ್

ಹಿರಿಯ ಲೇಖಕ ಪ್ರೊ.ಸಿ.ನಾಗಣ್ಣ ನುಡಿ ನಮನ



ಮೈಸೂರಿನ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅವರ ನುಡಿ ನಮನ ಕಾರ್ಯಕ್ರಮ ನಡೆಯಿತು.

> ವಿ.ಶ್ರೀನಿವಾಸ ಪ್ರಸಾದ್ ಅವರ ಮೇರು ವ್ಯಕ್ತಿತ್ವಕ್ಕೆ ಎಂದೂ ಸಾವಿಲ್ಲ. ಕರ್ನಾಟಕದಲ್ಲಿ ಬುದ್ಧ ಮತ್ತು ಅಂಬೇಡ್ಕರ್ ಅವರ ವಿಚಾರಧಾರೆಗಳಿಗೆ ಚಲನಶೀಲ ಶಕ್ತಿ ನೀಡುವಲ್ಲಿ ಅವರ ಪಾತ್ರ ಹಿರಿದು.
> -ಪ್ರೊ.ಡಿ.ಆನಂದ್

ಮೈಸೂರು,ಮೇ 9(ಪಿಎಂ)– ಮನುಷ್ಯನ ಘನತೆ ಮತ್ತು ಗೌರವಕ್ಕೆ ಒತ್ತು ನೀಡಬೇಕೆಂಬ ಬುದ್ಧನ ಮಾರ್ಗ ಮತ್ತು ಶಿಕ್ಷಣ, ಸಂಘಟನೆ ಹಾಗೂ ಹೋರಾಟವೆಂಬ ಡಾ.ಅಂಬೇಡ್ಕರ್ ಅವರ ತತ್ವವನ್ನು ತಮ್ಮ ಹೃದಯದಲ್ಲಿ ವಿ.ಶ್ರೀನಿವಾಸಪ್ರಸಾದ್ ಸ್ಥಾಪಿಸಿಕೊಂಡಿದ್ದರು ಎಂದು ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕರೂ ಆದ ಲೇಖಕ ಪ್ರೊ.ಸಿ.ನಾಗಣ್ಣ ನುಡಿ ನಮನ ಸಲ್ಲಿಸಿದರು.

ಮೈಸೂರಿನ ಅಶೋಕ ವೃತ್ತದ ಬಳಿ ಇರುವ (ಬಲ್ಲಾಳ್ ವೃತ್ತ) ವಿಶ್ವಮೈತ್ರಿ ಬುದ್ಧವಿಹಾರದ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿ.ಶ್ರೀನಿವಾಸಪ್ರಸಾದ್ ಅವರ ನುಡಿನಮನ ಕಾರ್ಯಕ್ರಮದಲ್ಲಿ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ, ಹೋರಾಟದ ತತ್ವವು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ಸಮಾನವಾದುದು. ಇಂತಹ ತತ್ವದಲ್ಲಿ ನಂಬಿಕೆ ಹೊಂದಿದ್ದ ವಿ.ಶ್ರೀನಿವಾಸ ಪ್ರಸಾದ್, ಎಲ್ಲಿಯೇ ಅಸಮಾನತೆ ಕಂಡುಬಂದರೂ ಕಟುವಾಗಿ ಧಿಕ್ಕರಿಸುತ್ತಿದ್ದರು. ಅವರ ಚಿಂತನೆಯಲ್ಲಿ ವರ್ಣಾಶ್ರಮ ಧರ್ಮಕ್ಕೆ ಸ್ಥಾನವೇ ಇರಲಿಲ್ಲ. ತಮ್ಮ ಭಾಷೆ ಮತ್ತು ಅಭಿವ್ಯಕ್ತಿಯಲ್ಲಿ ಅತ್ಯಂತ ಶಿಸ್ತು ರೂಢಿಸಿಕೊಂಡಿದ್ದರು. ಅವರ ಆಲೋಚನೆಯಲ್ಲಿ ಎಂದೂ ಉತ್ಪ್ರೇಕ್ಷೆಗೆ ಸ್ಥಾನವೇ ಇರಲಿಲ್ಲ ಎಂದರು.

ಯಾವುದೇ ವಿಧದ ಧರ್ಮದ ವೈಭವೀಕರಣವನ್ನು ಅವರು ಇಷ್ಟಪಡುತ್ತಿರಲಿಲ್ಲ. ಅವರ ವರ್ತನೆ ಮತ್ತು ಜಗತ್ತನ್ನು ನೋಡುವ ಕ್ರಮದಲ್ಲಿ ವೈಶಿಷ್ಟ್ಯ, ಶಿಸ್ತು, ನಿಯಮ, ನೇರ ವರ್ತನೆ ಪ್ರಕಟವಾಗುತ್ತಿತ್ತು. ನೊಂದವರು, ತುಳಿತಕ್ಕೆ ಒಳಗಾದವರ ಬಗ್ಗೆಯೇ ಅವರ ಮನಸ್ಸು ಸದಾ ಚಿಂತನೆ ಮಾಡುತ್ತಿತ್ತು. ಹಿಂದುಳಿದ ವರ್ಗಕ್ಕೆ ಸೇರಿದ ನನ್ನನ್ನು ಅವರು ತಮ್ಮ ಆಪ್ತ ವಲಯಕ್ಕೆ ಸೆಳೆದುಕೊಂಡರು ಎಂದು ಹೇಳಿದರು.

ಆತ್ಮಚರಿತ್ರೆ ಪೂರ್ಣ ಆಗಬೇಕಿತ್ತು: ವರ್ತಮಾನದ ತೊಡಕುಗಳ ಕಾರಣ ಅವರು ಪಕ್ಷ ಬದಲಿಸಿದರು. ಆದರೆ ತಮ್ಮ ತತ್ವಗಳನ್ನು ಎಂದೂ ತ್ಯಾಗ ಮಾಡಲಿಲ್ಲ. ಇದನ್ನು ಅವರೇ ಅರ್ಥಪೂರ್ಣವಾಗಿ ಘೋಷಿಸಿದ್ದಾರೆ. ತಮ್ಮ ಪರಿಶ್ರಮದಿಂದ ಮಾನಸಿಕ, ಬೌದ್ಧಿಕ ಮತ್ತು ಚಾರಿತ್ರಿಕವಾಗಿ ಎತ್ತರಕ್ಕೆ ಬೆಳೆದರು. ತಮ್ಮ ಆತ್ಮಚರಿತ್ರೆ ಬರೆಯಬೇಕೆಂಬ ಉತ್ಕಟ ಆಸೆ ಅವರಲ್ಲಿತ್ತು. ಒಂದು ವೇಳೆ ಅವರ ಆತ್ಮಚರಿತ್ರೆ ಪೂರ್ಣಗೊಂಡಿದ್ದರೆ ಅದೊಂದು ಚರಿತ್ರಾರ್ಹ ಆತ್ಮಚರಿತ್ರೆಯಾಗುವ ಮೂಲಕ ಮುಂದಿನ ಅನೇಕ ತಲೆಮಾರಿನ ಯುವ ಜನರಿಗೆ ಅದು ದಾರಿದೀಪವಾಗುತ್ತಿತ್ತು ಎಂದು ತಿಳಿಸಿದರು.

ಮಾತು ತಪ್ಪಿದ ಪ್ರಸಾದ್!: ಪ್ರಸಾದ್ ತಮ್ಮ ಆರೋಗ್ಯ ತಪ್ಪಿದ ಸಂದರ್ಭದಲ್ಲಿ ಚಿಕಿತ್ಸೆಗಾಗಿ ಬೆಂಗಳೂರಿಗೆ ಹೋಗುವಾಗ ಇನ್ನೆರಡು ದಿನಗಳಲ್ಲಿ ಬಂದೇ ಬಿಡುತ್ತೇನೆಂದು ಹೇಳಿ ಹೋಗುತ್ತಿದ್ದರು. ಅಂತೆಯೇ ಈ ಬಾರಿ ಕೂಡ ಓಟಿನ ದಿನ ಬಂದು ಬಿಡುತ್ತೇನೆ ಎಂದು ಹೋದವರು ಬರಲೇ ಇಲ್ಲ. ಅವರು ಇಷ್ಟು ಬೇಗ ದೇಹತ್ಯಾಗ ಮಾಡುತ್ತಾರೆಂದು ನಾವ್ಯಾರೂ ಭಾವಿಸಿರಲಿಲ್ಲ. ಈ ಬಾರಿ ಅವರು ಮಾತು ತಪ್ಪಿದರು ಎಂದು ಪ್ರೊ.ನಾಗಣ್ಣ ಭಾವುಕರಾದರು.

ಮಾಜಿ ಮೇಯರ್ ಪುರುಷೋತ್ತಮ್, ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕ ಪ್ರೊ.ಡಿ.ಆನಂದ್, ನಗರಪಾಲಿಕೆ ಮಾಜಿ ಸದಸ್ಯೆ ಪಲ್ಲವಿಬೇಗಂ, ಲೇಖಕರಾದ ಸಿದ್ದಸ್ವಾಮಿ, ಮಲ್ಕುಂಡಿ ಮಹದೇವಸ್ವಾಮಿ, ಗಾಯಕ ಅಮ್ಮ ರಾಮಚಂದ್ರ ರೈತ ಮುಖಂಡ ಮರಂಕಯ್ಯ, ಮುಖಂಡ ಈಶ್ವರ ಚಕ್ಕಡಿ ಮತ್ತಿತರರು ಹಾಜರಿದ್ದರು.

ಬೆಳ್ಳಿ ಬೆಳಕು

ಮೈಸೂರು ಮಿತ್ರ
● ಸತ್ಯಮೂರ್ತಿ ತೋಳಹುಣಸೆ
ಸಿನಿಮಾ ಪುರವಣಿ



ಪ್ರೇಮಲೋಕ-2

ಮನುಗೆ ನಾಯಕಿ ತೇಜು ಅಶ್ವಿನಿ

ಮೇ 30ಕ್ಕೆ ಮುಹೂರ್ತ

-ರವಿಚಂದ್ರನ್ ಸಾರಥ್ಯ



ಕ್ರೇಜಿಸ್ಟಾರ್ ರವಿಚಂದ್ರನ್, ಜೂಹಿ ಚಾವ್ಲಾ ಅಭಿನಯದ ಪ್ರೇಮಲೋಕ ಚಿತ್ರವನ್ನು ಇಂದಿಗೂ ಸಹ ಯಾರೊಬ್ಬರೂ ಮರೆಯಲು ಸಾಧ್ಯವಿಲ್ಲ, ಹಲವಾರು ದಾಖಲೆಗಳನ್ನು ಮಾಡಿದ ಆ ಚಿತ್ರಕ್ಕೆ ರವಿಚಂದ್ರನ್ ಅವರೇ ಆಕ್ಷನ್‌ಕಟ್ ಹೇಳಿದ್ದರು. ಕನ್ನಡ ಚಿತ್ರರಂಗದಲ್ಲಿ ಹೊಸ ಸಂಚಲನವನ್ನೇ ಸೃಷ್ಟಿಸಿದ್ದ ಆ ಚಿತ್ರದ ಮತ್ತೊಂದು ವರ್ಷನ್‌ನ್ನು ಇದೀಗ ರವಿಚಂದ್ರನ್ ಅವರೇ ಹೇಳ ಹೊರಟಿದ್ದಾರೆ. ಕ್ರೇಜಿಸ್ಟಾರ್ ಸೃಷ್ಟಿಸುತ್ತಿರುವ ಮತ್ತೊಂದು ಪ್ರೇಮಲೋಕದಲ್ಲಿ ಅವರ ಮಗ ಮನುರಂಜನ್ ನಾಯಕನಾಗಲಿದ್ದಾರೆ. ಹತ್ತು ವರ್ಷಗಳ ಹಿಂದೆ ತಮ್ಮ ಹುಟ್ಟುಹಬ್ಬದ ದಿನವೇ ಅದ್ದೂರಿ ಸೆಟ್‌ಹಾಕಿಸಿ ಪ್ರೇಮಲೋಕದಲ್ಲಿ ರಣಧೀರ ಹೆಸರಿನಲ್ಲಿ ಚಿತ್ರದ ಮುಹೂರ್ತ ನೆರವೇರಿಸಿದ್ದರು. ಅದರಲ್ಲಿ ಮನೋರಂಜನ್ ಅವರೇ ನಾಯಕನಾಗಿದ್ದರು. ಆದರೆ ಅದೇಕೋ ಆ ಚಿತ್ರವನ್ನು ರವಿಚಂದ್ರನ್ ಮತ್ತೆ ಕಂಟಿನ್ಯೂ ಮಾಡಲೇ ಇಲ್ಲ,

ಇದೀಗ ದಶಕದ ಬಳಿಕ ರವಿಚಂದ್ರನ್ ಅವರು ತಮ್ಮ ಹುಟ್ಟುಹಬ್ಬದ ದಿನವೇ ಪ್ರೇಮಲೋಕ-2 ಚಿತ್ರಕ್ಕೆ ಚಾಲನೆ ನೀಡುತ್ತಿದ್ದಾರೆ. ಮುಂದಿನ ವರ್ಷವೇ ಪ್ರೇಮಲೋಕ-2 ಚಿತ್ರವನ್ನು ತೆರೆಗೆ ತರುತ್ತೇನೆ. ಈ ಸಲ ಪ್ರಯೋಗ ಮಾಡದೆ ನಿಮಗೆ ಇಷ್ಟವಾಗುವಂತಹ ಸಿನಿಮಾ ಮಾಡ್ತೀನಿ. ಚಿತ್ರದಲ್ಲಿ 20ರಿಂದ 25 ಹಾಡುಗಳೂ ಇರುತ್ತವೆ ಎಂದವರು ಹೇಳಿದ್ದರು. ಈ ಸಲ ತಮ್ಮ ಪುತ್ರನಿಗಾಗಿ ಚೆನ್ನೈ ಚೆಲುವೆ ತೇಜು ಅಶ್ವಿನಿ ಅವರನ್ನು ನಾಯಕಿಯಾಗಿ ಕರೆತರಲಿದ್ದಾರೆ ಎನ್ನಲಾಗಿದೆ. ಈಗಾಗಲೇ ತಮಿಳಿನ ಮೂಡ್ರಾಂ ಕಣ್, ಪ್ಯಾರೀಸ್ ಜಯರಾಜ್ ಮುಂತಾದ ಚಿತ್ರಗಳಲ್ಲಿ ನಟಿಸಿ ಗುರ್ತಿಸಿಕೊಂಡಿರುವ ತೇಜು ಅಶ್ವಿನಿ, ಪ್ರೇಮಲೋಕ-2 ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಡಲಿದ್ದಾರೆ. ಮೇ 30ಕ್ಕೆ ಚಿತ್ರದ ಮುಹೂರ್ತ ನಡೆಯಲಿದ್ದು, ಆ ದಿನ ಇನ್ನೂ ಹೆಚ್ಚಿನ ಮಾಹಿತಿ ಸಿಗುವ ಸಾಧ್ಯತೆಯಿದೆ. ಈಗಾಗಲೇ ಡ್ಯಾನ್ಸರ್ ಹಾಗೂ ಕೊರಿಯೋಗ್ರಾಫರ್ ಆಗಿಯೂ ತೇಜು ಅಶ್ವಿನಿ ಅವರು ಗುರ್ತಿಸಿಕೊಂಡಿದ್ದಾರೆ. ಇದುವರೆಗೂ ರವಿಚಂದ್ರನ್ ಅವರ ಪ್ರೇಮಲೋಕ ಚಿತ್ರವನ್ನು ಮೀರಿಸುವಂಥ ಸಿನಿಮಾ ಮಾಡಲು ಅವರಿಂದಲೂ ಸಹ ಸಾಧ್ಯವಾಗಿಲ್ಲ. 1987ರಲ್ಲಿ ಬಿಡುಗಡೆಯಾದ ಆ ಚಿತ್ರ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಧೃವತಾರೆಯಾಗಿ ನಿಂತಿದೆ. ಇದೀಗ ಆ ಪ್ರೇಮಕಾವ್ಯವನ್ನು ನೆನಪಿಸುವಂತಹ ಮತ್ತೊಂದು ದೃಶ್ಯಕಾವ್ಯವನ್ನು ಅದೇ ರವಿಚಂದ್ರನ್ ಅವರು ಕಟ್ಟಲು ಮುಂದಾಗಿದ್ದಾರೆ.

ಉದ್ಯಮ-ಮಾಧ್ಯಮ ಸಂಘರ್ಷದ ಕಥೆ

ಭಗೀರಥ



ಆಕಾಶದಿಂದ ಗಂಗೆಯನ್ನು ಧರೆಗಿಳಿಸಿದ ಭಗೀರಥನ ಕಥೆ ನಿಮಗೆಲ್ಲ ಗೊತ್ತೇ ಇದೆ. ಅದೇ ರೀತಿ ಅಸಾಧ್ಯವಾದುದ್ದನ್ನು ಸಾಧ್ಯವಾಗಿಸಿದವನ ಬಗ್ಗೆ ನಿರ್ದೇಶಕ ರಾಮ್ ಜನಾರ್ಧನ್ ಅವರು 'ಭಗೀರಥ' ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರನ್ನು ಫಿಲಂ ಚೇಂಬರ್ ಅಧ್ಯಕ್ಷರಾದ ಎನ್.ಎಂ.ಸುರೇಶ್ ಅನಾವರಣಗೊಳಿಸಿದರು. ಸಾಯಿ ರಮೇಶ್ ಪ್ರೊಡಕ್ಷನ್ ಲಾಂಛನದಲ್ಲಿ ಕೆ.ರಮೇಶ್ ಹಾಗೂ ಬಿ.ಭೈರಪ್ಪ ಮೈಸೂರು ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಜಯಪ್ರಕಾಶ್, ಚಂದನ ರಾಘವೇಂದ್ರ ಹಾಗೂ ಶ್ರೀಯಾ ಪಾವನಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ,

ನಿರ್ದೇಶಕ ರಾಮ್ ಜನಾರ್ಧನ್ ಮಾತನಾಡುತ್ತ. ಭಗೀರಥ ನನ್ನ ನಿರ್ದೇಶನದ ಐದನೇ ಚಿತ್ರ. ಪ್ರಸ್ತುತ ರಾಜಕಾರಣದ ಸುತ್ತ ಹಾಗೂ ಪತ್ರಕರ್ತರೊಬ್ಬರ ಸುತ್ತ ನಡೆಯುವ ಕಥಾಹಂದರ ಈ ಚಿತ್ರದಲ್ಲಿದೆ. ಯಾವುದಾದರೂ ಒಂದು ಕೆಲಸ ಮಾಡಲು ಹೊರಟಾಗ ಏನೇ ಅಡ್ಡಿ ಆತಂಕ ಎದುರಾದರೂ ಛಲಬಿಡದೆ ಸಾಧಿಸುವುದನ್ನು ಭಗೀರಥ ಪ್ರಯತ್ನ ಎನ್ನುತ್ತೇವೆ. ಅಂಥ ಸಾಧಕನ ಕಥೆ ನಮ್ಮ ಚಿತ್ರದಲ್ಲಿದೆ. ಚಿತ್ರ ಈಗಾಗಲೇ ಬಿಡುಗಡೆಗೆ ಸಿದ್ಧವಾಗಿದ್ದು, ಮಂದಿನ ತಿಂಗಳು ರಿಲೀಸ್ ಮಾಡುತ್ತಿದ್ದೇವೆ ಎಂದು ಹೇಳಿದರು.

ನಾಯಕ ಜಯಪ್ರಕಾಶ್ ಮಾತನಾಡುತ್ತ, ಜರ್ನಲಿಸಂ ಮುಗಿಸಿ ಪತ್ರಕರ್ತನಾಗಿದ್ದ ನಾನು, ಜಮಾನ ಚಿತ್ರದ ಮೂಲಕ ನಾಯಕ ನಟನಾದೆ, ಭಗೀರಥ ನನ್ನ ಮೂರನೇ ಚಿತ್ರವಾಗಿದ್ದು, ಇದರಲ್ಲಿ ಸೂರ್ಯಪ್ರಕಾಶ್ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಭಗೀರಥ ಹೆಸರಿಗೆ ತಕ್ಕಂತೆ ನೀರಿಗೆ ಸಂಬಂಧಿಸಿದ ಕಥೆಯೂ ನಮ್ಮ ಚಿತ್ರದಲ್ಲಿದೆ ಎಂದು ಹೇಳಿದರು. ನಿರ್ದೇಶಕರು ಹೇಳಿದ ಕಥೆ ನಮಗೆ ಇಷ್ಟವಾಯಿತು. ಹಾಗಾಗಿ ಈ ಚಿತ್ರ ನಿರ್ಮಾಣಕ್ಕೆ ಮುಂದಾದೆವು. ಚಿತ್ರದ ಎಲ್ಲ ಕೆಲಸಗಳು ಮುಗಿದಿದ್ದು, ರಿಲೀಸ್‌ಗೆ ಸಿದ್ಧವಾಗಿದೆ ಎಂದು ನಿರ್ಮಾಪಕರಾದ ಕೆ.ರಮೇಶ್ ಹಾಗೂ ಬಿ.ಭೈರಪ್ಪ ಹೇಳಿದರು. ನಾನು ನಾಯಕನ ಸೋದರತ್ತೆಯ ಮಗಳ ಪಾತ್ರದಲ್ಲಿ ನಟಿಸಿದ್ದೇನೆ ಎಂದು ನಟಿ ಶ್ರೀಯಾ ಪಾವನಿ ಅವರು ತಿಳಿಸಿದರು. ಹಾಡುಗಳ ಬಗ್ಗೆ ಸಂಗೀತ ನಿರ್ದೇಶಕ ಪ್ರದೀಪ್ ವರ್ಮ ಹಾಗೂ ಛಾಯಾಗ್ರಹಣದ ಕುರಿತು ಸೂರಿ ಚಿತ್ತೂರು ಅವರುಗಳು ಮಾಹಿತಿ ಹಂಚಿಕೊಂಡರು. ಜಯಪ್ರಕಾಶ್, ಚಂದನ ರಾಘವೇಂದ್ರ, ಸುಧಾ ಬೆಳವಾಡಿ, ಶಿವರಾಜ್ ಕೆ.ಆರ್. ಪೇಟೆ, ರವಿಕಾಳೆ, ಶ್ರೀನಿವಾಸಪ್ರಭು, ಬಲ ರಾಜವಾಡಿ, ನಯನ, ಸುರಭಿ ರವಿ ಈ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಕೊರಗಜ್ಜ ಚಿತ್ರಕ್ಕೆ ಹರಸಿದ ಕೊರಗಜ್ಜ ದೈವ



ಒಂದು ದೈವದ ಬಗ್ಗೆ ಸಿನಿಮಾ ಮಾಡಿ, ಅದೇ ದೈವದ ಅನುಮತಿ ಪಡೆದು ಚಿತ್ರವನ್ನು ಬಿಡುಗಡೆ ಮಾಡುತ್ತಿರುವುದು ಚಿತ್ರರಂಗದ ಇತಿಹಾಸದಲ್ಲೇ ಮೊದಲೆನ್ನಬಹುದಾದ ಘಟನೆ ಇತ್ತೀಚೆಗೆ ನಡೆದಿದೆ. ಆ ಚಿತ್ರದ ಹೆಸರು ಕೊರಗಜ್ಜ, ಸಕ್ಸಸ್ ಫಿಲಂಸ್ ಮತ್ತು ತ್ರಿವಿಕ್ರಮ ಸಿನಿಮಾಸ್ ಬ್ಯಾನರ್ ಅಡಿ, ತ್ರಿವಿಕ್ರಮ ಸಪಲ್ಯ ಅವರು ನಿರ್ಮಾಣ ಮಾಡುತ್ತಿರುವ ಹಾಗೂ ಸುಧೀರ್ ಅತ್ತಾವರ್ ಅವರು ನಿರ್ದೇಶನ ಮಾಡಿರುವ ಬಹುನಿರೀಕ್ಷಿತ ಚಿತ್ರ ಎನಿಸಿಕೊಂಡ ಕೊರಗಜ್ಜ ಬಿಡುಗಡೆಗೆ ಸಿದ್ಧವಾಗಿದೆ, ಈಗಾಗಲೇ ಚಿತ್ರದ ಮೋಷನ್ ಪೋಸ್ಟರ್ ಜೊತೆಗೆ ಚಿತ್ರದ ಫಸ್ಟ್‌ಲುಕ್ ಕೂಡ ಬಿಡುಗಡೆಗೆ ಸಿದ್ಧವಾಗಿದ್ದು, ಕೊರಗಜ್ಜ ದೈವದ ಕಳೆ-ಕಾರ್ಣಿಕ ಮತ್ತು ಪಾವಿತ್ರ್ಯತೆಗೆ ಯಾವುದೇ ಧಕ್ಕೆ ಬಾರದಂತೆ ಅದನ್ನು ವಿನ್ಯಾಸಗೊಳಿಸಿ ಮೊದಲಿಗೆ ಕೊರಗಜ್ಜ, ಗುಳಿಗ ಹಾಗೂ ಕಲ್ಲುರ್ಟಿ ದೈವಗಳಿಗೆ ನಿರ್ದೇಶಕ ಸುಧೀರ್ ಅತ್ತಾವರ್ ಮತ್ತೆ ವಿಶೇಷ ಕೋಲಸೇವೆ ನೀಡಿ, ಅದೇ ಸಮಯದಲ್ಲಿ ದೈವಗಳ ಸಮಕ್ಷಮದಲ್ಲಿ ದೈವದ ಒಪ್ಪಿಗೆಗಾಗಿ ಅದನ್ನು ಪ್ರದರ್ಶಿಸಿದ್ದಾರೆ. ನಂತರ ಶ್ರೀದೈವಗಳಿಂದ ಚಿತ್ರದ ಫಸ್ಟ್ ಲುಕ್‌ನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಡಲು ಅನುಮತಿ ಕೇಳಿಕೊಂಡಾಗ. ಆ ದೈವಗಳು ಒಪ್ಪಿಗೆ ನೀಡಿದ ಘಟನೆಯೂ ನಡೆದಿದೆ.

ಆದರೆ ಎಲ್ಲೆಂದರಲ್ಲಿ ಈ ಫಸ್ಟ್‌ಲುಕ್ ಮತ್ತು ಮೋಷನ್ ಪೋಸ್ಟರನ್ನು ದೈವಕ್ಕೆ ಅಪಚಾರ ಆಗುವ ರೀತಿಯಲ್ಲಿ ಸಾರ್ವಜನಿಕರು ದುರುಪಯೋಗಪಡಿಸಬಾರದು ಎಂದು ದೈವಗಳು ಅಪ್ಪಣೆ ನೀಡಿದವು. ಮೋಷನ್ ಪೋಸ್ಟರನ್ನು ವಿಶೇಷವಾಗಿ ವಿನ್ಯಾಸಗೊಳಿಸಿದ್ದರೂ ದೈವಗಳು ಒಪ್ಪಿಗೆ ನೀಡದಿದ್ದರೆ ಅದನ್ನು ಬಿಡುಗಡೆಗೊಳಿಸುವುದು ಅಸಾಧ್ಯವಾಗಬಹುದಿತ್ತು. ಈ ರಿಸ್ಕನ್ನು ನಿರ್ದೇಶಕ ಮತ್ತು ನಿರ್ಮಾಪಕರು ತೆಗೆದುಕೊಂಡಿದ್ದರು. ಚಿತ್ರತಂಡವು ಪ್ರತೀ ಹಂತದಲ್ಲೂ ಕೊರಗಜ್ಜ ಹಾಗೂ ಶ್ರೀ ದೈವಗಳ ಆಶೀರ್ವಾದ ಪಡೆದೇ ಮುಂದಡಿ ಇಡುತ್ತಿದೆ. ಈ ಕಾರ್ಯಕ್ರಮದಲ್ಲಿ ಮಾಜಿಸಚಿವೆ ಶ್ರೀಮತಿ ಮೋಟಮ್ಮ, ಕಲಾವಿದೆ ಶ್ರೀಮತಿ ಭವ್ಯ ಮತ್ತು ಅವರ ಪುತ್ರಿ ಅದಿತಿ, ಎಡಿಟರ್ ವಿದ್ಯಾಧರ ಶೆಟ್ಟಿ, ಗಾಯಕ ರಮೇಶ್ಚಂದ್ರ, ಚಿತ್ರದ ನಾಯಕ ಭರತ್‌ಸೂರ್ಯ ಹಾಗೂ ಚಿತ್ರತಂಡದ ಬಹುತೇಕ ಸದಸ್ಯರುಗಳು ಮತ್ತು ತಂತ್ರಜ್ಞರು ಪಾಲ್ಗೊಂಡಿದ್ದರು.


ಮೈಂಡ್‌ಗೇಮ್ 'ಗ್ರೇ ಗೇಮ್ಸ್' ತೆರೆಗೆ



ಮೈಂಡ್‌ಗೇಮ್ ಸುತ್ತ ನಡೆಯುವ ಕಥಾಹಂದರ ಇಟ್ಟುಕೊಂಡು ಗಂಗಾಧರ ಸಾಲಿಮಠ ಅವರು ನಿರ್ದೇಶಿಸಿರುವ ಚಿತ್ರ 'ಗ್ರೇ ಗೇಮ್ಸ್' ಈ ಶುಕ್ರವಾರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ, ಆನಂದ್ ಮುಗದ್ ಅವರ ನಿರ್ಮಾಣದ ಈ ಚಿತ್ರದಲ್ಲಿ ಚಿನ್ನಾರಿಮುತ್ತ ವಿಜಯ ರಾಘವೇಂದ್ರ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮೈಂಡ್‌ಗೇಮ್ ಸುತ್ತ ನಡೆಯುವ ಕಾನ್ಸೆಪ್ಟ್ ಹೊಂದಿರುವ ಚಿತ್ರದಲ್ಲಿ ಗಾಳಿಪಟ ಭಾವನರಾವ್ ಹಾಗೂ ಇಶಿತಾ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೇಲರ್ ರಿಲೀಸ್ ಕಾರ್ಯಕ್ರಮ ನಡೆಯಿತು. ಹಿರಿಯ ನಿರ್ಮಾಪಕ ಎಸ್.ಎ.ಚಿನ್ನೇಗೌಡ, ಅಶ್ವಿನಿ ಪುನೀತ್ ರಾಜಕುಮಾರ್, ಶ್ರೀಮುರಳಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿದರು. ಈ ಚಿತ್ರದ ಮೂಲಕ ಶ್ರೀಮುರಳಿ ಅವರ ಸೋದರಳಿಯ (ಅಕ್ಕನ ಮಗ) ಜೈ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಶೃತಿ ಪ್ರಕಾಶ್, ಭಾವನರಾವ್, ಇಶಿತಾ, ರವಿಭಟ್, ಅರ್ಪಣ ವಸ್ತಾರೆ, ರವಿ ಭಟ್ ಮುಂತಾದವರು ಚಿತ್ರದಲ್ಲಿದ್ದಾರೆ, ಗ್ರೇ ಗೇಮ್ಸ್ ಚಿತ್ರವು ಮೇ ಹತ್ತರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

ಈ ಸಂದರ್ಭದಲ್ಲಿ ನಟ ಶ್ರೀಮುರಳಿ ಮಾತನಾಡುತ್ತ, ಈ ಚಿತ್ರದ ಟ್ರೇಲರ್ ತುಂಬಾ ಚೆನ್ನಾಗಿದೆ. ನನ್ನ ಅಣ್ಣ ರಾಘು ತೆರೆಮೇಲೆ ತುಂಬಾ ಸ್ಮಾರ್ಟ್ ಆಗಿ ಕಾಣುತ್ತಿದ್ದಾನೆ. ನಾವು ಆಡಿ ಬೆಳೆಸಿದ ಅಕ್ಕನ ಮಗ ಜೈ ಕೂಡ ಈ ಚಿತ್ರದಲ್ಲಿ ನಟಿಸಿರುವುದು ಖುಷಿಯಾಗಿದೆ. ಚಿತ್ರವು ಜನರ ಮನ ಗೆದ್ದು ಯಶಸ್ವಿಯಾಗಲಿ ಎಂದು ಹಾರೈಸಿದರು. ನಂತರ ಚಿತ್ರದ ನಾಯಕನಟ ವಿಜಯ ರಾಘವೇಂದ್ರ ಮಾತನಾಡುತ್ತ ನಿರ್ದೇಶಕರು ಹೇಳಿದ ಈ ಮೈಂಡ್ ಗೇಮ್ ಕಥೆ ನನಗೆ ತುಂಬಾ ಇಷ್ಟವಾಯಿತು. ಟ್ರೇಲರನ್ನು ನಾನು ಸಹ ಇಂದೇ ನೋಡಿದ್ದು. ತುಂಬಾ ಚೆನ್ನಾಗಿ ಬಂದಿದೆ. ಈ ಸಮಯದಲ್ಲಿ ನಾನು ಪುನೀತ್ ರಾಜಕುಮಾರ್ ಹಾಗೂ ನನ್ನ ಪತ್ನಿ ಸ್ಪಂದನಾರನ್ನು ತುಂಬಾ ಸ್ಮರಿಸಿಕೊಳ್ಳುತ್ತೇನೆ. ನನ್ನ ಅಕ್ಕನ ಮಗ ಜೈ ಕಂಡರೆ ಸ್ಪಂದನಾಗೆ ಬಹಳ ಪ್ರೀತಿ. ಇಂದು ಸ್ಪಂದನಾ ಇದ್ದಿದ್ದರೆ ತುಂಬಾ ಖುಷಿ ಪಡುತ್ತಿದ್ದಳು ಎಂದು ಹೇಳಿದರು. ನಿರ್ದೇಶಕ ಗಂಗಾಧರ ಸಾಲಿ ಮಠ ಮಾತನಾಡಿ, ಕನ್ನಡದಲ್ಲಿ ಇದೊಂದು ಅಪರೂಪದ ಕಥೆ ಎನ್ನಬಹುದು.

ಸಿನಿಪದಬಂಧ-525



ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ವಿಜೇತರು: ಟಿ.ಕೃಷ್ಣಮೂರ್ತಿ, 69, ಜಿ ಬ್ಲಾಕ್, 3ನೇ ಕ್ರಾಸ್, ರಾಮಕೃಷ್ಣನಗರ, ಮೈಸೂರು-4



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 524ರ ಉತ್ತರ

ರಾ	ಮ	ಲ	ಕ್ಷ್ಮ	ಣ			ಆ		ತಿ	
ಜ		ವ			ಜಾ	ತ	ಕ	ಫ	ಲ	
ದು		ಕು			ಗೃ		ಸ್ಮಿ		ಕ	
ರ್ಗ		ಶ	ರಾ	ವ	ತಿ		ಕ			ಸ
ದ								ಗಾ		ದಾ
ರ	ತ್ನ	ಮಂ	ಜ	ರಿ		ವಿ	ಜ	ಯ	ಕಾ	ಶಿ
ಹ		ಡ್ಯ								ವ
ಸ್ಯ			ಪ		ತ	ವಂ	ದ್ದಿ	ಬು		ಬ್ರ
	ವಿ		ರಿ		ನಿ			ಲ್		ಹಾ
	ಲ	ಕ್ಷ್ಮ	ಣ	ರೇ	ಖೆ			ಬು		ವ
	ನ್		ಯ			ರಿ	ಯ	ಲ್	ಸ್ಟಾ	ರ್

ಎಡದಿಂದ ಬಲಕ್ಕೆ

1. ವಿಶ್ವಕ್ಕೆ ಬೆಳಕು ಚೆಲ್ಲಿದ 12 ನೇ ಶತಮಾನದ ಸಮಾಜ ಸುಧಾರಕ 9
5. ನಮ್ಮ ಸಂಸಾರದ ಸಂತೋಷದ ಕಡಲು 6
7. ಹುದುಗಿಟ್ಟ ಸಂಪತ್ತು 2
8. ರಾಜಕುಮಾರ್ ವಿಲಾಸ ಪ್ರಿಯರಿಗೆಲ್ಲ ಅರಸ 6
10. ಡಾ. ರಾಜ್ ಕುಮಾರ್ ಅಭಿನಯದ ಕಾಲದ ಪುತಳಿ 6
14. _ _ ಶಿವಾನಂದ್ 2
15. ವಿಷ್ಣುವರ್ಧನ್ – ಭಾರತಿಯ ಚಿನ್ನದ ಹರಿಣಿ ಇಲ್ಲಿ ತಿರುಗಿದೆ 6
17. ಕುಂಕುಮವಿರುವದೇ ಹಣೆಗಾಗಿ.. ಅರಳಿದ ಹೂವು ಮುಡಿಗಾಗಿ.. ನೀನಿರುವೆ ನನಗಾಗಿ..? 9

ಮೇಲಿನಿಂದ ಕೆಳಕ್ಕೆ

1. ರಾಜಣ್ಣನ ಹುಟ್ಟಿನ ಗೌಪ್ಯತೆ 5
2. ಆಚೆ ಎಲ್ಲೋ ಹಿಂದೆ ಇರುವ ಕಡಲತೀರ 5
3. ಅಭಿ ಚಿತ್ರದ ನಾಯಕಿ 2
4. ವಿಷ್ಣುವರ್ಧನ್ – ರೂಪಿಣಿ ಅಭಿನಯಕ್ಕೆ ಭಾರ್ಗವ ನಿರ್ದೇಶಕ 5
5. ಸುರೇಶ್ ಹೇಬ್ಳಿಕರನಿಗೆ ಆದ ಪೆಟ್ಟು 3
6. ಬೆಲೆಬಾಳುವ ಮಣಿಯನ್ನು ಕೈಯಲ್ಲಿ ಇರಿಸಿಕೊಂಡಿರುವ ಹಾಸ್ಯ ನಟ 4
9. ಅಲಂಕಾರಿಕ ಸ್ತ್ರೀ ವಿಗ್ರಹ 4
10. ಪತಿಯ ಪ್ರಾಣವನ್ನು ಯಮನಿಂದ ಹಿಂದಕ್ಕೆ ಪಡೆದವಳು 5
11. ಎನ್.ಲಕ್ಷ್ಮೀ ನಾರಾಯಣ್ ಅವರ ಗಿರಿಯಲ್ಲಿನ ಸುಮ 5
12. ವಿಷ್ಣುವರ್ಧನ್ – ಸುಹಾಸಿನಿ ಅಭಿನಯದ ಚಿತ್ರ ಇಲ್ಲಿ ತಲೆ ಕೆಳಗು 3
13. ಒಂದು ಬಗೆಯ ವಾದ್ಯ ಹಿಡಿದು ಬಂದ ರವಿಚಂದ್ರನ್ 5
16. ರಾಶಿಗಳಲ್ಲಿ ಕೊನೆಗೆ ಸಿಕ್ಕ ನಟಿ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಎಸ್‌ಎಸ್‌ಎಲ್‌ಸಿ: ತಿ.ನರಸೀಪುರದಲ್ಲಿ ಶೇ.93.29ರಷ್ಟು ಪಾಸ್

ಕಳೆದ ಬಾರಿಗಿಂತ ಈ ಬಾರಿ ಶೇ.6 ರಷ್ಟು ಏರಿಕೆ: ಜಿಲ್ಲೆಗೆ ಪ್ರಥಮ

ತಿ.ನರಸೀಪುರ, ಮೇ 9– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಿ.ನರಸೀಪುರ ತಾಲೂಕಿಗೆ ಶೇ.93.29 ರಷ್ಟು ಫಲಿತಾಂಶ ದೊರಕಿದ್ದು, ಕಳೆದ ಬಾರಿಗಿಂತ ಶೇ.6 ರಷ್ಟು ಏರಿಕೆ ಕಾಣುವ ಮೂಲಕ ಮೈಸೂರು ಜಿಲ್ಲೆಯಲ್ಲೇ ಪ್ರಥಮ ಸ್ಥಾನ ಪಡೆದು ಉತ್ತಮ ಸಾಧನೆ ತೋರಿದೆ.

ಪರೀಕ್ಷೆಗೆ ಹಾಜರಾದ ಒಟ್ಟು 3626 ವಿದ್ಯಾರ್ಥಿಗಳ ಪೈಕಿ 3383 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 243 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. 2021–22ನೇ ಸಾಲಿನಲ್ಲಿ ತಾಲೂಕಿಗೆ ಶೇ.91 ಹಾಗೂ 22–23ನೇ ಸಾಲಿನಲ್ಲಿ 87.75 ರಷ್ಟು ಫಲಿತಾಂಶ ಬಂದಿತ್ತು. ಪ್ರಸಕ್ತ ಸಾಲಿನಲ್ಲಿ ಶೇ.93.29 ರಷ್ಟು ಫಲಿತಾಂಶ ಬಂದಿದ್ದು, ತಾಲೂಕು ಉತ್ತಮ ಶೈಕ್ಷಣಿಕ ಪ್ರಗತಿ ಸಾಧಿಸುವತ್ತ ಮುಂದಡಿ ಇಟ್ಟಿದೆ ಎಂದು ಸುದ್ದಿಗೋಷ್ಠಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ 1779 ಬಾಲಕರ ಪೈಕಿ 1605 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.90.22 ರಷ್ಟು ಫಲಿತಾಂಶ ಬಂದರೆ, 1847 ಬಾಲಕಿಯರ ಪೈಕಿ 1778 ಮಂದಿ ಉತ್ತೀರ್ಣರಾಗಿ ಶೇ. 96.32 ಫಲಿತಾಂಶ ದೊರಕಿದೆ ಎಂದರು.

ಸೆಂಟ್ರಲ್ ಸ್ಕೂಲ್‌ಗೆ ಶೇ.100ರಷ್ಟು ಫಲಿತಾಂಶ

ತಿ.ನರಸೀಪುರ, ಮೇ 9– ತಾಲೂಕಿನ ಸೋಮನಾಥಪುರ ಕುಳ್ಳನ ಕೊಪ್ಪಲು ಗೇಟ್ ಬಳಿಯ ಆರೋಹಣ ಸೆಂಟ್ರಲ್ ಸ್ಕೂಲ್‌ಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ದೊರೆತಿದೆ. ಪರೀಕ್ಷೆಗೆ ಹಾಜರಾಗಿದ್ದ ಶಾಲೆಯ 15 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಈ ಪೈಕಿ ಮೂವರು ಉನ್ನತ ಮತ್ತು ಉಳಿದ 12 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಸಂಸ್ಥೆ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ ತಿಳಿಸಿದ್ದಾರೆ.


ಹೆಚ್.ಆರ್.ಶಿವಕುಮಾರ್


ಹೆಚ್.ಆರ್.ಶಿವಕುಮಾರ್ ಪ್ರಥಮ: ಬನ್ನೂರು ವಿವೇಕಾನಂದ ಆಂಗ್ಲ ಶಾಲೆ ವಿದ್ಯಾರ್ಥಿ ಹೆಚ್.ಆರ್.ಶಿವಕುಮಾರ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 618 ಅಂಕ ಪಡೆಯುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದು, ಉಳಿದಂತೆ ಅದೇ ಶಾಲೆಯ ಕೆ.ಎಸ್.ಪೂರ್ವಿಕ ಹಾಗೂ ಆರ್.ಸುಹಾಸ್ ತಲಾ 606 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ತಿ.ನರಸೀಪುರದ ಪಿ.ವಿ.ಶಿಲ್ಪಶ್ರೀ ಹಾಗೂ ವಿ.ವರ್ಷಿಣಿ ತಲಾ 604 ಅಂಕ ಪಡೆದರೆ, ಅತ್ತಹಳ್ಳಿ ಸರ್ಕಾರಿ ಶಾಲೆಯ ಆರ್.ಸ್ಫೂರ್ತಿ 598, ಸೋಸಲೆ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ತನ್ಮಯಿ 597, ಸರ್ಕಾರಿ ಬಾಲಕಿಯರ ಶಾಲೆಯ ಪೂರ್ಣಿಮಾ ಹಾಗೂ ಆದರ್ಶ ವಿದ್ಯಾಲಯದ ಕೆ.ಗೌತಮ್ ರೆಡ್ಡಿ 596 ಅಂಕ ಪಡೆದಿದ್ದಾರೆ. ರಂಗಸಮುದ್ರ ಪ್ರೌಢಶಾಲೆ ವಿದ್ಯಾರ್ಥಿ ಪೃಥ್ವಿ, ಬನ್ನೂರು ಆದಿಚುಂಚನಗಿರಿ ಶಾಲೆಯ ಹರ್ಷಿತಾ, ಸೋಸಲೆ ಆದರ್ಶ ವಿದ್ಯಾಲಯದ ಪ್ರಗತಿ ಹಾಗೂ ಬನ್ನೂರು ವಿವೇಕಾನಂದ ಸಂಸ್ಥೆಯ ಬಿ.ಎಸ್.ಮಹೇಶ್ ತಲಾ 595 ಅಂಕ ಪಡೆದಿದ್ದಾರೆ. ಸೋಸಲೆ ಆದರ್ಶ ವಿದ್ಯಾಲಯದ ಸಂಕಲ್ಪ ಹಾಗೂ ಪಟ್ಟಣದ ಆದಿಚುಂಚನಗಿರಿ ಬಾಲಜಗತ್ ಶಾಲೆಯ ಕೆ.ದೀಪಶ್ರೀ 594 ಅಂಕ ಪಡೆದು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಜಿ.ಶೋಭಾ ತಿಳಿಸಿದ್ದಾರೆ.

ಅನುತ್ತೀರ್ಣ ವಿದ್ಯಾರ್ಥಿಗಳು ಧೃತಿಗೆಡಬೇಡಿ

ಈ ಶೈಕ್ಷಣಿಕ ಸಾಲಿನಲ್ಲಿ 13 ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿ ವೆಬ್ ಕಾಸ್ಟಿಂಗ್ ಮೂಲಕ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಲಾಗಿತ್ತು. ಇಂತಹ ಸಂದರ್ಭದಲ್ಲಿಯೂ ಸಹ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಗಳಿಸಿ ದಾಖಲೆ ಮಾಡಿದ್ದಾರೆ. ತಾಲೂಕಿನ ಎಲ್ಲಾ ಪ್ರೌಢಶಾಲೆ ಮುಖ್ಯ ಶಿಕ್ಷಕರು ಮತ್ತು ಸಹಶಿಕ್ಷಕರು ಪರಿಶ್ರಮವಹಿಸಿ ಕಾಳಜಿಯಿಂದ ಕೆಲಸ ಮಾಡಿದ ಪರಿಣಾಮ ತಾಲೂಕಿಗೆ ಉತ್ತಮ ಫಲಿತಾಂಶ ಬಂದಿದೆ. ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಅಭಿನಂದನೆಗಳು ಹಾಗೂ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ಪರೀಕ್ಷೆ–2 ರಲ್ಲಿ ನೋಂದಣಿ ಮಾಡಿ, ಕುಗ್ಗದೆ ಧೈರ್ಯವಾಗಿ ಮತ್ತೆ ಪರೀಕ್ಷೆಯನ್ನು ಬರೆದು ಜೀವನ ರೂಪಿಸಿಕೊಳ್ಳಬೇಕು.


-ಶೋಭಾ, ಬಿಇಓ

ಡಿಟಿಎಂಎನ್ ಶಾಲೆಯಲ್ಲಿ ಶೇ.100 ತೇರ್ಗಡೆ



ಬೆಟ್ಟದಪುರ, ಮೇ 9– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬೆಟ್ಟದಪುರದ ಡಿಟಿಎಂಎನ್ ಶಾಲೆ ಸತತ 19 ಬಾರಿ ಶೇ.100 ರಷ್ಟು ಫಲಿತಾಂಶ ಪಡೆದಿದೆ.

ಈ ಸಾಲಿನಲ್ಲಿ 80 ಮಂದಿ ಪರೀಕ್ಷೆ ಬರೆದಿದ್ದು, ಆ ಪೈಕಿ 14 ಮಂದಿ ಶೇ.90ರಷ್ಟು, 15 ಮಂದಿ ಶೇ.85 ರಷ್ಟು, 40 ಮಂದಿ ಪ್ರಥಮ ದರ್ಜೆ, 11 ಮಂದಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಪರೀಕ್ಷೆಯಲ್ಲಿ ಶಾಲೆಯ ವಿದ್ಯಾರ್ಥಿನಿ ಗುಣಶ್ರೀ 625ಕ್ಕೆ 608 ಅಂಕಗಳನ್ನು ಪಡೆಯುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಇನ್ನು ಶಾಲೆಯ ವಿದ್ಯಾರ್ಥಿ ಡಿ.ಶ್ರೀನಿವಾಸ್ 594 ಅಂಕ ಪಡೆದಿದ್ದಾನೆ. ತಾಲೂಕಿಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಗುಣಶ್ರೀಯನ್ನು ಡಿಟಿಎಂಎನ್ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಸಂಸ್ಥೆ ಅಧ್ಯಕ್ಷ ಚಂದ್ರಶೇಖರ್, ಆಡಳಿತಾಧಿಕಾರಿ ನಟರಾಜ್, ಶಿಕ್ಷಕರಾದ ವಿಜಯ್ ಕುಮಾರ್, ಸತೀಶ್ ಹಾಗೂ ಮುರಳಿ ಇನ್ನಿತರರಿದ್ದರು.

ನಂ.ಗೂಡಿಗೆ 5ನೇ ಸ್ಥಾನ: ಶೇ.86.74 ಫಲಿತಾಂಶ

ನಂಜನಗೂಡು, ಮೇ 9– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಂಜನಗೂಡು ತಾಲೂಕಿಗೆ ಶೇ.86.74 ರಷ್ಟು ಫಲಿತಾಂಶ ಬಂದಿದ್ದು, ಜಿಲ್ಲೆಗೆ ತಾಲೂಕು 5ನೇ ಸ್ಥಾನ ಪಡೆದಿದೆ.



ತಾಲೂಕಿನ ಹುಲ್ಲಹಳ್ಳಿ ಗ್ರಾಮದ ನಿವಾಸಿ, ಪ್ರಾಥಮಿಕ ಶಾಲಾ ಶಿಕ್ಷಕ ಮಂಜುನಾಥ್ ಹಾಗೂ ಕಲ್ಪನ ದಂಪತಿ ಪುತ್ರಿ ಹಾಗೂ ದೇಬೂರು ಆದರ್ಶ ಶಾಲೆ ವಿದ್ಯಾರ್ಥಿನಿ ಎಚ್.ಎಂ.ಬಾಂಧವ್ಯ 618(ಶೇ.98.88) ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ನಗರದ ಕಾರ್ಮೆಲ್ ಶಾಲೆ ವಿದ್ಯಾರ್ಥಿಗಳಾದ ಭರಣಿ ಚಂದ್ರ 615 ಹಾಗೂ ಕೆ.ಚಿತ್ರಸ್ಫೂರ್ತಿ 614 ಅಂಕ ಪಡೆದು ಕ್ರಮವಾಗಿ ತಾಲೂಕಿಗೆ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ. ಸಿಟಿಜನ್ ಶಾಲೆ ವಿದ್ಯಾರ್ಥಿಗಳಾದ ಶೃತಿ ಜೆ.ಕಶ್ಯಪ್ ಹಾಗೂ ಎಸ್.ಯುಕ್ತ 612 ಅಂಕ ಪಡೆದು ನಂತರದ ಸ್ಥಾನದಲ್ಲಿದ್ದಾರೆ. ಅಲ್ಲದೇ ತಾಲೂಕಿನ ವಿವಿಧ ಶಾಲೆಯ 23 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ.

ಉಳಿದಂತೆ ತಾಲೂಕಿನಲ್ಲಿ 2370 ಬಾಲಕರು ಹಾಗೂ 2336 ಬಾಲಕಿಯರು ಸೇರಿದಂತೆ ಒಟ್ಟು 4706 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 1938 ಬಾಲಕರು ಹಾಗೂ 2144 ಬಾಲಕಿಯರು ಸೇರಿದಂತೆ ಒಟ್ಟು 4082 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ಆ ಮೂಲಕ ತಾಲೂಕಿಗೆ ಶೇ.86.74 ಫಲಿತಾಂಶ ಲಭಿಸಿದೆ ಎಂದು ಎಸ್‌ಎಸ್‌ಎಲ್‌ಸಿ ನೋಡಲ್ ಅಧಿಕಾರಿ ರಮೇಶ್ ತಿಳಿಸಿದ್ದಾರೆ.

9ನೇ ಬಾರಿ ಶೇ.100 ಫಲಿತಾಂಶ: ತಾಲೂಕಿನ ಸಿಂಧುವಳ್ಳಿ ಹೊರವಲಯದಲ್ಲಿರುವ ಶ್ರೀಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಸತತ 9ನೇ ಬಾರಿ ಶೇ.100 ಫಲಿತಾಂಶ ಬಂದಿದೆ. ಕಳೆದ 9 ವರ್ಷಗಳಲ್ಲಿ ಯಾವೊಬ್ಬ ವಿದ್ಯಾರ್ಥಿಯೂ ಅನುತ್ತೀರ್ಣರಾಗದೇ ಎಲ್ಲರೂ ಉತ್ತೀರ್ಣರಾಗುವ ಮೂಲಕ ಈ ವಸತಿ ಶಾಲೆ ಜಿಲ್ಲೆಯ ಗಮನ ಸೆಳೆದಿದೆ.

ಪ್ರಸಕ್ತ ಬಾರಿ 48 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದು, ಇದರಲ್ಲಿ ಇಬ್ಬರು ಉನ್ನತ ಶ್ರೇಣಿ, 42 ಪ್ರಥಮ ದರ್ಜೆ ಹಾಗೂ 4 ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಸಿದ್ದರಾಜು ತಿಳಿಸಿದ್ದಾರೆ.

ಶ್ರೀಆದಿಚುಂಚನಗಿರಿ ಪ್ರೌಢಶಾಲೆಗೆ ಶೇ.98ರಷ್ಟು ತೇರ್ಗಡೆ


ವಸಂತ ಎಚ್. ಕೆ.


ವೀಣಾ ಅಯ್ಯರ್

ಹೆಚ್.ಡಿ.ಕೋಟೆ, ಮೇ 9– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಟ್ಟಣದ ಶ್ರೀಆದಿಚುಂಚನಗಿರಿ ಪ್ರೌಢ ಶಾಲೆಗೆ (ಆಂಗ್ಲ ಮಾಧ್ಯಮ) ಶೇ.98 ಫಲಿತಾಂಶ ಬಂದಿದೆ. ತಾಲೂಕಿನ ಸೊಳ್ಳೆಪುರ ಗ್ರಾಮದ ಕೃಷ್ಣನಾಯಕ, ಲಕ್ಷ್ಮಿಬಾಯಿ ದಂಪತಿ ಪುತ್ರಿ ಹೆಚ್.ಕೆ.ವಸಂತ 611, ಬಿಚನಹಳ್ಳಿ ಗ್ರಾಮದ ಭಾಸ್ಕರ್, ಸರಸ್ವತಿ ದಂಪತಿ ಪುತ್ರಿ ವೀಣಾ ಅಯ್ಯರ್ 610 ಅಂಕ ಪಡೆದಿದ್ದಾರೆ.

ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆಗೆ ಶೇ.97.56 ಫಲಿತಾಂಶ


ಮಾದೇವಿ


ಸೌಮ್ಯ


ಮಾಲಾ

ಮೂಗೂರು, ಮೇ 9– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆಗೆ 97.56% ಫಲಿತಾಂಶ ಲಭಿಸಿದೆ.

ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 123 ವಿದ್ಯಾರ್ಥಿಗಳಲ್ಲಿ 120 ಮಂದಿ ಉತ್ತೀರ್ಣರಾಗಿದ್ದಾರೆ. 43 ಪ್ರಥಮ, 37 ದ್ವಿತೀಯ, 21 ತೃತಿಯ, ಉನ್ನತ ಶ್ರೇಣಿಯಲ್ಲಿ 19 ಮಂದಿ ಉತ್ತೀರ್ಣರಾಗಿರುತ್ತಾರೆ. ಶಾಲೆಯ ಮಾದೇವಿ 579, ಸೌಮ್ಯ ಬಿ. 560, ಮಾಲಾ ಎಂ.556 ಅಂಕಗಳನ್ನು ಪಡೆದು ತೇರ್ಗಡೆಯಾಗಿದ್ದಾರೆ. ಅಲ್ಲದೇ ಗಣಿತ ವಿಷಯದಲ್ಲಿ ಶೇ 100ರಷ್ಟು ಫಲಿತಾಂಶ ಬಂದಿದೆ ಎಂದು ಶಾಲೆಯ ಉಪ ಪ್ರಾಂಶುಪಾಲ ಸಿ. ಪುಟ್ಟಸ್ವಾಮಿ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ: ಶ್ರಾವಣಿಗೆ 554 ಅಂಕ



ಕಂಪಲಾಪುರ, ಮೇ 9– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇಲ್ಲಿನ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಎಸ್.ಶ್ರಾವಣಿ 554 ಅಂಕ ಗಳಿಸಿದ್ದಾಳೆ. ಈಕೆ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ, ಪತ್ರಕರ್ತ ಸದಾಶಿವ ಅವರ ಪುತ್ರಿ.

ಉಳಿದಂತೆ ರಾಕೇಶ್ 514, ಹೇಮಂತ್ 501, ಸುಶ್ಮಿತಾ 479, ಮಹಾಲಕ್ಷ್ಮಿ 479 ಅಂಕ ಗಳಿಸಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ ಶಾಲೆಯ 83 ವಿದ್ಯಾರ್ಥಿಗಳ ಪೈಕಿ 49 ಮಂದಿ ಉತ್ತೀರ್ಣರಾಗಿದ್ದು, ಶೇ.51.83 ರಷ್ಟು ಫಲಿತಾಂಶ ಬಂದಿದ್ದು, ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಶಾಲೆಯ ಶಿಕ್ಷಕರು ಅಭಿನಂದಿಸಿದ್ದಾರೆ.

ನಾಳೆ ವಿ.ಶ್ರೀನಿವಾಸಪ್ರಸಾದ್ ಪುಣ್ಯಾನುಮೋದನಾ ಕಾರ್ಯಕ್ರಮ


ಸುದ್ದಿಗೋಷ್ಠಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ ಮಾತನಾಡಿದರು.

ತಿ.ನರಸೀಪುರ, ಮೇ 9– ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮೇ 11ರಂದು ವಿ.ಶ್ರೀನಿವಾಸ ಪ್ರಸಾದ್ ಅವರ ಪುಣ್ಯಾನುಮೋದನಾ ಕಾರ್ಯಕ್ರಮ ನಡೆಯಲಿದೆ ಎಂದು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ದಲಿತರ ಸೂರ್ಯ ದಿ.ವಿ.ಶ್ರೀನಿವಾಸ ಪ್ರಸಾದ್ ಅವರ ಪುಣ್ಯಾನುಮೋದನಾ ಕಾರ್ಯಕ್ರಮ ನಡೆಯಲಿದ್ದು, ತಾಲೂಕಿನ ವಿ.ಶ್ರೀನಿವಾಸಪ್ರಸಾದ್ ಅಭಿಮಾನಿಗಳು, ಗ್ರಾಪಂ ಸದಸ್ಯರು, ಗ್ರಾಮದ ಯಜಮಾನರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೆ ಸಹಕರಿಸುವಂತೆ ಮನವಿ ಮಾಡಿದರು.

ಸಂವಿಧಾನದ ಆಶಯ, ನ್ಯಾಯ, ಸ್ವತಂತ್ರ, ಸಮಾನತೆ, ಸಹೋದರತ್ವದ ತಳಹದಿ ಆಧಾರದ ಮೇಲೆ ವಿ.ಶ್ರೀನಿವಾಸ್‌ಪ್ರಸಾದ್ ಜೀವನ ನಡೆಸಿದ್ದು, ಅವರು ಸರ್ವರ ಏಳಿಗೆ, ಪ್ರಗತಿಗೆ ದುಡಿದಿದ್ದರು ಎಂದು ಸ್ಮರಿಸಿದರು.

ಪ್ರಸಾದ್ ಅವರು ನಿರ್ದಿಷ್ಟವಾಗಿ ಯಾರನ್ನೂ ಜಾತಿ, ಮತ, ಪಂಥದ ಆಧಾರದ ಮೇಲೆ ಗುರುತಿಸಿದವರಲ್ಲ. ಅವರ ಬಳಿ ಬಂದ ಯಾರಿಗಾದರೂ ಭಗವಾನ್ ಗೌತಮ ಬುದ್ಧರ ಪ್ರೀತಿ ಸಹನೆ, ಮೈತ್ರಿ, ಕರುಣೆ ಸಮಚಿತ್ತ ಮನೋಭಾವ ಹೊಂದಿ ಸಹಾಯ ಮಾಡುತ್ತಿದ್ದರು. ಭಗವಾನ್ ಗೌತಮ ಬುದ್ಧ, ಅಶೋಕ ಮಹಾರಾಜ, ಬಸವಣ್ಣ, ಡಾ.ಬಿ.ಆರ್.ಅಂಬೇಡ್ಕರ್ ಅವರು ತೋರಿದ ಹಾದಿಯಲ್ಲಿ ನಡೆದಿದ್ದರು. ಅವರ ಅಗಲಿಕೆ ಸಮಾಜಕ್ಕೆ ತುಂಬಲಾರದ ನಷ್ಟ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ, ಹಿರಿಯ ಮುಖಂಡ ಎಂ.ಕೆ.ಸಿದ್ದರಾಜು, ಎಸ್ಸಿ ಎಸ್ಟಿ ಹಿತರಕ್ಷಣಾ ಸಮಿತಿ ಸದಸ್ಯ ಸೋಸಲೆ ಮಹದೇವಸ್ವಾಮಿ, ತಾಪಂ ಮಾಜಿ ಸದಸ್ಯರಾದ ಎಂ.ಎಸ್.ಬಸವರಾಜು, ಪ್ರಸನ್ನ, ಕುಕ್ಕುರು ಗಣೇಶ್, ರಾಮಲಿಂಗಯ್ಯ, ಬಸವರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಮಹೇಶ್, ದಸಂಸ ಜಿಲ್ಲಾ ಸಂಚಾಲಕ ಶಶಿಕಾಂತ್, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ನಂಜುಂಡಯ್ಯ, ತುಂಬಲ ಮಂಜುನಾಥ್ ಹಾಜರಿದ್ದರು.

ಪ್ರಜ್ವಲ್ ರೇವಣ್ಣ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ಪ್ರಜ್ವಲ್ ರೇವಣ್ಣ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಹುಣಸೂರು, ಮೇ 9– ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಿ, ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸೋಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಕಲ್ಪತರು ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಪ್ರಜ್ವಲ್ ರೇವಣ್ಣ, ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಡಿಪಿಐ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಸೈಯದ್ ಅಕ್ಬರ್ ಮಾತನಾಡಿ, ಲೈಂಗಿಕ ಹಗರಣ ಪ್ರಕರಣದಲ್ಲಿ ಸಂಸದ ಪ್ರಜ್ವಲ್ ರೇವಣ್ಣ ಭಾಗಿಯಾಗಿರುವುದು ಖಂಡನೀಯ. ಕೋಮು ದ್ವೇಷ ಹರಡುವ ಏಕೈಕ ಉದ್ದೇಶದಿಂದ ಹುಬ್ಬಳ್ಳಿಯ ನೇಹಾ ಪ್ರಕರಣವನ್ನು ದೊಡ್ಡದು ಮಾಡಿದವರು ಪ್ರಜ್ವಲ್ ಕುರಿತು ಒಂದೇ ಒಂದು ಹೋರಾಟ ಮಾಡುತ್ತಿಲ್ಲ. ಈ ಪ್ರಕರಣದಲ್ಲಿ ನೊಂದಿರುವ ಮಹಿಳೆಯರು ಹಿಂದೂಗಳಲ್ಲವೇ ಎಂದು ಪ್ರಶ್ನಿಸಿದರು.

ಮೈಸೂರು ಗ್ರಾಮಾಂತರ ಜಿಲ್ಲಾ ಸಮಿತಿ ಸದಸ್ಯ ಜೆ.ಮಹದೇವ ಮಾತನಾಡಿ, ಸಂಸದ ಪ್ರಜ್ವಲ್ ರೇವಣ್ಣ ಎಸಗಿರುವ ಲೈಂಗಿಕ ದೌರ್ಜನ್ಯ ಅತ್ಯಂತ ಪೈಶಾಚಿಕ ಕೃತ್ಯ. ಆತನನ್ನು ಬಿಜೆಪಿ ರಕ್ಷಣೆ ಮಾಡುತ್ತಿದೆ. ಈ ಪ್ರಕರಣವನ್ನು ಅಂತರರಾಷ್ಟ್ರೀಯ ಮಾಧ್ಯಮಗಳು ಖಂಡಿಸಿವೆ. ಪ್ರಜ್ವಲ್ ರೇವಣ್ಣ ತುಂಬಾ ಪ್ರಭಾವಿಯಾಗಿರುವುದರಿಂದ ನ್ಯಾಯಾಲಯ ಆತನಿಗೆ ಜಾಮೀನು ನೀಡಬಾರದು. ಅಲ್ಲದೇ ಸಂತ್ರಸ್ತರಿಗೆ ಸರ್ಕಾರ ಸೂಕ್ತ ರಕ್ಷಣೆ ನೀಡಬೇಕು. ಅಲ್ಲದೇ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಯಾಖತ್ ಅಲಿ, ಸಮಿತಿ ಸದಸ್ಯ ಮಹಮ್ಮದ್ ತಬ್ರೇಜ್, ನಗರಸಭೆ ಸದಸ್ಯ ಸಮೀನಾ ಇಮ್ರಾನ್, ಅಕ್ಮಲ್, ತಂಝೀನ್, ಇಮ್ದಾದ್ ಇನ್ನಿತರರಿದ್ದರು.

ಕೋಟೆ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀನಿವಾಸಪ್ರಸಾದ್‌ಗೆ ಶ್ರದ್ಧಾಂಜಲಿ


ಹೆಚ್.ಡಿ.ಕೋಟೆ ಕಾಂಗ್ರೆಸ್ ಕಚೇರಿಯಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹೆಚ್.ಡಿ.ಕೋಟೆ, ಮೇ 9– ಯಾವುದೇ ಕಪ್ಪುಚುಕ್ಕೆ ಇಲ್ಲದ ಹಾಗೇ ರಾಜಕಾರಣ ಮಾಡಿದ ಧೀಮಂತ ನಾಯಕ ವಿ.ಶ್ರೀನಿವಾಸಪ್ರಸಾದ್ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ವಿ.ಶ್ರೀನಿವಾಸಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ನಾನು ಶ್ರೀನಿವಾಸಪ್ರಸಾದ್ ಅವರನ್ನು ಮೊದಲ ಬಾರಿ ಭೇಟಿ ಮಾಡಿದಾಗ, ನಮ್ಮ ತಂದೆ ಚಿಕ್ಕಮಾದು ಅವರ ಬಗ್ಗೆ ಉತ್ತಮವಾದ ಮಾತನಾಡಿ, ನಿಮ್ಮ ತಂದೆ ಚಿಕ್ಕಮಾದು ಅವರಂತೆ ಮಾದರಿ ವ್ಯಕ್ತಿಯಾಗು ಎಂದು ಆಶೀರ್ವದಿಸಿದ್ದರು ಎಂದರು. ತಮ್ಮ 50 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಧ್ವನಿ ಇಲ್ಲದವರ ಪರವಾಗಿ ಧ್ವನಿಯಾಗಿ ನಿಂತು ಬಡವರ ಆಶಾಕಿರಣವಾಗಿ ಸಮಾಜದ ಏಳಿಗೆಗಾಗಿ ಶ್ರಮಿಸಿದ್ದರು. ಬಡ ಕುಟುಂಬಗಳಿಗೆ ಸರ್ಕಾರದಿಂದ ಬರುವ ಅನುದಾನ, ಸವಲತ್ತುಗಳನ್ನು ಕೊಡಿಸುವ ನಿಟ್ಟಿನಲ್ಲಿ ಮುಂದಾಗಿದ್ದರು ಎಂದರು. ಇದೇ ವೇಳೆ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಇದೇ ತಿಂಗಳು ಪಕ್ಷಾತೀತ, ಜಾತ್ಯಾತೀತವಾಗಿ ನುಡಿನಮನ ಸಲ್ಲಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಕೋಟೆ, ಸರಗೂರು ಬ್ಲಾಕ್ ಕಾಂಗ್ರೆಸ್ ತಾಲೂಕು ಅಧ್ಯಕ್ಷರಾದ ಏಜಾಜ್ ಪಾಷ, ಮಾದಪ್ಪ, ಜಿಪಂ ಮಾಜಿ ಸದಸ್ಯೆ ನಂದಿನಿ, ಮಹಿಳಾ ಅಧ್ಯಕ್ಷೆ ಸೌಮ್ಯ, ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಪುರಸಭಾ ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಪ್ರೇಮಸಾಗರ, ರಾಜು, ಮೈಮುಲ್ ನಿರ್ದೇಶಕ ಈರೇಗೌಡ, ಮುಖಂಡರಾದ ಅಶೋಕ್, ಪ್ರಕಾಶ್, ಚಾಮರಾಜು, ಕೆಂಡಗಣ್ಣಸ್ವಾಮಿ, ವಿರೇಗೌಡ, ಶಿವಣ್ಣ, ವೇಣು, ಗುರು ಸ್ವಾಮಿ, ಸ್ವಾಮಿಗೌಡ, ರಾಮಚಂದ್ರ, ಶಿವಯ್ಯ, ಮಂಜು, ಮಾರ್ಕಂಡಯ್ಯ, ಲಾರಿ ಪ್ರಕಾಶ್, ಸಣ್ಣ ದೇವಣ್ಣ, ಶಫಿ, ಜಗದೀಶ್, ಮಲ್ಲೇಶ್, ವೆಂಕಿ, ರಘು, ಸುದರ್ಶನ್, ರಾಜು, ಕಾಳಕಲ್ಕರ್, ಮಹದೇವಪ್ಪ, ಶಿವಯ್ಯ, ವೇಣು ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಾಲ್ಟರ್ ವೀರಯ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಂಜನೀಪುತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ 4 (ಕ)	4 ಪ್ರದರ್ಶನಗಳು
ಸಂಗಂ	
ಗ್ರೇ ಗೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅರಮನೈ 4 (ತ)	4 ಪ್ರದರ್ಶನಗಳು
ಪ್ರಭಾ	
ನೈಟ್‌ಕರ್ಫ್ಯೂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಬಾಯ್ ಅಂಡ್ ದಿ ಹೆರಾನ್ (ಜ): ಬೆ.11.20ಕ್ಕೆ, ಸಂ.4.20ಕ್ಕೆ, ಗ್ರೇ ಗೇಮ್ಸ್ (ಕ): ಮ.1.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.40ಕ್ಕೆ, ಸ್ಟಾರ್ (ತ): ಮ.1ಕ್ಕೆ, ಸಂ.4.05ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಅಲೈಕ್ಯಾ (ಕ): ಬೆ.10.55ಕ್ಕೆ, ಪವರ್ (ಕ): ಮ.1.15ಕ್ಕೆ, ಶ್ರೀಕಾಂತ್ (ಹಿಂ): ಸಂ.4.30ಕ್ಕೆ, ರಾ.7.10ಕ್ಕೆ, ಕೃಷ್ಣಮ್ಮ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರೋಟರಿ ವಿದ್ಯಾಸಂಸ್ಥೆಗೆ 100 ರಷ್ಟು ಫಲಿತಾಂಶ

ಹುಣಸೂರು, ಮೇ 9– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಗರದ ರೋಟರಿ ವಿದ್ಯಾಸಂಸ್ಥೆ ಸತತ ಮೂರನೇ ವರ್ಷವೂ 100ರಷ್ಟು ಫಲಿತಾಂಶ ಪಡೆದಿದೆ.

ಶಾಲೆಯಲ್ಲಿ ಪರೀಕ್ಷೆ ಬರೆದಿದ್ದ 51 ವಿದ್ಯಾರ್ಥಿಗಳ ಪೈಕಿ 10 ಡಿಸ್ಟಿಂಕ್ಷನ್, 30 ಪ್ರಥಮ, 8 ದ್ವಿತೀಯ, 3 ತೃತಿಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈ ಫಲಿತಾಂಶಕ್ಕೆ ಕಾರಣರಾದ ರೋಟರಿ ಶಾಲೆಯ ಎಲ್ಲಾ ಶಿಕ್ಷಕ ವೃಂದ, ಶಾಲಾ ಆಡಳಿತ ಮಂಡಳಿಯನ್ನು ಹುಣಸೂರು ರೋಟರಿ ಕ್ಲಬ್ ಅಧ್ಯಕ್ಷ ಚನ್ನಕೇಶವ ಹಾಗೂ ಕಾರ್ಯದರ್ಶಿ ಪ್ರಸನ್ನ ಅಭಿನಂದಿಸಿದ್ದಾರೆ.

ಎಸ್.ಲಿಂಗಯ್ಯ ನಿಧನ



ನಂಜನಗೂಡು, ಮೇ 9– ಪಟ್ಟಣದ ಹೌಸಿಂಗ್ ಬೋರ್ಡ್ ನಿವಾಸಿ ಎಸ್.ಲಿಂಗಯ್ಯ (83) ಗುರುವಾರ ನಿಧನರಾದರು. ಮೃತರು ಪತ್ನಿ ಗೌರಮ್ಮ, ನಾಲ್ವರು ಪುತ್ರರು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮ ಚಾಮರಾಜನಗರ ಜಿಲ್ಲೆ ಬಿಸಲವಾಡಿ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೊಡ್ಡಸ್ವಾಮಿಗೌಡ



ಹಿರಿಕ್ಯಾತನಹಳ್ಳಿ, ಮೇ 9– ಗ್ರಾಮದ ನಿವಾಸಿ ದೊಡ್ಡಸ್ವಾಮಿಗೌಡ(72) ಗುರುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.